ಅಧ್ಯಾತ್ಮಗ್ರಂಥಾವಳಿ

# ಪರಿಪೂರ್ಣದರ್ಶನ

ಶ್ರೀಶಂಕರಭಗವತ್ಪಾದರವರ ಮತಾನುಸಾರಿಯಾದ
ವೇದಾಂತವೊಂದೇ ಪರಿಪೂರ್ಣದರ್ಶನವೆಂದು
ತಿಳಿಸಿಕೊಡುವ ಉಪದೇಶಗಳು

ಬರೆದವರು :
**ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ ೧೯

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1983

# ಮುನ್ನುಡಿ

ಪ್ಲವಸಂವತ್ಸರದ (1961) ವೈಶಾಖಮಾಸದಲ್ಲಿ ಹೊಳೆನರಸೀಪುರದಲ್ಲಿ ನಡೆದ ಶ್ರೀಶಂಕರಸಪ್ತಾಹದಲ್ಲಿ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಅನುಗ್ರಹಿಸಿದ ಉಪದೇಶಗಳಿವು. ಇವುಗಳನ್ನು ಪುಸ್ತಕರೂಪದಲ್ಲಿ ಎರಡನೆಯ ಬಾರಿಗೆ ಓದುಗರಿಗೆ ಅರ್ಪಿಸಿರುತ್ತೇವೆ.

ಆಚಾರ್ಯರ ವೇದಾಂತಪ್ರಕ್ರಿಯೆಯನ್ನು ಕುರಿತ ಗ್ರಂಥಗಳು ಕೆಲವು ಆಗಲೆ ಹೊರಕ್ಕೆ ಬಂದಿವೆಯಾದರೂ ಈ ಚಿಕ್ಕಪುಸ್ತಕದಲ್ಲಿರುವ ವಿಷಯವು ಬೇರೊಂದು ದೃಷ್ಟಿಕೋಣದಿಂದ ಬರೆದದ್ದಾಗಿರುತ್ತದೆ. ಇದು ಆಧುನಿಕ ವಿದ್ಯಾಭ್ಯಾಸದ ತಿಳಿವಳಿಕೆಯಿಂದ ಸಂಸ್ಕೃತವಾಗಿರುವ ಮನಸ್ಸುಳ್ಳ ಜಿಜ್ಞಾಸುಗಳಿಗೆ ಆಚಾರ್ಯರ ಮೂಲಗ್ರಂಥಗಳನ್ನು ಓದಬೇಕೆಂಬ ಹಸಿವನ್ನುಂಟುಮಾಡುವಂತೆ ಇದೆ.

ಆಚಾರ್ಯರು ಉಪದೇಶಿಸಿರುವ ವೇದಾಂತದ ಆಳವನ್ನು ಕಾಣಬೇಕೆಂಬ ಕುತೂಹಲವುಳ್ಳ ಜನರಿಗೆ ಅದರ ವಿಶೇಷವನ್ನು ನಿಷ್ಕೃಷ್ಟವಾಗಿ ತಿಳಿಸಿ ಉಪಕಾರವನ್ನು ಮಾಡಬಲ್ಲ ಹೊತ್ತಗೆಯಿದು.

ತಿಪಟೂರಿನ ಸುಪ್ರಸಿದ್ಧ ಕೊಬ್ಬರಿ ಮಂಡಿ ವರ್ತಕರಾದ ಶ್ರೀ|| ಬಿ. ಎಂ. ರಾಮಯ್ಯನವರು ತಮ್ಮ ಧರ್ಮಪತ್ನಿಯವರಾದ ಶ್ರೀಮತಿ ಸೌ|| ಲಲಿತಾಂಬರವರ ಕೊಡುಗೆಯಾಗಿ ಈ ಗ್ರಂಥಪ್ರಕಟನೆಗೆ ಒಂದು ಸಾವಿರ ರೂ. ಗಳನ್ನು ದಾನಮಾಡಿದ್ದಾರೆ. ಈ ಮಹನೀಯರಿಗೆ ಭಗವತ್ಪಾದರವರ ಪೂರ್ಣಾನುಗ್ರಹವುಂಟಾಗಲೆಂದು ಹಾರೈಸುತ್ತೇವೆ.

ಹೊಳೆನರಸೀಪುರ,<br>
1-2-1983

ಪ್ರಕಾಶಕರು.

# ವಿಷಯಗಳ ಪರಿವಿಡಿ

ವಿಷಯ


೧. ಭೌತಿಕವಿಜ್ಞಾನವೂ ವೇದಾಂತವೂ

೨. ಲೌಕಿಕವಿಜ್ಞಾನದ ಎಲ್ಲೆಕಟ್ಟು

೩. ಅಕೃತ್ಸ್ನದರ್ಶನಗಳು

೪. ಶಾಂಕರವೇದಾಂತಪ್ರಕ್ರಿಯೆಯ ವಿಶೇಷಲಕ್ಷಣಗಳು

೫. ವೇದಾಂತವು ಒಪ್ಪಿರುವ ಶಾಸ್ತ್ರ, ಪ್ರಮಾಣ, ತರ್ಕ–
ಇವುಗಳ ಸ್ವರೂಪ

೬. ಬ್ರಹ್ಮಾತ್ಮಾನುಭವ

೭. ವೇದಾಂತಜ್ಞಾನದ ಪ್ರಯೋಜನ

೮. ಉಪಸಂಹಾರ

|| ಓಂ ||

# ಪರಿಪೂರ್ಣದರ್ಶನ

## ೧. ಭೌತಿಕವಿಜ್ಞಾನವೂ ವೇದಾಂತವೂ

**ವೇದಾಂತ** ಎಂಬುದು ಜಗತ್ತಿನೊಳಗೆಲ್ಲ ಅತಿಪುರಾತನವಾದ ಧರ್ಮಗ್ರಂಥಗಳೆನಿಸಿಕೊಂಡಿರುವ ವೇದಗಳಲ್ಲಿ ಉಪನಿಷತ್ತುಗಳೆಂಬ ಹೆಸರಿನಿಂದ ಪ್ರಖ್ಯಾತವಾಗಿರುವ ಗ್ರಂಥಭಾಗಗಳಿಗೂ ಅದರಲ್ಲಡಕವಾಗಿರುವ ತತ್ತ್ವವಿಚಾರಕ್ಕೂ ತತ್ತ್ವಸಾಕ್ಷಾತ್ಕಾರಕ್ರಮಕ್ಕೂ ಹೆಸರು. ಉಪನಿಷತ್ತುಗಳೆಂಬ ಅರ್ಥದಲ್ಲಿ ಭಾಷ್ಯಕಾರರುಗಳು ಇದನ್ನು ಬಹುವಚನದಲ್ಲಿಯೇ ಉಪಯೋಗಿಸುವರು. ಉದಾಹರಣೆಗೆ ಶ್ರೀಶಂಕರಭಗವತ್ಪಾದರು **'ಯಥಾ ಚಾಯಮರ್ಥಃ ಸರ್ವೇಷಾಂ ವೇದಾನ್ತಾನಾಂ ತಥಾ ವಯಮಸ್ಯಾಂ ಶಾರೀರಕಮೀಮಾಂಸಾಯಾಂ ಪ್ರದರ್ಶಯಿಷ್ಯಾಮಃ'** (ಇದೇ ಎಲ್ಲಾ ವೇದಾಂತಗಳಿಗೂ ಅರ್ಥವೆಂಬುದನ್ನು ನಾವು ಈ ಶಾರೀರಕಮೀಮಾಂಸೆಯಲ್ಲಿ ತೋರಿಸಿಕೊಡುವೆವು) ಎಂದು ಬರೆದಿರುತ್ತಾರೆ. ಆಧುನಿಕಮಾನವನಿಗೆ ಈ ವೇದಾಂತದ ಆವಶ್ಯಕತೆಯಿದೆಯೆ ? ವರ್ತಮಾನಕಾಲದ ಮಾನವನು ಎಲ್ಲಾ ಬಗೆಯಿಂದಲೂ ತನ್ನ ತಿಳಿವಳಿಕೆಯನ್ನು ಹೆಚ್ಚಿಸಿಕೊಂಡು ಭೌತಿಕವಿಜ್ಞಾನಶಾಸ್ತ್ರದ ಬಲದಿಂದ ತನ್ನ ಜೀವನಕ್ರಮವನ್ನು ಮಾರ್ಪಡಿಸಿಕೊಂಡು ಸೌರವ್ಯೂಹದ ಎಲ್ಲಾ ಗ್ರಹೋಪಗ್ರಹಗಳನ್ನುಕೂಡ ನೇರಾಗಿ ಶೋಧಿಸಬಲ್ಲ ಪ್ರಜ್ಞಾಕೌಶಲ್ಯವನ್ನು ಯಂತ್ರೋಪಕರಣಗಳಿಂದ ಸಾಧಿಸಿಕೊಂಡಿರುತ್ತಾನೆ. ಹೀಗಿರುವಲ್ಲಿ ಅವನಿಗೆ ವೇದಾಂತದಿಂದ ಆಗುವದೇನು ಉಳಿದಿದೆ? ಅತಿಪ್ರಾಚೀನಕಾಲದಲ್ಲಿ ಕೆಲವು ಋಷಿಗಳು ಒಂದು ಕಡೆ ಕುಳಿತು ಮಾಡಿದ ಊಹಾಪೋಹಗಳ ರಾಶಿಯು, ಶಾಸ್ತ್ರೀಯವಾಗಿ ವಿಷಯಗಳನ್ನು ಪರೀಕ್ಷಿಸಿ ನಿಶ್ಚಯಿಸಿಕೊಳ್ಳುವ ಹಂತಕ್ಕೆ ಏರಿರುವ ಬುದ್ಧಿವಂತನಾದ ಈಗಿನಕಾಲದ ಮಾನವನಿಗೆ ಯಾವ ಉಪಕಾರವನ್ನು ಮಾಡೀತು ?

ಈ ಪ್ರಶ್ನೆಯು ಅಥವಾ ಆಕ್ಷೇಪವು, ಭೌತಿಕವಿಜ್ಞಾನದಿಂದ ಜೀವನಕ್ಕೆ ವಿವಿಧಸೌಕರ್ಯಗಳನ್ನು ಕಲ್ಪಿಸಿಕೊಂಡು ನಾಗರಿಕತೆಯಲ್ಲಿ ಮುಂದುವರಿದಿರುವವರೆಂದು ಎಲ್ಲರೂ ಭಾವಿಸುತ್ತಿರುವ ಪಾಶ್ಚಾತ್ತ್ಯರಲ್ಲಿ ಹಲವರ ಮತ್ತು, ಆ ಪಾಶ್ಚಾತ್ತ್ಯರ ಅನುಕರಣೆಯೇ ತಮಗೆ ಶ್ರೇಯಸ್ಕರವೆಂದು ದೃಢವಾಗಿ ನಂಬಿರುವ ಪೂರ್ವದೇಶಗಳವರನೇಕರ, ಪರವಾಗಿ ನಾವು ಬರೆದಿರುವದು. ಪೂರ್ವದೇಶಗಳಲ್ಲಿರುವ ಹಲವು ಜನಾಂಗಗಳು ಪಾಶ್ಚಾತ್ತ್ಯರ ನಾಗರಿಕತೆಯನ್ನು ಹೊಸದಾಗಿ ಬಳಸಿಕೊಂಡಿರುವ ವೇಗದ ಭರದಲ್ಲಿ ತಮ್ಮ ಪ್ರಾಚೀನವಾದ ಆಚಾರವಿಚಾರಗಳನ್ನು ಪೂರ ಕಿತ್ತೊಗೆದಿರುತ್ತವೆ. ಅಥವಾ ವಿದ್ಯುದ್ವೇಗದಿಂದ ಕಿತ್ತೊಗೆಯುತ್ತಿವೆ. ಅದರಲ್ಲಿಯೂ ತೃಪ್ತಿ, ಸಹನೆ, ಅಮಾನಿತ್ವ, ಪರೋಪಕಾರ, ಲೋಕಸೇವೆ, ಪರಲೋಕಪರಜನ್ಮಗಳಲ್ಲಿ ವಿಶ್ವಾಸ– ಮುಂತಾದ ಧ್ಯೇಯಗಳನ್ನು ಅನೇಕ ಶತಮಾನಗಳಿಂದ ಕಾಯ್ದುಕೊಂಡು ಬಂದಿದ್ದ ಭಾರತದೇಶದವರು ಈಗತಾನೆ ತಮಗೆ ದೊರೆತಿರುವ ಸ್ವಾತಂತ್ರ್ಯದ ಫಲವಾಗಿ ಹಳೆಯ ಆಚಾರವಿಚಾರಗಳು ತಮ್ಮ ಮುನ್ನಡೆಗೆ ಅಡ್ಡಿಯಾಗಿರುವವೆಂದೇ ಬಗೆಯುತ್ತಾ ಬಂದಿರುತ್ತಾರೆ. ಪಾಶ್ಚಾತ್ತ್ಯವಿಶ್ವಕರ್ಮವಿಶ್ವಾಮಿತ್ರ ಪರಶುರಾಮರೆನಿಸಿರುವ ಘಟಕರ ಸಂಗದಿಂದ ನಮ್ಮ ದೇಶದವರಿಗೆ ಐಹಿಕ ಸುಖದ ಆಶಾಪ್ರತೀಕ್ಷೆಗಳು ಬಲವಾಗಿವೆ, ಸ್ವಾತಂತ್ರ್ಯಪ್ರಿಯತೆಯು ಹೆಚ್ಚುತ್ತಿದೆ, ದೇಶಾಭಿಮಾನವು ಉಕ್ಕುತ್ತಿದೆ. ಇಲ್ಲಿ ರಾಜರುಗಳ ಆಳ್ವಿಕೆಯನ್ನು ಕೊನೆಗಾಣಿಸಲಾಗಿದೆ, ಪ್ರಜಾಸತ್ತೆ ಅಥವಾ ಕಷ್ಟಪಟ್ಟು ಕೆಲಸಮಾಡುವ ಜನರ ಉದ್ಧಾರ–ಇವುಗಳೇ ನಮ್ಮವರ ಗುರಿಯಾಗಿವೆ. ಪಾರ್ಲಿಮೆಂಟು, ಹೊಸಹೊಸ ಕಾನೂನುಗಳು, ಚುನಾವಣೆ, ರಾಷ್ಟ್ರಘಟನಾಸೂತ್ರಗಳು, ಅಧ್ಯಕ್ಷರು, ಸೈನ್ಯಬಲ,– ಈ ಭಾವನೆಗಳು ನಮ್ಮ ದೇಶದೊಳಕ್ಕೆ ನುಗ್ಗಿಬಿಟ್ಟಿವೆ. ಉದ್ಯೋಗದ ಚಟುವಟಿಕೆಗಳು, ಸಂಪದಭಿವೃದ್ಧಿಯ ಯೋಜನೆಗಳು, ಯಂತ್ರಗಳು, ಗಿರಣಿಗಳು, ರೈಲುಗಳು, ಅಣೆಕಟ್ಟುಗಳು, ವಿದ್ಯುಚ್ಛಕ್ತಿಕೇಂದ್ರಗಳು–ಇಂಥ ನೂತನಮಯಾಸುರನ ಶಿಲ್ಪಚಾತುರ್ಯಗಳು ಅತಿವೇಗದಿಂದ ಸಾಗಿವೆ. ವಿದ್ಯಾಶಾಲೆಗಳಲ್ಲಿ ಧರ್ಮನೀತಿಗಳ ಬೋಧೆಯು ಕೂಡದೆಂಬ ರಾಷ್ಟ್ರಶಾಸನವಾಗಿದೆ.' ಹಳೆಯ ನಂಬಿಕೆಗಳು ಮಾಯವಾಗಿವೆ. ನಮ್ಮದು ಜಾತ್ಯತೀತರಾಷ್ಟ್ರವಾಗಿದೆ. ಇಲ್ಲಿ ಸಮಾಜದ ವೇಷಭೂಷಣಗಳ

ರೂಪವು ವೇಗದಿಂದ ಮಾರ್ಪಡುತ್ತಿದೆ. ವಿವಾಹದ ಮತ್ತು ಭೋಜನದ ನಿಯಮಗಳ ಕಟ್ಟು ಸಡಿಲವಾಗಿದೆ; ಜನರ ಸಂಚಾರವೂ ದೇಶವಿದೇಶಗಳಿಗೆ ಪ್ರಯಾಣಗಳೂ, ಹೊಸ ವಿಚಾರಗಳ ಅವಲಂಬನೆಯೂ ವೃತ್ತಾಂತಪತ್ರಿಕೆಗಳ ಪಾರಾಯಣವೂ ಜನರ ವಿಚಾರಗಳನ್ನು ಕಲಕುವ ಭಾಷಣಗಳ ಸುರಿಮಳೆಗಳೂ ಹೆಚ್ಚುತ್ತಿವೆ. ಅಂತೂ ಕೂಡಿದಮಟ್ಟಿಗೂ ನಮ್ಮ ದೇಶಕ್ಕೆಲ್ಲ ಪಾಶ್ಚಾತ್ಯದೇಶಗಳ ಬಣ್ಣವನ್ನು ಬಳಿದದ್ದಾಗಿದೆ.

ಇದು ನಿರೀಕ್ಷಕರ ಕಣ್ಮನಗಳಿಗೆ ಗೋಚರವಾಗುತ್ತಿರುವ ದೃಶ್ಯಗಳ ಒಂದು ಪಕ್ಕ. ಈಗ ಇನ್ನೊಂದು ಪಕ್ಕದ ಕಡೆಗೆ ದೃಷ್ಟಿಯನ್ನು ಹೊರಳಿಸೋಣ. ದೇಶದಲ್ಲಿ ಜನಸಂಖ್ಯೆ ಬೆಳೆಯುತ್ತಿದೆ, ಜನಕ್ಕೆ ಉದ್ಯೋಗಗಳೇನೂ ಅಷ್ಟುಮಟ್ಟಿಗೆ ಸಿಕ್ಕುತ್ತಿಲ್ಲ. ವಿನೋದಸಾಮಗ್ರಿಗಳು ಹೆಚ್ಚಾಗುತ್ತಿವೆ, ಆಹಾರವು ತಕ್ಕಷ್ಟು ಸಿಕ್ಕುತ್ತಲಿಲ್ಲ. ಜೀವನದ ಮಟ್ಟವು ರೂಪಾಯಿಗಳ ಆದಾಯದ ದೃಷ್ಟಿಯಿಂದ ಹೆಚ್ಚುತ್ತಿದೆ; ಆದರೆ ಸರಕಾರದ ತೆರಿಗೆಗಳ ಸಂಖ್ಯೆಗಳೂ ಹೆಚ್ಚುತ್ತಿವೆ, ರೂಪಾಯಿಗೆ ಕೊಳ್ಳುವ ಯೋಗ್ಯತೆಯೂ ಕಡಿಮೆಯಾಗುತ್ತಲೇ ಇದೆ. ರಾಜಕೀಯವಿಚಾರಗಳು ಹೆಚ್ಚುತ್ತಿವೆ, ಪ್ರಜೆಗಳಿಗೆ ನೆಮ್ಮದಿಯೇನೂ ಹೆಚ್ಚುತ್ತಿಲ್ಲ. ಜಾತಿಕುಲಗಳ ಕಟ್ಟುಗಳೇನೋ ಹೋಗಿವೆ, ಜನರಲ್ಲಿ ಒಡಕುಗಳೇನೂ ಕಡಿಮೆಯಾಗಿಲ್ಲ. ಸ್ಕೂಲುಕಾಲೇಜುಗಳೇನೋ ಹೆಚ್ಚುತ್ತಿವೆ, ವಿದ್ಯಾರ್ಥಿಗಳ ತಿಳಿವಳಿಕೆಯ ಮಟ್ಟವು ಕಡಿಮೆಯಾಗುತ್ತಲೇ ಹೋಗುತ್ತಿದೆ. ಜನನಾಯಕರ ನೀತಿಬೋಧನೆಯ ಭಾಷಣಗಳು ಆಗುತ್ತಲೇ ಇವೆ; ಸರಕಾರಿಯ ಹೊಣೆಗಾರನೌಕರರ ನೀತಿಭ್ರಷ್ಟತನದ ಅಂಟುರೋಗವು ಹೆಚ್ಚುತ್ತಲೇ ಇದೆ. ವಿದ್ಯಾರ್ಥಿಗಳ ಮತ್ತು ಜನರ ಅತೃಪ್ತಿಪ್ರದರ್ಶಕವಾದ ಮುಷ್ಕರಗಳೂ ದಂಗೆಗಳೂ ಕಾಣಿಸಿಕೊಳ್ಳುತ್ತಲೇ ಇವೆ. ವೈದ್ಯಕೀಯ ಸಹಾಯವು ಹೆಚ್ಚುತ್ತಿದೆ, ರೋಗಗಳೇನೂ ಕಡಿಮೆಯಾಗಿಲ್ಲ. ಭಾಷಾನುಗುಣವಾಗಿ ದೇಶಗಳನ್ನು ವಿಭಾಗಿಸಿ ಭಾಷಾಭಿವೃದ್ಧಿಗೆ ಅನುಕೂಲ್ಯವನ್ನು ಕಲ್ಪಿಸಲಾಗಿದೆ; ಆದರೆ ಭಾಷಾಭಕ್ತಿಯ ನೆಪದಲ್ಲಿಯೇ ಹೊಡೆದಾಟಗಳು ಎದ್ದುಕೊಂಡಿವೆ! ಈ ದೃಷ್ಟಿಯಿಂದ ನೋಡುವ ಜನರು ನಮ್ಮ ದೇಶದಲ್ಲಿ ಉಂಟಾಗಿರುವ ನವಜಾಗೃತಿಯು ಭೌತಿಕವಿಜ್ಞಾನದಿಂದ ನಮ್ಮ ತಿಳಿವಳಿಕೆಯು

ಹೆಚ್ಚುತ್ತಿದೆಯಾದರೂ ನೀತಿಯ ತತ್ತ್ವ, ಗುರುಹಿರಿಯರಲ್ಲಿ ಭಕ್ತಿ, ಶಾಸ್ತ್ರದಲ್ಲಿ ಶ್ರದ್ಧೆ, ಈಶ್ವರಾಸ್ತಿತ್ವದಲ್ಲಿ ನಂಬಿಕೆ– ಇವೇ ಮುಂತಾದ ಬೆಲೆಯುಳ್ಳ ಆಧ್ಯಾತ್ಮಿಕ ವರ್ತನೆಗಳನ್ನು ಬೋಧಿಸುತ್ತಿದ್ದ ಮತಗಳೂ ಇರುವದು ಒಳ್ಳೆಯದೆಂದು ಭಾವಿಸುತ್ತಿದಾರೆ. ಯಾವನು ಯಾವ ಮತಕ್ಕೇ ಸೇರಿರಲಿ, ಅವನ ಧರ್ಮವು ಭೌತಿಕವಿಜ್ಞಾನಕ್ಕೆ ಹೊಂದಿಕೆಯಾಗಿರಬೇಕಾದದ್ದು ಮಾತ್ರ ಅವಶ್ಯ–ಎಂದು ಅವರ ಅಭಿಪ್ರಾಯ. ಭೌತಿಕವಿಜ್ಞಾನವು ಪ್ರತ್ಯಕ್ಷವಾಗಿ ಜನರಿಗೆ ಉಪಕಾರವನ್ನು ಮಾಡುತ್ತಿರುವದನ್ನು ಅಲ್ಲಗಳೆಯುವದಕ್ಕೆ ಆಗುವದಿಲ್ಲ; ಇದರಂತೆ ಮತಗಳ ಉಪದೇಶವನ್ನು ಕಡೆಗಣಿಸುವದಕ್ಕೂ ಆಗುವದಿಲ್ಲ. ಆದ್ದರಿಂದ ಕಾಲಕ್ಕೆ ತಕ್ಕಂತೆ ಅಂಧಶ್ರದ್ಧೆಯನ್ನೂ ಮೂಢವಿಶ್ವಾಸಗಳನ್ನೂ ಕಿತ್ತುಹಾಕಿ, ಪ್ರಾಚೀನಮತಬೋಧಗಳಲ್ಲಿರುವದರಲ್ಲಿ ಯಾವಯಾವದು ಭೌತಿಕವಿಜ್ಞಾನಕ್ಕೆ ಅವಿರುದ್ಧವಾಗಿರುವದೋ ಅವನ್ನು ಉಳಿಸಿಕೊಳ್ಳುವದು ಯುಕ್ತ ಎನ್ನುತ್ತಿದ್ದಾರೆ, ಅವರು.

ವೇದಾಂತಕ್ಕೂ ಅದರ ಆಧಾರದಮೇಲೆ ನಿಂತಿರುವ ಸನಾತನಧರ್ಮಕ್ಕೂ ಈ ಹಿತವಾದವು ಎಷ್ಟರಮಟ್ಟಿಗೆ ಅನ್ವಯಿಸುತ್ತದೆ?–ಎಂಬುದನ್ನು ವಿಚಾರಿಸುವದು ಅವಶ್ಯ. ಏಕೆಂದರೆ ಮಿಕ್ಕ ಧರ್ಮಗಳಂತೆ ಸನಾತನಧರ್ಮದಲ್ಲಿ ಎಂದಿಗೂ ಶಾಸ್ತ್ರೀಯವಿಚಾರಗಳನ್ನು ಅಲಕ್ಷಿಸಿರಲಿಲ್ಲ. ಪಾಶ್ಚಾತ್ಯದೇಶಗಳಲ್ಲಿ ಕ್ರಿಸ್ತಿಯನ್ ಮತಕ್ಕೆ ಆಧಾರವಾಗಿರುವ ಬೈಬಲುಗ್ರಂಥದಲ್ಲಿ ಹೇಳಿರುವ ವಿಷಯಗಳಿಗೆ ವಿರುದ್ಧವಾಗಿವೆಯೆಂದು ಭಾವಿಸಲಾದ ಶೋಧಗಳನ್ನು ಮಾಡಿದ ವಿಜ್ಞಾನಿಗಳಿಗೆ ಚಿತ್ರವಿಚಿತ್ರ ಹಿಂಸೆಗಳನ್ನು ಕಲ್ಪಿಸಲಾಗಿತ್ತು. ಅವರನ್ನು ಸಮಾಜದಿಂದ ಹೊರದೂಡಲಾಗುತ್ತಿತ್ತು. ಇತ್ತೀಚೆಗೆ ಭೌತಿಕವಿಜ್ಞಾನವು ಬೆಳೆದಂತೆಲ್ಲ ಧಾರ್ಮಿಕವಿಚಾರಗಳಲ್ಲಿಯೂ ಈಶ್ವರ, ಜೀವ, ಲೋಕಾಂತರ–ಮುಂತಾದವುಗಳಲ್ಲಿಯೂ ಜನರಿಗೆ ಅನಾದರವೇ ಹೆಚ್ಚುತ್ತ ಬಂದಿತು. ಕ್ರಿಸ್ತಿಯನ್ ಧರ್ಮವು ಭೌತಿಕವಿಜ್ಞಾನಕ್ಕೆ ವಿರೋಧಿಯೆಂದೇ ಅನೇಕರು ಬಗೆದು ಅದನ್ನು ಕಡೆಗಣಿಸುವದಕ್ಕೆ ಮೊದಲುಮಾಡಿದರು. ಈ ಕಾರಣಗಳಿಂದ ಆ ದೇಶಗಳಲ್ಲಿ ಮತಧರ್ಮಗಳಿಗೂ ವಿಜ್ಞಾನಕ್ಕೂ ತಿಕ್ಕಾಟವು ಎದ್ದುಕೊಂಡದ್ದು ಸ್ವಾಭಾವಿಕವಾಗಿರುತ್ತದೆ. ನಮ್ಮ ದೇಶದಲ್ಲಿ ಹಾಗಿಲ್ಲ. ಅತ್ಯಂತವಿರಕ್ತರಾಗಿ ಕಾಡಿನಲ್ಲಿ ಗೆಡ್ಡೆಗೆಣಸುಗಳನ್ನು ತಿಂದು, ನಾರುಡೆಯನ್ನು

ಉಟ್ಟು, ಅಧ್ಯಾತ್ಮಚಿಂತನೆಯಲ್ಲಿ ಕಾಲವನ್ನು ಕಳೆಯುತ್ತಿದ್ದ ಋಷಿಗಳೇ ಜ್ಯೋತಿಷ, ಗಣಿತ, ಸಂಗೀತ, ಶಿಲ್ಪ, ಚಿತ್ರಕಲೆ, ವೈದ್ಯ, ರಾಜನೀತಿ-ಮುಂತಾದ ಲೌಕಿಕವಿಷಯಗಳಲ್ಲಿಯೂ ಗ್ರಂಥಗಳನ್ನು ಬರೆದು ಲೋಕೋಪಕಾರವನ್ನು ಮಾಡಿರುತ್ತಾರೆ. ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಚತುಷ್ಟಯವು ಅಧಿಕಾರತಾರತಮ್ಯದಿಂದ ಜನರಿಗೆ ಬೇಕಾಗಿವೆ-ಎಂಬುದನ್ನು ಒಪ್ಪಿ, ಅವರವರ ಅಭಿರುಚಿಗೆ ತಕ್ಕಂತೆ ಅವರವರಿಗೆ ಬೇಕಾದ ತಿಳಿವಳಿಕೆಯನ್ನು ಒದಗಿಸಿಕೊಟ್ಟಿರುತ್ತಾರೆ. ಇಹಪರಲೋಕಗಳ ಸುಖವನ್ನು ಭೋಗಿಸುವುದರಲ್ಲಿ ವಿರಕ್ತನಾದವನೇ ವೇದಾಂತವಿಜ್ಞಾನಕ್ಕೆ ಅಧಿಕಾರಿಯಾಗಿರುತ್ತಾನೆಂಬ ತತ್ತ್ವವನ್ನು ಅವಲಂಬಿಸಿದ್ದರಿಂದ ಸನಾತನಧರ್ಮದಲ್ಲಿ ಧರ್ಮಾವಿರುದ್ಧವಾದ ಅರ್ಥಕಾಮಗಳ ವಿಷಯದ ತಿಳಿವಳಿಕೆಯು ಮೊದಲು ಎಲ್ಲರಿಗೂ ಅತ್ಯವಶ್ಯವೆಂಬುದು ಧರ್ಮಶಾಸ್ತ್ರಪ್ರವರ್ತಕರಿಗೂ ಒಪ್ಪಾದ ಜೀವನಸೂತ್ರವಾಗಿರುತ್ತದೆ.

ಇನ್ನೊಂದು ಮಾತು. ವೇದಾಂತವೆಂಬುದು ಸರ್ವಶಾಸ್ತ್ರಗಳಿಂದಲೂ ವೇದ್ಯವಾಗಿರುವ ವಿಷಯಗಳ ತಿರುಳನ್ನೇ ಕುರಿತದ್ದಾಗಿರುತ್ತದೆ. ಏಕೆಂದರೆ ಯಾವದೊಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ ಆಗುತ್ತದೆ ?- ಎಂಬುದೇ ವೇದಾಂತದಲ್ಲಿ ಹೇಳಿರುವ ಬ್ರಹ್ಮವಿದ್ಯೆಯ ಪ್ರಥಮಪ್ರಶ್ನೆ. **'ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ'** (ಮುಂ, ೧-೧-೨) ಸರ್ವವಿದ್ಯೆಗಳ ಅಭಿವ್ಯಕ್ತಿಗೂ ಕಾರಣವಾಗಿ, ಸರ್ವವಿದ್ಯೆಗಳಿಗೂ ಆಶ್ರಯವಾಗಿ, ಸರ್ವವಿದ್ಯೆಗಳಿಂದಲೂ ಕೊನೆಯಲ್ಲಿ ತಿಳಿಯಬೇಕಾಗಿರುವ ವಸ್ತುತತ್ತ್ವವನ್ನೇ ತಿಳಿಸುವದರಿಂದ ವೇದಾಂತದಲ್ಲಿ ಹೇಳಿರುವ ಬ್ರಹ್ಮವಿದ್ಯೆಗೆ 'ಸರ್ವವಿದ್ಯಾಪ್ರತಿಷ್ಠಾ' ಎಂದು ಹೆಸರಾಗಿರುತ್ತದೆ. ಹೀಗೆ ಎಲ್ಲಾ ದೃಷ್ಟಿಯಿಂದಲೂ ಪರಿಪೂರ್ಣವಾಗಿರುವ ವೇದಾಂತಕ್ಕೆ ತನ್ನದೊಂದು ಅಂಶವಾಗಿರುವ ಭೌತಿಕವಿಜ್ಞಾನದ ವಿಷಯಕ್ಕೆ ವಿರೋಧವೆಲ್ಲಿಂದ ಬರಬೇಕು ? ವೇದಾಂತವೆಂಬುದು ಪರಿಪೂರ್ಣಶಾಸ್ತ್ರ, ತರ್ಕಾನುಭವಗಳನ್ನು ಅನುಸರಿಸಿ ತತ್ತ್ವವನ್ನು ಶೋಧಿಸುವವರಿಗೇ ತಿಳಿಯುವ ಬ್ರಹ್ಮವಿದ್ಯೆಯನ್ನು ತಿಳಿಸುವ ಶಾಸ್ತ್ರವದು. ಹೀಗಿರುವಲ್ಲಿ ಯುಕ್ತ್ಯನುಭವಗಳಿಗೆ ಹೊಂದುಗಡೆ

ಯಾದದ್ದನ್ನೇ ಹಿಡಿಯಬೇಕೆಂಬ ಸೂತ್ರವನ್ನನುಸರಿಸುವ ಲೌಕಿಕವಿಜ್ಞಾನ ಶಾಸ್ತ್ರಕ್ಕೆ ಅದು ಹೇಗೆತಾನೆ ಅಡ್ಡಬಂದೀತು ?

ಜ್ಞೇಯದ ಏಕದೇಶವನ್ನು ಮಾತ್ರ ವಿಷಯೀಕರಿಸಿ ವಿಚಾರಕ್ಕೆ ಹೊರಟಿರುವ ಕಾರಣದಿಂದ ಮಾತ್ರವೇ ಅಲ್ಲ, ಅದು ಅವಲಂಬಿಸಿರುವ ದೃಷ್ಟಿ ವಿಶೇಷದಿಂದ ಮತ್ತು ಪ್ರಕ್ರಿಯಾವಿಶೇಷದಿಂದ ನೋಡಿದರೂ ಭೌತಿಕವಿಜ್ಞಾನ ಶಾಸ್ತ್ರವು ವೇದಾಂತಕ್ಕೆ ಅವಿರುದ್ಧವಾಗಿರುತ್ತದೆ. ಭೌತಿಕಶಾಸ್ತ್ರಕ್ಕೆ **'ಪರಾಗ್ದೃಷ್ಟಿ'** (ಹೊರಗಣ್ಣು) ಮುಖ್ಯ. ಇಂದ್ರಿಯಗಳಿಂದಲೂ ಇಂದ್ರಿಯಗಳಿಗೆ ಸಹಕಾರಿಯಾಗಿರುವ ಯಂತ್ರಾದ್ಯುಪಕರಣಗಳಿಂದಲೂ ಜ್ಞೇಯವಸ್ತುಗಳನ್ನು ಬಗೆಬಗೆಯಾಗಿ ನಿಟ್ಟಿಸಿನೋಡಿ, ಬಗೆಬಗೆಯ ಪ್ರಯೋಗಗಳಿಂದ ಅವುಗಳ ಸ್ವಭಾವವನ್ನು ಪರೀಕ್ಷಿಸಿ, ಹಾಗೆ ಪರೀಕ್ಷಿಸಿ ಕಂಡುಕೊಂಡದ್ದನ್ನು ಸಜಾತೀಯವಾದ ಮಿಕ್ಕ ಜ್ಞಾತತತ್ತ್ವಗಳಿಗೆ ಹೊಂದುಗಡೆಮಾಡುವದೇ ಲೌಕಿಕವಿಜ್ಞಾನಶಾಸ್ತ್ರದ **ಪ್ರಕ್ರಿಯೆ.** ಆದರೆ ವೇದಾಂತವಿಜ್ಞಾನಶಾಸ್ತ್ರವು ವಿಚಾರಿಸುವದಕ್ಕೆ ತೆಗೆದುಕೊಂಡಿರುವದು ಜ್ಞೇಯರಾಶಿಯಲ್ಲ, ಆ ಜ್ಞೇಯವನ್ನು ಅರಿಯುವಾತನ ತತ್ತ್ವವಾದ ಆತ್ಮನೇ ಅದಕ್ಕೆ ವಿಷಯ. ಆತ್ಮತತ್ತ್ವವನ್ನು ಪರಿಶೀಲಿಸುವದಕ್ಕೆ ಅದು ಅವಲಂಬಿಸಿರುವದು ಪರಾಗ್ದೃಷ್ಟಿಯಲ್ಲ, **ಪ್ರತ್ಯಗ್ದೃಷ್ಟಿ** (ಒಳಗಣ್ಣು). ಆ ದೃಷ್ಟಿಗೆ ಮತ್ತೆ ಯಾವ ಸಾಧನಗಳೂ ಬೇಕಿರುವದಿಲ್ಲ, ಅದಕ್ಕೆ ನೇರವಾದ **ಅನುಭವವೇ** ಸಾಕಾಗಿರುತ್ತದೆ. ಆ ದೃಷ್ಟಿಯಿಂದ ಕಂಡುಕೊಂಡ ಅನುಭವವಿಶೇಷಗಳನ್ನು ಒಂದಕ್ಕೊಂದನ್ನು ಹೊಂದಿಸಿ ಸಿದ್ಧಾಂತವನ್ನು ಮಾಡಿಕೊಳ್ಳುವದಕ್ಕೆ ಅವಲಂಬಿಸಿರುವ ಪ್ರಕ್ರಿಯೆಯೂ ಬೇರೆಯಾಗಿರುತ್ತದೆ. ಹೀಗೆ ವಿಚಾರಣೀಯ ವಿಷಯ, ಅವಲಂಬಿಸಿರುವ ದೃಷ್ಟಿ, ವಿಮರ್ಶಪ್ರಕ್ರಿಯೆ– ಇವುಗಳೆಲ್ಲ ಅತ್ಯಂತಭಿನ್ನವಾಗಿರುವದರಿಂದಲೂ ವೇದಾಂತವಿಜ್ಞಾನಶಾಸ್ತ್ರಗಳಿಗೆ ಎಲ್ಲಾ ಬಗೆಯಿಂದಲೂ ಅವಿರೋಧವಿರುತ್ತದೆ.

ಇಲ್ಲೊಂದು ಪ್ರಶ್ನೆ; ವೇದಾಂತಕ್ಕೂ ವಿಜ್ಞಾನಶಾಸ್ತ್ರಕ್ಕೂ ಹೀಗೆ ವಿಷಯಗಳು ಬೇರೆಬೇರೆಯೇ ಆಗಿದ್ದರೆ ವಿಜ್ಞಾನಶಾಸ್ತ್ರದ ವಿಷಯವನ್ನು ತನ್ನಲ್ಲಿ ಅಡಕಮಾಡಿಕೊಂಡಿರುವದೆಂಬ ಹೇಳಿಕೆ ಹೇಗೆ ಸರಿ ? ಈ ಎರಡು

ಶಾಸ್ತ್ರಗಳ ವಿಷಯಗಳು ಬೇರೆಬೇರೆಯೇ ಆಗಿರುವದರಿಂದ ಇವೆರಡೂ ಬೇರೆ ಬೇರೆಯೇ ಎಂದು ತಿಳಿಯುವದು ಯುಕ್ತವಲ್ಲವೆ ? ಈ ಎರಡು ಶಾಸ್ತ್ರಗಳೂ ಅವಲಂಬಿಸಿರುವ ದೃಷ್ಟಿಗಳು ಪೂರ್ವಪಶ್ಚಿಮಗಳಂತೆ ವಿರುದ್ಧವಾದ ದಿಕ್ಕಿನಲ್ಲಿ ಹೊರಟಿರುವದರಿಂದ ಇವೆರಡರ ಫಲಿತಾಂಶಗಳೂ ವಿರುದ್ಧವಾಗಿಯೇ ಇರಬೇಕಲ್ಲವೆ ? ಈ ಎರಡು ದೃಷ್ಟಿಗಳೊಳಗೆ ಯಾವದು ಸರಿಯಾದದ್ದು ಎಂಬುವದನ್ನು ನಿಶ್ಚಯಿಸಿಕೊಳ್ಳದೆ ಎರಡೂ ಒಂದೇ ಎಂದು ಹೇಳುವದು ಯುಕ್ತವಾದೀತೆ ? ಭೌತಿಕವಿಜ್ಞಾನಶಾಸ್ತ್ರವು ಕಂಡುಹಿಡಿದಿರುವ ಹೊಸಹೊಸ ಸಾಧನಗಳು ಮನುಷ್ಯಜೀವನಕ್ಕೆ ಹೊಸಹೊಸ ಮೆರುಗನ್ನು ಕೊಟ್ಟು ಉಪಕಾರಮಾಡುತ್ತಿವೆ. ವೇದಾಂತವು ಜೀವನಕ್ಕೆ ಬೇಕಾದ ಅಂಥ ಯಾವ ಉಪಕಾರಕಾಂಶವನ್ನು ಕಂಡುಹಿಡಿದಿದೆ ?

ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವದಕ್ಕೆ ಅನುಕೂಲಿಸುವ ಒಂದು ದೃಷ್ಟಾಂತವನ್ನು ಕೊಡಬಹುದು. ವಿಜ್ಞಾನಶಾಸ್ತ್ರದಲ್ಲಿಯೇ ಏಕದೇಶವಾಗಿರುವ ಪದಾರ್ಥಸ್ವಭಾವಶಾಸ್ತ್ರ (Physics), ಪದಾರ್ಥರಚನಾಶಾಸ್ತ್ರ (Chemistry)- ಇವೆರಡೂ ಒಂದೇ ವಸ್ತುವನ್ನು ಕುರಿತು ವಿಚಾರಮಾಡಿದರೂ ವಸ್ತುವಿನ ಸ್ವಭಾವ, ಶಕ್ತಿ, ಬಗೆಬಗೆಯ ಶಕ್ತಿಗಳಿಂದ ವಸ್ತುವಿನ ಮೇಲೆ ಆಗುವ ಪರಿಣಾಮ- ಇಂಥ ಹೊರಗಿನ ವಿಚಾರವನ್ನೇ ಮೊದಲನೆಯ ಶಾಸ್ತ್ರವಿಭಾಗವು ಕೈಗೊಂಡಿರುತ್ತದೆ ; ಆ ವಸ್ತುವನ್ನು ವಿಶ್ಲೇಷಣಮಾಡಿ ಅದರೊಳಗಿನ ಮೂಲಧಾತುಗಳು, ಅವುಗಳು ಸಂಯುಕ್ತವಾಗಿ ವಸ್ತುರಚನೆಯಾಗಿರುವ ಕ್ರಮ, ಆ ಧಾತುಗಳಲ್ಲಿ ಬೇರೆಬೇರೆಯ ಉಪಾಧಿಯಿಂದಾಗುವ ವಿಶೇಷ ವಿಕ್ರಿಯೆಗಳು ಇಂಥ ಒಳಗಿನ ವಿಚಾರವನ್ನೇ ಎರಡನೆಯ ಶಾಸ್ತ್ರವು ಕೈಕೊಂಡಿರುತ್ತದೆ. ಅಲ್ಲವೆ ? ಇದರಂತೆ ಲೌಕಿಕ ವಿಜ್ಞಾನಶಾಸ್ತ್ರವು ಪರಾಗ್ದೃಷ್ಟಿಯಿಂದ ಪ್ರಪಂಚದ ತಿರುಳಾದ ಪರಮಾರ್ಥದ ಒಂದೊಂದು ವಿಶೇಷವನ್ನು ತಿಳಿಸಿಕೊಡುವ ಅನೇಕ ಶಾಸ್ತ್ರವಿಭಾಗಗಳಾಗಿ ಒಡೆದುಕೊಂಡು ತೋರುತ್ತಿದ್ದರೂ ವೇದಾಂತವು ಇಡಿಯ ಪ್ರಪಂಚದ ತಿರುಳನ್ನೇ ಪ್ರತ್ಯಗ್ದೃಷ್ಟಿಯಿಂದ ತಿಳಿಯಿಸಿಕೊಟ್ಟರೆ ಆ ಅರ್ಥದಲ್ಲಿ ಅದು ಆ ಎಲ್ಲಾ ವಿಷಯವಿಶೇಷಗಳನ್ನೂ ತನ್ನಲ್ಲಿ ಅಡಕಮಾಡಿಕೊಂಡಿದೆ ಎಂದು ಹೇಳಬಹುದಾಗಿದೆ; ದೃಷ್ಟಿಭೇದದಿಂದ ಫಲಭೇದವೂ ಇರಬಹುದಾಗಿದೆ.

ಲೌಕಿಕವಿಜ್ಞಾನಶಾಸ್ತ್ರವು ವ್ಯವಹಾರಕ್ಕೆ ಹೊಂದುವ ಪರಾಗ್ದೃಷ್ಟಿಯನ್ನೇ ಅವಲಂಬಿಸಿರುವದರಿಂದ ವ್ಯವಹಾರದಲ್ಲಿ ಮನುಷ್ಯನ ಜೀವನಕ್ಕೆ ಆಗಬಹುದಾದ ಪ್ರಯೋಜನಗಳನ್ನು ಒದಗಿಸಿಕೊಡುತ್ತದೆ. ವೇದಾಂತವು ತತ್ತ್ವನಿರ್ಧಾರಣವನ್ನು ಮಾಡುವದೆಂಬ ಮಹಾಪ್ರಯೋಜನವನ್ನು ಗುರಿಯಲ್ಲಿಟ್ಟುಕೊಂಡಿರುವದರಿಂದ ಆ ಪ್ರಯೋಜನವು ಅದರಿಂದ ಆಗಿಯೇ ಆಗುತ್ತದೆ.

ವ್ಯವಹಾರದೃಷ್ಟಿಯಿಂದ ನೋಡಿದರೂ ವೇದಾಂತದ ತಿಳಿವಳಿಕೆಯಿಂದ ಬೆಲೆಯುಳ್ಳ ಪ್ರಯೋಜನವು ಆಗುತ್ತದೆ ಎನ್ನಬೇಕು. **'ತತ್ರ ಕೋ ಮೋಹಃ ಕಃ ಶೋಕಃ'** (ಈ. ೭), **'ಅಭಯಂ ವೈ ಜನಕ ಪ್ರಾಪ್ತೋಽಸಿ'** (ಬೃ. ೪-೨-೪)– ಮುಂತಾದ ಶ್ರುತಿಗಳು ಹೊಗಳುವಂತೆ • ಶೋಕಮೋಹಭಯಾದಿಗಳನ್ನು ಮೀರುವ ಉತ್ತಮಾವಸ್ಥೆಯು ವೇದಾಂತಜ್ಞಾನದಿಂದ ಬರುತ್ತದೆ. **'ಪರಾಚಃ ಕಾಮಾನನುಯನ್ತಿ ಬಾಲಾಸ್ತೇ ಮೃತ್ಯೋರ್ಯನ್ತಿ ವಿತತಸ್ಯ ಪಾಶಮ್ । ಅಥ ಧೀರಾ ಅಮೃತತ್ವಂ ವಿದಿತ್ವಾ ಧ್ರುವಮಧ್ರುವೇಷ್ವಿಹ ನ ಪ್ರಾರ್ಥಯನ್ತೇ ॥'** (ಕ. ೨-೧-೨) 'ಅವಿವೇಕಿಗಳು ಹೊರಗಿನ ಕಾಮಗಳನ್ನೇ ಅನುಸರಿಸಿ ಮೃತ್ಯುವಿನ ಬಲೆಯೊಳಕ್ಕೆ ಬೀಳುವರು; ವಿವೇಕಿಗಳಾದವರು ಅಮೃತತ್ತ್ವವನ್ನು ಅರಿತುಕೊಂಡು ಈ ಸಂಸಾರದಲ್ಲಿ ಏನನ್ನೂ ಪ್ರಾರ್ಥಿಸದೆ ಇರುವರು' ಎಂದು ಶ್ರುತಿಯು ಹೇಳುವದು ಉಪಚಾರದ ಮಾತಲ್ಲ. ಧರ್ಮಾರ್ಥಕಾಮಗಳೆಂಬ ತ್ರಿವರ್ಗವನ್ನು ಅನುಭವಿಸಿ ಇಹಪರಸುಖಗಳಿಗೆ ಬೇಸತ್ತಿರುವ ವಿವೇಕಿಗಳಾದ ಮುಮುಕ್ಷುಗಳು ಈ ಲೋಕದಲ್ಲಿ ತಮ್ಮ ಶರೀರೇಂದ್ರಿಯಭೋಗಕ್ಕೆ ಬೇಕಾಗಿರುವ ಫಲವನ್ನೇಕೆ ಕೋರುತ್ತಾರೆ? ದೇಹೇಂದ್ರಿಯಾದಿಗಳೇ ತಾವು, ತಮ್ಮವು–ಎಂಬ ಅವಿದ್ಯೆಯಿರುವವರಿಗೆ ಹೊರಗಿನ ವಸ್ತುಗಳ ಭೋಗದಲ್ಲಿ ಕಾಮವಿರುವದು. ಆದಕ್ಕಾಗಿ ಅವರು ಕರ್ಮವನ್ನು ಮಾಡುವರು. ಧರ್ಮಕ್ಕೂ ಹೊರತಾದ ಅರ್ಥಕಾಮಗಳನ್ನು ಬಯಸುವ ಅವಿವೇಕಿಗಳಲ್ಲವೆ, ಅವಿದ್ಯಾಕಾಮಕರ್ಮಗಳೆಂಬ ಮೃತ್ಯುವಿನ ಬಲೆಯಲ್ಲಿ ಬೀಳುತ್ತಿರುವರು? ಈಗ ಭೌತಿಕವಿಜ್ಞಾನವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವ ಜನರೂ ಜನಾಂಗಗಳೂ ಜಗತ್ತನ್ನೇ ನಾಶಮಾಡುವ ಆಸುರಸಂಪತ್ತಿಗೊಳಗಾಗಿ ಎಲ್ಲರನ್ನೂ ಅಪಾರವಾದ ಅಂಜಿಕೆಯ ಕಡಲಿನಲ್ಲಿ ಮುಳುಗಿಸುತ್ತಿ

ರುವವಲ್ಲವೆ ? ವಿವೇಕಿಗಳಾದವರು 'ಮೃತ್ಯುವಿನ ಬಲೆಯಿಂದ ಪಾರಾಗುವದಕ್ಕೆ ಧರ್ಮವೊಂದೇ ಉಪಾಯ, ಆ ಧರ್ಮವನ್ನು ಅನುಸರಿಸುವದಕ್ಕೆ ವೇದಾಂತಜ್ಞಾನವೊಂದೇ ಶರಣು'–ಎಂದು ತಿಳಿದರೆ ಆಶ್ಚರ್ಯವೇನು ?

ವೇದಾಂತಜ್ಞಾನವು ಕಾಲದೇಶನಿಮಿತ್ತಗಳಿಂದ ಮಾರ್ಪಡುವದಲ್ಲ. ಕಾಲದೇಶಾತೀತವಾದ ಪರಮಾರ್ಥವನ್ನೇ ಅದು ತಿಳಿಸುವದಕ್ಕೆ ಹೊರಟಿರುವದು. ಆದ್ದರಿಂದ ಅದನ್ನು ಕಾಲಕ್ಕೆ ತಕ್ಕಂತೆ ವಿಜ್ಞಾನಶಾಸ್ತ್ರಕ್ಕೆ ಹೊಂದಿಸಿಕೊಳ್ಳಬೇಕೆಂದು ಬಗೆಯುವದು ಸರಿಯಲ್ಲ. ಕಾಲಕಾಲಕ್ಕೆ ಮಾರ್ಪಡುತ್ತಿರುವ ವಿಜ್ಞಾನಶಾಸ್ತ್ರವೇ ಕೂಟಸ್ಥನಿತ್ಯವಾದ ತತ್ತ್ವವನ್ನು ತಿಳಿಸಿಕೊಡುವ ವೇದಾಂತಶಾಸ್ತ್ರವನ್ನು ಅವಲಂಬಿಸಿಕೊಂಡು ಅದರ ಮಾರ್ಗದರ್ಶಿತ್ವದ ಬೆಳಕಿನಲ್ಲಿಯೇ ತನ್ನ ಪ್ರಯೋಜನವನ್ನು ಜನರಿಗೆ ಮಾಡಿಕೊಡುತ್ತಾ ಬಂದರೆ ಸರ್ವರಿಗೂ ಕಲ್ಯಾಣವಾದೀತು.

## ೨. ಲೌಕಿಕವಿಜ್ಞಾನದ ಎಲ್ಲೆಕಟ್ಟು

ವಿಜ್ಞಾನಶಾಸ್ತ್ರವು ಪರಾಗ್ದೃಷ್ಟಿಯನ್ನೇ ಅವಲಂಬಿಸಿ ಪ್ರಪಂಚವನ್ನು ಮೇಲುಮೇಲೆಯೇ ಪರೀಕ್ಷಿಸುತ್ತಿರುವದರಿಂದ ಅದಕ್ಕೆ ಪರಮಾರ್ಥದ ಹಾದಿ ಸಿಕ್ಕದೆ ಇರುತ್ತದೆ. ವೇದಾಂತಶಾಸ್ತ್ರದ ದಿಗ್ದರ್ಶಿತ್ವವನ್ನವಲಂಬಿಸಿಯೇ ಅದನ್ನು ಬಳಸಿಕೊಳ್ಳುವದು ಜನರ ಕಲ್ಯಾಣಕ್ಕೆ ಕಾರಣವಾದೀತು ಎಂದು ತಿಳಿಸಿದ್ದಾಯಿತು. ಈಗ ಸರಿಯಾಗಿ ನೋಡಿದರೆ ವಿಜ್ಞಾನಶಾಸ್ತ್ರವೆಂಬುದು ಶಾಸ್ತ್ರಾಭಾಸವೇ, ಸಿದ್ಧಾಂತವನ್ನು ಹೇಳುವ ವ್ಯವಸ್ಥಿತಪ್ರಕ್ರಿಯೆಯೇ ಅದಕ್ಕಿಲ್ಲ- ಎಂಬುದನ್ನು ಸ್ವಲ್ಪ ತೋರಿಸಿಕೊಡಬೇಕಾಗಿದೆ.

'ಕೆಮಿಸ್ಟ್ರಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಪದಾರ್ಥರಚನಾ ಶಾಸ್ತ್ರವು ವಸ್ತುಗಳನ್ನು ಮೂಲಧಾತುಗಳು, ಸುಸಂಯುಕ್ತವಸ್ತುಗಳು– ಎಂದು ಎರಡು ರಾಶಿಗಳಾಗಿ ವಿಂಗಡಿಸಿಕೊಂಡಿತ್ತು. ಆ ಶಾಸ್ತ್ರವನ್ನು ಓದಿದವರು ಧಾತುವಿದ್ಯೆಯನ್ನು ಹಾಸ್ಯಮಾಡುತ್ತಿದ್ದರು ; ಪಾದರಸದಿಂದ ಚಿನ್ನವನ್ನು ಮಾಡಬಹುದೆಂದು ಆ ವಿದ್ಯೆಯನ್ನು ಬಲ್ಲವರು ಹೇಳಿದ್ದನ್ನು ಕೇಳಿ ನಕ್ಕು, 'ಛೇ ! ಮೂಲಧಾತುಗಳು ನಿರಪೇಕ್ಷಸ್ವಾತಂತ್ರ್ಯವುಳ್ಳವು ; ಪಾದ

ರಸಕ್ಕೂ ಬಂಗಾರಕ್ಕೂ ಏನು ಸಂಬಂಧ?' ಎಂದು ಮೂಗುಮುರಿಯುತ್ತಿದ್ದರು. ಆದರೆ ಕಾಲಕ್ರಮದಲ್ಲಿ ಗಂಧಕದಲ್ಲಿ ಐದು ಭೇದಗಳಿವೆ, ಇಂಗಾಲದಲ್ಲಿ ಮೂರು ವಿಧಗಳಿವೆ, ರಂಜಕದಲ್ಲಿ ಎರಡು ಬಗೆಗಳಿವೆ- ಎಂದು ಕೆಮಿಸ್ಟ್ರಿಶಾಸ್ತ್ರಜ್ಞರಿಗೆ ತಿಳಿದುಬಂದಿತು. ಮೂಲಧಾತುವಿನಲ್ಲಿ ವಿಶೇಷವು ಹೇಗೆ ಬಂದಿತು?- ಎಂಬುದೊಂದು ಪೇಚಾಟದ ವಿಷಯವಾಯಿತು. ಆದರೆ ಶೋಧನೆಯು ಇಷ್ಟಕ್ಕೇ ನಿಲ್ಲಲಿಲ್ಲ; ಕಾಲಕ್ರಮದಲ್ಲಿ 'ಮೂಲಧಾತು' ಗಳೆಲ್ಲ ಹೈಡ್ರೊಜೆನ್ (ಜಲಜನಕ)ವೆಂಬ ಒಂದೇ ಧಾತುವಿನಿಂದ ಉತ್ಪನ್ನವಾಗುವವೆಂದು ಕಂಡುಬಂತು! ಕೆಲವು 'ಮೂಲಧಾತು' ಗಳೆನಿಸಿಕೊಂಡವು ಸಂಮಿಶ್ರಿತವಸ್ತುಗಳು ಎಂದೂ ತಿಳಿಯಿತು! ಪದಾರ್ಥಗಳು ಕೆಲವು ಅಣುಗಳಿಂದಾಗಿವೆ ಎಂದು ಮೊದಲು ತೋರುತ್ತಿದ್ದದ್ದು ಕಾಲಕ್ರಮದಲ್ಲಿ ಆ ಅಣುಗಳು ಪರಮಾಣುಗಳಿಂದಾಗಿವೆ ಎಂದು ಕಂಡುಬಂದಿತು. ಪರಮಾಣುವಿಗೆ ಆಟಮ್ ಎಂದರೆ 'ಅಖಂಡ್ಯ' ಎಂಬ ಹೆಸರಿನ್ನಿಟ್ಟರು; ಆದರೆ ಆ ಹೆಸರು ನಾಯಿಗೆ 'ಸಂಪಿಗೆ' ಎಂಬಷ್ಟು ಒಪ್ಪಾಯಿತು. ಏಕೆಂದರೆ ಪರಮಾಣುವನ್ನು ಈಚೆಗೆ ಖಂಡಿಸಲಾಗಿದೆ. ಹಾಗೆ ಅದನ್ನು ಒಡೆದದ್ದರ ಫಲವನ್ನು ಜಪಾನರು ಮೊಟ್ಟಮೊದಲು ಉಂಡರು.

**'ಫಿಸಿಕ್ಸ್'** ಎಂಬ ಅಭಿಧಾನದಿಂದ ಪ್ರಸಿದ್ಧವಾಗಿರುವ ಪದಾರ್ಥಸ್ವಭಾವಶಾಸ್ತ್ರವು ಈಗ್ಗೆ ಪ್ರಾಚೀನ, ಅರ್ವಾಚೀನ- ಎಂದು ಎರಡು ವಿಭಾಗವಾಗಿವೆ. ಶಕ್ತಿ, ಆಕರ್ಷಣಶಕ್ತಿ- ಎಂಬ ಪರಿಭಾಷೆಗಳನ್ನವಲಂಬಿಸಿದ ಪ್ರಾಚೀನ ಪದಾರ್ಥಶಾಸ್ತ್ರದ ಸಿದ್ಧಾಂತವು ಅರ್ವಾಚೀನಶಾಸ್ತ್ರದ ಕಣ್ಣಿನಲ್ಲಿ ಮಿಥ್ಯಾವಿಕಲ್ಪಮಾತ್ರವಾಗಿಬಿಟ್ಟಿದೆ. ದ್ರವ್ಯ (Matter), ಶಕ್ತಿ (force), ಕಿರಣಪ್ರಸರಣ (radiation) - ಎಂದು ಮಾಡಿಕೊಂಡಿದ್ದ ವಿಂಗಡವು ಅಷ್ಟು ತೃಪ್ತಿಕರವಾಗಿಲ್ಲವೆಂದು ಕಂಡುಬಂದಿದೆ. ವಸ್ತುವೆಂಬುದು ಅಣುಗಳಾಗಿರುವ ಬದಲು ತರಂಗಮಾತ್ರವಾಗಿರುತ್ತದೆ ಎಂಬುದು ಈಚಿನ ವಿಜ್ಞಾನಶಾಸ್ತ್ರದವರ ಅಭಿಪ್ರಾಯ. ದ್ರವ್ಯಧ್ರುವತ್ವ, ಪರಿಮಾಣಧ್ರುವತ್ವ, ಶಕ್ತಿಧ್ರುವತ್ವ- ಎಂಬಿವು ನಿತ್ಯನಿಯಮಗಳೆಂಬ ಪ್ರಾಚೀನವಿಜ್ಞಾನಶಾಸ್ತ್ರದವರ ಶ್ರದ್ಧೆಯು ಅಂಧಶ್ರದ್ಧೆಯೇ ಆಗಿಬಿಟ್ಟಿದೆ! ಬೆಳಕೆಂಬುದು ಬರಿಯ ಅಣುಪುಂಜವಾಗಿದ್ದು ಆಮೇಲೆ ಆಕಾಶದಲ್ಲಿರುವ ತರಂಗಮಾತ್ರಗಳೆಂದಾಗಿ, ಈಗೀಗ ಅದು ಕಿರಣ

ಪ್ರಸರಣವಾಗಿರುವದರಿಂದ ಈ ಎರಡೂ ಆಗಿರಬಹುದೆಂದಾಗಿದೆ. ಈಥರ್ (ether) ಆಕಾಶ ಎಂಬುದೇನೆಂಬುದೂ ವಾದಗ್ರಸ್ತವು; ಅದು ಇದೆ ಎಂದು ಕೆಲವರು, ಇಲ್ಲವೇ ಇಲ್ಲವೆಂದು ಕೆಲವರು! ಮಾತ್ರಾವಾದ (Quantum Theory), ಸಾಪೇಕ್ಷವಾದ (Theory of Relativity)- ಇವುಗಳು ತಲೆದೋರಿದಂದಿನಿಂದ ಪ್ರಕೃತಿಯನ್ನು ಯಾಂತ್ರಿಕದೃಷ್ಟಿಯಿಂದ ನೋಡ ಬಾರದು, ಕಾಲದೇಶಗಳು ಒಂದನ್ನೊಂದಗಲದೆ ಇರುತ್ತವೆಯಾಗಿ ಆಕಾಶ-ಕಾಲ ಎಂಬುದು ಒಂದೇ ವಸ್ತುತತ್ತ್ವವೆನ್ನುವದು ನ್ಯಾಯ- ಎಂಬ ಅಭಿಪ್ರಾಯಕ್ಕೆ ಬಲವು ಬಂದಿದೆ.

**ಗಣಿತಶಾಸ್ತ್ರವು** ನ್ಯೂನಾತಿರೇಕವಿಲ್ಲದಂತೆ ವಿಷಯವನ್ನು ನಿಶ್ಚಿತವಾಗಿ ತಿಳಿಸಬಲ್ಲದೆಂದು ಅನೇಕರ ನಂಬಿಕೆ. ಆದರೂ ಈ ಶಾಸ್ತ್ರದಲ್ಲಿ ಸಂಕಲನವ್ಯವಕಲನನಿಯಮಗಳನ್ನು ಕಾಲ್ಪನಿಕಸಂಖ್ಯೆಗಳಿಗೂ- ಉದಾಹರಣೆಗೆ- 3ರ ವರ್ಗಮೂಲ ಮುಂತಾದವುಗಳಿಗೂ- ಅತಿದೇಶಮಾಡಲಾಗಿದೆ. 'ಪೂರ್ಣಾಂಕಗಳು ಈಶ್ವರಸೃಷ್ಟಿ, ಮಿಕ್ಕದ್ದೆಲ್ಲವೂ ಮಾನವಸೃಷ್ಟಿ' ಎಂದು ಒಬ್ಬ ಮಹನೀಯನು ನುಡಿದಿರುತ್ತಾನಂತೆ. ಯೂಕ್ಲಿಡ್ ಎಂಬಾತನ ರೇಖಾಗಣಿತವು ಎರಡು ಸಾವಿರ ವರ್ಷಗಳು ಜನರ ಅಂತಃಕರಣದ ಮೇಲೆ ತನ್ನ ಮಾಂತ್ರಿಕಶಕ್ತಿಯನ್ನು ತೋರಿಸುತ್ತಿದ್ದು ಈಗ್ಗೆ ಒಂದು ಮೂಲೆಗೆ ಬಿದ್ದುಬಿಟ್ಟಿದೆ. ಆ ಶಾಸ್ತ್ರದಲ್ಲಿ ಮೊಟ್ಟಮೊದಲನೆಯ ಪ್ರತಿಜ್ಞೆಯಲ್ಲಿ ಎರಡು ವೃತ್ತಗಳು ಒಂದನ್ನೊಂದು ಎರಡು ಬಿಂದುಗಳಲ್ಲಿ ಕತ್ತರಿಸುತ್ತವೆ ಎಂದು ಕಲ್ಪಿಸಿರುವದು ಯಾವ ಆಧಾರದಿಂದ ?- ಎಂದು ಕೆಲವರು ಕೇಳುತ್ತಿದ್ದಾರೆ. ಹಲವು ಗಣಿತಶಾಸ್ತ್ರದ ಫಲಿತಗಳು ಯುಕ್ತಿಯಿಂದ ಸಿದ್ಧವಾಗುತ್ತವೆಯೋ, ನೈಸರ್ಗಿಕವಾದ ಅನುಭವದಿಂದ ಅವನ್ನು ಊಹಿಸಲಾಗುತ್ತಿದೆಯೋ ಹೇಳುವದು ಕಷ್ಟ. ಗಣಿತದ ಉಪಪಾದನೆಯೆಂಬುದೊಂದು ಆರಾಧ್ಯವಿಗ್ರಹ! ಗಣಿತಾನುಯಾಯಿಯು ಆ ವಿಗ್ರಹದ ಮುಂದೆ ವ್ಯರ್ಥವಾಗಿ ಸ್ವಾತ್ಮಕರ್ಷಣೆಮಾಡಿಕೊಳ್ಳುತ್ತಿರುತ್ತಾನೆ, ಆದರೆ ಅದು ತರ್ಕಬದ್ಧವೆಂದು ಮನಗಾಣುವದು ಮಾತ್ರ ಎಂದಿಗೂ ಆಗುವಂತಿಲ್ಲ, ಎಂಬರ್ಥದ ವಾಕ್ಯವೊಂದನ್ನು ಎಡ್ಡಿಂಗ್ಟನ್ (p. 337) ಎಂಬಾತನು ಬರೆದಿರುತ್ತಾನೆ.

**ಪ್ರಾಣಿಶಾಸ್ತ್ರ**ದ ವಿಕಾಸವಾದ, **ವೈದ್ಯಶಾಸ್ತ್ರ**ದ ಶೋಧನೆಯಲ್ಲಿ ಅವಲಂಬಿಸುತ್ತಿರುವ ಅಸಂಬದ್ಧಯುಕ್ತಿಗಳು, **ಅರ್ಥಶಾಸ್ತ್ರ**ದ ಅನರ್ಥಕಾರಿತ್ವ –ಇವುಗಳನ್ನೆಲ್ಲ ವಿಸ್ತರಿಸುವದಕ್ಕೆ ಇಲ್ಲಿ ಅವಕಾಶವಿಲ್ಲ. ಆದ್ದರಿಂದ ಈವರೆಗೆ ನಾವು ಅನುಸರಿಸಿರುವ ವಿಚಾರಧಾರೆಯು ಎಲ್ಲಿಗೆ ಮುಟ್ಟಿದೆ ಎಂಬುದನ್ನು ಸಂಕ್ಷೇಪವಾಗಿ ಹೇಳಿದರೆ ಸಾಕಾಗಿದೆ. ಲೌಕಿಕವಿಜ್ಞಾನಶಾಸ್ತ್ರವೆಂಬುದು ಪರಾಗ್ದೃಷ್ಟಿಯೆಂಬ ಹೊರನೋಟವನ್ನು ನಂಬಿ ಪ್ರಕೃತಿಯೆಂಬ ಕಗ್ಗಾಡಿನೊಳಗೆ ನುಗ್ಗಿ ಬಿಟ್ಟಿರುತ್ತದೆ. ಅದಕ್ಕೆ ದಾರಿಯಲ್ಲಿ ಅನರ್ಘವಾದ ರತ್ನಗಳೂ ಸಿಕ್ಕಿವೆ, ಯಾವ ಬೆಲೆಯೂ ಇಲ್ಲದ ಥಳಗುಟ್ಟುವ ಬೆಣಚುಕಲ್ಲುಗಳೂ ಸಿಕ್ಕಿವೆ; ಅಲ್ಲಿ ಕಲ್ಲುಗಳು ಯಾವವು, ಜಾತಿರತ್ನಗಳು ಯಾವವು ಎಂಬುದನ್ನು ಶೋಧನೆ ಮಾಡುವ ತಾಳ್ಮೆಯಿಲ್ಲದೆ ಅದು ಆಗಾಗ್ಗೆ ರತ್ನಗಳನ್ನು ಕಲ್ಲುಗಳೆಂದೂ, ಕಲ್ಲುಗಳನ್ನು ರತ್ನಗಳೆಂದೂ ಭಾವಿಸುವದುಂಟು. ಅನಂತವಾದ ಕಾಲ, ಅನಂತವಾದ ಆಕಾಶ– ಇವುಗಳ ಆಶ್ರಯದಲ್ಲಿ ತೋರಿಬರುವ ಜ್ಞೇಯರಾಶಿಯನ್ನು ಅದು ಶೋಧನೆಮಾಡುತ್ತಿರುವದು ಎಂದಿಗೆ ಯಾವಲ್ಲಿಗೆ ಮುಗಿಯಬೇಕು, ಪರಿಚ್ಛಿನ್ನವಾದ ಮಾನವಬುದ್ಧಿಯಿಂದ ಅದು ಮಾಡಿಕೊಳ್ಳುತ್ತಿರುವ ನಿರ್ಣಯಗಳು ನಿರ್ದುಷ್ಟಗಳೆಂಬುದು ಎಂದಿಗೆ ಹೇಗೆ ತೀರ್ಮಾನವಾಗಬೇಕು ?

ಈವರೆಗೆ ನಾವು ವಿಚಾರಿಸಿರುವದು ಜ್ಞೇಯಾಂಶ. ಇನ್ನು ಜ್ಞಾನತತ್ತ್ವವನ್ನು ಲೌಕಿಕವಿಜ್ಞಾನವು ಹೇಗೆ ವಿಮರ್ಶಿಸುತ್ತದೆ ಎಂಬುದನ್ನು ಮನದಂದುಕೊಂಡರೆ ಅದರ ಸ್ಥಿತಿಯು ಅತ್ಯಂತ ಅನುಕಂಪನೀಯವಾಗಿದೆ ಎನ್ನಬೇಕಾಗುತ್ತದೆ. ಮನಃಶಾಸ್ತ್ರದಲ್ಲಿ ಮನಸ್ಸೆಂದರೇನೆಂಬ ವಿಷಯಕ್ಕೆ ನಿಶ್ಚಿತಾಭಿಪ್ರಾಯವಿಲ್ಲ; ಮನಸ್ಸನ್ನು ಜ್ಞಾನಸಾಧನವಾಗಿ ನೋಡುವದಕ್ಕಿಂತಲೂ ದೃಶ್ಯರಾಶಿಯಲ್ಲಿಯೇ ಅದನ್ನು ಕೂಡಿಸಿಟ್ಟು ಹೊರಗಿನ ಪದಾರ್ಥಗಳಿಗೆ ಅನ್ವಯಿಸುವ ನಿರೀಕ್ಷಣಪರೀಕ್ಷಣಾದಿಗಳನ್ನು ಅದಕ್ಕೂ ಹತ್ತಿಸುವ ವ್ಯಸನಿತೆಯು ಮನಃಶಾಸ್ತ್ರಜ್ಞರಿಗೆ ಬಂದು ಬಿಟ್ಟಿದೆ. ಮನಶ್ಶಾಸ್ತ್ರಜ್ಞರೊಳಗೇ ಐಕಮತ್ಯವು ಇಲ್ಲದಂತಾಗಿಬಿಟ್ಟಿದೆ. ಇದೆಲ್ಲವನ್ನೂ ನೋಡಿದರೆ ಮನಶ್ಶಾಸ್ತ್ರವೆಂಬುದೊಂದು ಶಾಸ್ತ್ರವೇ ಅಲ್ಲವೆಂದರೂ ಸಾಗುವಂತೆ ಆಗಿರುತ್ತದೆ.

ಈವರೆಗೆ ವರ್ಣಿಸಿರುವ ಲೌಕಿಕವಿಜ್ಞಾನಶಾಸ್ತ್ರದ ಸ್ಥಿತಿಯು ರೂಪರೇಖೆಯನ್ನು ಇದ್ದದ್ದು ಇದ್ದಂತೆ ತಿಳಿಸುವದುಕೂಡ ನಮ್ಮಂಥ ಅಶಾಸ್ತ್ರಜ್ಞರಿಗೆ

ಆಗಲಾರದು. ಇಲ್ಲಿ ನಾನು ಹೇಳಿರುವದೆಲ್ಲ ಶಾಸ್ತ್ರಜ್ಞರ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ನಿರ್ದುಷ್ಟವಾಗಿದೆಯೋ ನಾನು ಹೇಳಲಾರೆ. ಇದು ಹೇಗಾದರೂ ಇರಲಿ, ವಿಜ್ಞಾನಶಾಸ್ತ್ರಜ್ಞರುಗಳೇ ಈಗ ಆ ಶಾಸ್ತ್ರದ ದೋಷಗಳನ್ನೂ ಎಲ್ಲೆಕಟ್ಟನ್ನೂ ಒಪ್ಪಿಕೊಳ್ಳುತ್ತಾರೆಂಬುದು ನಿಶ್ಚಯ. ಈ ವಿಷಯದಲ್ಲಿ ಹೆಚ್ಚಿಗೆ ತಿಳಿಯಬೇಕೆನ್ನುವವರು Reason, Science and Shastras (ತರ್ಕ, ವಿಜ್ಞಾನಶಾಸ್ತ್ರ ಮತ್ತು ಶಾಸ್ತ್ರಗಳು) ಎಂಬ ಹೆಸರಿನಿಂದ ಕಲಕತ್ತೆಯಲ್ಲಿ **ನಲಿನಿರಂಜನಸೇನಗುಪ್ತ, ಎಮ್. ಡಿ.**– ಇವರು ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವ ಪುಸ್ತಕವನ್ನು ನೋಡಬೇಕು.[1] ಸರ್ ಜೇಮ್ಸ್ ಜೀನ್ಸ್ ಎಂಬಾತನು ಬರೆದಿರುವ **'ಗಹನ ವಿಶ್ವ'** (The M)sterious Universe) ಎಂಬ ಇಂಗ್ಲಿಷ್ ಪುಸ್ತಕವನ್ನೂ 'ಬಾಹ್ಯಪ್ರಪಂಚದ ಸ್ವಭಾವ' (The Nature of the Physical World) ಎಂಬ ಪುಸ್ತಕವನ್ನೂ ಓದಬೇಕು.

ಅಂತೂ ವಿಜ್ಞಾನಶಾಸ್ತ್ರವು ತನ್ನ ಪರಿಶೋಧನೆಯನ್ನು ಮುಂದುವರಿಸಿದಂತೆಲ್ಲ ಅದರ ತೀರ್ಮಾನಗಳು ಮಾರ್ಪಡುತ್ತಲೇ ಇರುತ್ತವೆ. 'ಏನೇನು ಹೇಳಿದ್ದಾಗಿದೆಯೋ ಯಾವ ಯಾವ ತೀರ್ಮಾನವನ್ನು ಜನರ ಮುಂದಿಟ್ಟಿದೆಯೋ ಅವೆಲ್ಲವೂ ಊಹಾಮಾತ್ರವಾಗಿವೆ, ಅನಿಶ್ಚಿತವಾಗಿವೆ– ಎಂದು ಒಪ್ಪಿಕೊಳ್ಳಬೇಕು. ನಮ್ಮ ಮುಖ್ಯವಾದವೇನೆಂದರೆ ಇಂದಿನ ವಿಜ್ಞಾನಶಾಸ್ತ್ರಕ್ಕೆ ಕಟ್ಟಕಡೆಯ ಮಾತೆಂದು ಹೇಳುವಂಥದ್ದೇನೂ ಇರುವದಿಲ್ಲ; ವಿಜ್ಞಾನಶಾಸ್ತ್ರವು ಕಡೆಯ ಮಾತೆಂದು ಹೇಳುವದನ್ನೇ ಬಿಟ್ಟುಬಿಡಬೇಕು. ಏಕೆಂದರೆ ಜ್ಞಾನನದಿಯು ಎಷ್ಟೋ ಸಲ ಹಿಂತಿರುಗಿ ತನ್ನ ಮೇಲೆಯೇ ಪ್ರವಹಿಸಿಬಿಟ್ಟಿರುತ್ತವೆ' (MU. P. 188) ಎಂದು **ಜೇಮ್ಸ್ ಜೀನ್ಸ್** ಎಂಬಾತನು ಬರೆದಿರುತ್ತಾನೆ. 'ವಿಜ್ಞಾನಶಾಸ್ತ್ರದ ಕಲ್ಪನೆಗಳು ಹಿಂದಕ್ಕೆ ತಪ್ಪುಗಳನ್ನು ಮಾಡಿಯೇ ಇವೆ; ಅವು ಇಂದಿಗೂ ತಪ್ಪು ಮಾಡುತ್ತವೆ ಎಂಬುದರಲ್ಲಿ ಸಂದೇಹವಿಲ್ಲ' (Science and the Unseen World P. 16) ಎಂದು

1. **ಈ ಗ್ರಂಥವು ಪ್ರಕಟನಕರ್ತರಲ್ಲಿ 91, ಚೌರಂಘಿ ರೋಡ್, ಕಲಕತ್ತ 20 ಎಂಬ ವಿಳಾಸದಲ್ಲಿ ದೊರಕುತ್ತದೆ.**

**ಎ. ಎಸ್. ಎಡ್ಡಿಂಗ್ಟನ್** ಎಂಬಾತನು ಬರೆದಿದ್ದಾನೆ. ಆದ್ದರಿಂದ ಆ ಶಾಸ್ತ್ರದ ವಿಷಯಕ್ಕೆ ನಾವು ಹೇಳುವದು ಮಿಥ್ಯಾದೋಷಣೆಯೆಂದು ಯಾರೂ ಕಲ್ಪಿಸುವದಕ್ಕಿಲ್ಲ. ಇದಕ್ಕೆ ಕಾರಣವಿಲ್ಲದೆಯೂ ಇಲ್ಲ. ಆ ಶಾಸ್ತ್ರವು ಅವಲಂಬಿಸಿರುವ ಪರಾಗ್ದೃಷ್ಟಿಯಲ್ಲಿ ಸಿಕ್ಕುವ ಗುಣಮಯಪ್ರಪಂಚವು 'ಇಗೋ ತಿಳಿಯಿತು!' ಎಂಬ ಆಸೆಯನ್ನು ಹುಟ್ಟಿಸಿ 'ಇದೇನು, ಇನ್ನೂ ಮುಂದೆ ಏನೇನೋ ಇದೆಯಲ್ಲ!' ಎನ್ನಿಸಿಬಿಡುತ್ತದೆ. ರಷ್ಯದ ಗಗಾರಿನ್ ಎಂಬವರು ಬಾಹ್ಯಾಕಾಶಕ್ಕೆ ಹಾರಿದ್ದಾರೆಂದು ಈಗ ಸಂತೋಷಪಡುತ್ತಿದ್ದರೂ ಅಮೆರಿಕದವನೊಬ್ಬನು ಇನ್ನೂ ದೂರಕ್ಕೆ ಹಾರಲಾರನೆಂಬ ಅಥವಾ ಮುಂದೆ ಈ ಹಾರಾಟವು ಎಲ್ಲಿಗೆ ಕೊನೆಗಂಡೀತೆಂಬ ಆಶೆಯೇನೂ ಇಲ್ಲವಷ್ಟೆ? ವಿಜ್ಞಾನಶಾಸ್ತ್ರದ ಶೋಧನೆಯ ಗತಿಯೆಲ್ಲ ಹೀಗೆಯೇ. ಇದೇ ಮಾಯೆಯ ಸ್ವಭಾವ.

**'ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।**
**ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥'**

(ಗೀ. ೭-೧೪) ಎಂದು ಭಗವಂತನು ಹೇಳಿರುವಂತೆ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಎಂದು ವಿಭಕ್ತವಾಗಿರುವ ಪ್ರಪಂಚವೆಲ್ಲವೂ ಪರಮಾರ್ಥದಲ್ಲಿ ಕಲ್ಪಿತವಾಗಿರುವ ಮಾಯಾಮಾತ್ರವಾಗಿದೆ. ಆ ಮಾಯೆಯು ತಾನು ತೋರುವ ರೂಪದಿಂದ ಅನೃತವಾಗಿದ್ದರೂ ಪರಮಾರ್ಥದ ಆಶ್ರಯದಲ್ಲಿಯೇ ಬಾಳಬೇಕಾಗಿರುವದರಿಂದ ತನ್ನ ಆಶ್ರಯದ ಸತ್ಯತ್ವವನ್ನು ಹೊರಸೂಸುತ್ತಿರುತ್ತದೆ. ಆದ್ದರಿಂದ ನಮಗೆ ಪರಮಾರ್ಥವು ತಿಳಿದಿದೆ ಎಂದಾಗಲಿ, ತಿಳಿದಿಲ್ಲವೆಂದಾಗಲಿ ವಿಜ್ಞಾನಶಾಸ್ತ್ರಜ್ಞರು ಹೇಳುವದಕ್ಕೆ ಬರುವಂತಿಲ್ಲ. ಜೇಮ್ಸ್ ಜೀನ್ಸನು ಹೇಳಿರುವದೇನೆಂದರೆ 'ಇಂದಿನ ವಿಜ್ಞಾನಶಾಸ್ತ್ರವು ಕೆಲವು ಜಟಿಲ ಪ್ರಶ್ನೆಗಳಿಗೆ ಯಾವದಾದರೂ ಉತ್ತರವನ್ನು ಹೇಳಲಾಪದೆ ? ಎಂಬುದನ್ನು ಚರ್ಚಿಸಲು ಈವರೆಗೆ ಪ್ರಯತ್ನಿಸಿರುತ್ತೇವೆ; ಆ ಪ್ರಶ್ನೆಗಳು ಮಾನವನ ಬುದ್ಧಿಗೆ ಎಂದೆಂದಿಗೂ ಅತೀತವಾಗಿಯೇ ಇರಬಹುದು. ನಮಗೆ ಆ ಬೆಳಕಿನ ಮಂಕಾದ ಝುಳುಕೊಂದು ಕಂಡುಬಂದಿದೆ ಎಂಬುದಕ್ಕಿಂತ ಹೆಚ್ಚಿಗೆಯೇನೂ ಹೇಳಿಕೊಳ್ಳುವ ಹಾಗಿಲ್ಲ. ಅದೂ ಪೂರ್ಣವಾಗಿ ಭ್ರಾಂತಿದರ್ಶನವೇ ಆಗಿರಲೂಬಹುದು; ಏಕೆಂದರೆ ಆ ಅಲ್ಪವನ್ನು ಕಾಣುವದಕ್ಕೂ ಕಣ್ಣನ್ನು ಅರಳಿಸಿಕೊಂಡು ಎವೆಯಿಕ್ಕದೆ ನೋಡಬೇಕಾಯಿತು' (MU. P. 188).

ಜ್ಞಾನಜ್ಞೇಯಗಳು ಹೀಗೆ ನಮ್ಮ ವಿಚಾರಕ್ಷೇತ್ರದಲ್ಲಿ ಕಾಣಿಸಿಕೊಂಡು ನಮ್ಮ ಕುತೂಹಲವನ್ನು ಕೆರಳಿಸುತ್ತಲೇ ಇರುವವು. ಅವುಗಳನ್ನು ವಿಜ್ಞಾನ ಶಾಸ್ತ್ರದ ಕ್ರಮದಿಂದ ವಿಚಾರಿಸುವಲ್ಲಿ ಎಷ್ಟೋ ತತ್ತ್ವಗಳು ನಮಗೆ ದೃಷ್ಟಿ ಗೋಚರವಾಗುವವು; ಅವುಗಳನ್ನವಲಂಬಿಸಿ ಮಾಡಿಕೊಂಡ ತೀರ್ಪುಗಳು ಮತ್ತೆ ಮತ್ತೆ ನಮ್ಮ ಹಿಡಿತದಿಂದ ನುಸುಳಿಕೊಳ್ಳುತ್ತಿರುವವು. ಎಂದೆಂದಿಗೂ ಬಾಧಿತವಾಗದಂತೆ ಇಡಿಯ ವಿಶ್ವದ ಪರಮಾರ್ಥವನ್ನೇ ಕಂಡುಕೊಳ್ಳಬೇಕೆಂದು ಬಯಸುವವರು ಈ ದೃಷ್ಟಿಯನ್ನು ಬಿಟ್ಟು ಪ್ರತ್ಯಗ್ದೃಷ್ಟಿಯನ್ನು ಅವಲಂಬಿಸ ಬೇಕು. ಆಗ ಮಾಯಾತೀತವಾದ ಪರಮಾರ್ಥವು ಯಾವದೆಂಬುದು ನಮ್ಮ ಮನಸ್ಸಿನಲ್ಲಿ ಹೊಳೆಯುವದು. ಆ ಮಾಯೆಯು ಯಾವ ಮಾಯಾವಿಯ ವಶದಲ್ಲಿದೆ ಎಂಬುದು ಗೊತ್ತಾಗುವದು. ಮಾಯೆಯೆಂಬುದು ನಿಜವಾಗಿ ಆ ಮಹಾಮಾಯಾವಿಯ ವಿಭೂತಿಯೇ ಎಂಬುದೂ ಅನುಭವಕ್ಕೆ ಬರುವದು.

---

## ೩. ಅಕೃತ್ಸ್ನದರ್ಶನಗಳು

**ಸ್ವಾವಿದ್ಯಾವಿಭವಪ್ರಸೂತವಿಪುಲದ್ವೈತಪ್ರಪಞ್ಚಾಹಿತ-**
**ಸ್ಪಷ್ಟಭ್ರಾನ್ತಿತಿರೋಹಿತಾತ್ಮಮತಯೋ ಯಂ ಭಾಗಶೋ ಮನ್ವತೇ।**
**ನಿರ್ಭಾಗಂ ಸಕಲಾಭಿಧಾನಮನನವ್ಯಾಪಾರದೂರಸ್ಥಿತಂ**
**ವನ್ದೇ ನನ್ದಿತವಿಶ್ವಮವ್ಯಯಮಜಂ ಭಕ್ತ್ಯಾ ತಮೇಕಂ ವಿಭುಮ್ ॥**

'ತಮ್ಮ ಅವಿದ್ಯೆಯ ವೈಭವದಿಂದ ಹುಟ್ಟಿದ ವಿಸ್ತಾರವಾದ ದ್ವೈತ ಪ್ರಪಂಚದಿಂದಾದ ಸ್ಪಷ್ಟಭ್ರಾಂತಿಯಿಂದ ಆತ್ಮಜ್ಞಾನವು ಮರೆಯಾದವರು ಯಾವಾತನನ್ನು ಭಾಗಭಾಗವಾಗಿ ತಿಳಿಯುತ್ತಾರೆಯೋ, ಅಂಥ ಭಾಗರಹಿತ ನಾದ, ಸಕಲವಾಙ್ಮನಸವ್ಯಾಪಾರಕ್ಕೂ ದೂರದಲ್ಲಿರುವ, ಜಗತ್ತಿಗೆಲ್ಲ ಆನಂದ ವನ್ನುಂಟುಮಾಡುತ್ತಿರುವ ಅಜನಾದ ಆ ಅದ್ವೈತರೂಪನಾದ ವಿಭುವನ್ನು ವಂದಿಸುತ್ತೇನೆ' ಎಂದು **ಶ್ರೀಸುರೇಶ್ವರಾಚಾರ್ಯರು** ತಮ್ಮ ವಾರ್ತಿ ಕಾರಂಭದಲ್ಲಿ ಮಂಗಲಶ್ಲೋಕವನ್ನು ಬರೆದಿರುತ್ತಾರೆ. ಪರಮಾರ್ಥದಲ್ಲಿ ಯಾವ ಭಾಗವೂ ಇಲ್ಲದಿದ್ದರೂ ತಾವು ಅವಿದ್ಯೆಯಿಂದ ಕಲ್ಪಿಸಿಕೊಂಡ

ಒಂದೊಂದು ಭಾಗವನ್ನೇ ಪರಮಾರ್ಥವೆಂದು ಹಿಡಿಯುವದು ಮನುಷ್ಯರಿಗೆ ಸ್ವಭಾವವಾಗಿಬಿಟ್ಟಿರುತ್ತದೆ. ಆಚಾರ್ಯರ ಪರಮಗುರುಗಳು ಹೇಳಿರುವಂತೆ:

**ಯಂ ಭಾವಂ ದರ್ಶಯೇದ್ ಯಸ್ತು ತಂ ಭಾವಂ ಸ ತು ಪಶ್ಯತಿ ।**
**ತಂ ಚಾವತಿ ಸ ಭೂತ್ವಾಸೌ ತದ್ಗ್ರಹಃ ಸಮುಪೈತಿ ತಮ್ ॥**

ಹಗ್ಗದಲ್ಲಿ ಹಾವು, ನೀರಿನ ಕೋಡಿ–ಮುಂತಾದವುಗಳನ್ನು ವಿಕಲ್ಪಿಸುವಂತೆ ಸಕಲ ಭಾವಗಳೂ ಪರಮಾರ್ಥದಲ್ಲಿಯೇ ಕಲ್ಪಿತವಾಗಿರುತ್ತವೆ. ಯಾವನು ಇದೇ ತತ್ತ್ವವೆಂದು ತನ್ನ ಶಿಷ್ಯರಿಗೆ ತಿಳಿಸುವನೋ, ಅದನ್ನೇ ಅವರು ಸತ್ಯವೆಂದು ತಿಳಿಯುವರು. ಅದು ಆ ರೂಪದಿಂದಲೇ ಆಯಾ ಶ್ರೋತೃಗಳನ್ನು ಹಿಡಿದುಕೊಂಡು ಮತ್ತೊಂದು ದೃಷ್ಟಿಯನ್ನವಲಂಬಿಸದಂತೆ ಮಾಡುವದು. ಅದರ ಗ್ರಹವೇ ಅವರಲ್ಲಿ ಆವಿಷ್ಟವಾಗಿಬಿಡುವದು.

ಹಿಂದಿನ ಚರ್ಚೆಯಲ್ಲಿ ವಿಜ್ಞಾನಶಾಸ್ತ್ರವು ಜ್ಞಾನಜ್ಞೇಯಗಳೆರಡನ್ನೂ ಹೇಗೆ ತುಂಡುಮಾಡಿ ತಿಳಿಸಿಕೊಡುತ್ತಿದೆ, ಆ ತಿಳಿವಳಿಕೆಯು ಹೇಗೆ ಅಲ್ಪವಾಗಿರುತ್ತದೆ, ಮಾಯಾಕ್ಷೇತ್ರದಲ್ಲಿಯೇ ತೊಳಲಿಸುತ್ತಿದೆ– ಎಂಬುದನ್ನೂ ಕಂಡುಕೊಂಡದ್ದಾಯಿತು. ಈಗ ತತ್ತ್ವವಿಚಾರಕರಾದ ವಾದಿಗಳೂ ಹೇಗೆ ಅಕೃತ್ಸ್ನದೃಷ್ಟಿಯನ್ನೇ ಪೂರ್ಣವೆಂದು ನಂಬುತ್ತಾರೆಂಬುದನ್ನು ಸ್ವಲ್ಪ ಮಟ್ಟಿಗೆ ದಿಗ್ದರ್ಶನಕ್ಕಾಗಿ ತಿಳಿಸುವೆನು.

ವೇದಾಂತಿಗಳಲ್ಲದ **ತತ್ತ್ವವಿಚಾರಕರು** ನಮ್ಮ ದೇಶದಲ್ಲಿಯೂ ಪಾಶ್ಚಾತ್ಯದೇಶಗಳಲ್ಲಿಯೂ ಆಗಿಹೋಗಿರುತ್ತಾರೆ. ಅವರಿಗೆ ತಾವೂ ತತ್ತ್ವವನ್ನು ಅನುಭವಕ್ಕೆ ಹೊಂದಿಸಿಯೇ ಗೊತ್ತುಮಾಡುವೆವೆಂಬ ಭಾವನೆಯಿದ್ದರೂ ಅವರೆಲ್ಲರೂ ತರ್ಕಪ್ರಧಾನರೇ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ನಮ್ಮ ದೇಶದಲ್ಲಿ **ಚಾರ್ವಾಕರು** ಪ್ರತ್ಯಕ್ಷಪ್ರಧಾನರು. ಚೈತನ್ಯವೂ ಭೌತಿಕವಾದ ಶರೀರದಲ್ಲಿಯೇ ತೋರಿಕೊಳ್ಳುತ್ತಿರುವದರಿಂದ ಚೈತನ್ಯವಿಶಿಷ್ಟವಾದ ಶರೀರವೇ ಆತ್ಮನು–ಎಂಬ ಸಿದ್ಧಾಂತಕ್ಕೆ ಅವರು ಬಂದಿದ್ದರು; ಪ್ರಾಣ, ಚೇಷ್ಟೆ, ಚೈತನ್ಯ, ಸ್ಮೃತಿ–ಮುಂತಾದವುಗಳೆಲ್ಲವೂ ಶರೀರದೊಳಗೇ ಕಾಣಿಸಿಕೊಳ್ಳುವದರಿಂದ ಅವೂ ದೇಹದ ಧರ್ಮಗಳೇ ಎನ್ನುತ್ತಿದ್ದರು. ಈಗಿನ

ಭೌತಿಕಶಾಸ್ತ್ರದ ದೃಷ್ಟಿಯನ್ನವಲಂಬಿಸಿದವರು ಮಿದುಳಿನ ಧರ್ಮವೇ ಜ್ಞಾನವು, ಮನಸ್ಸೆಂಬುದು ಶರೀರದ ವಿಕ್ರಿಯೆಗಿಂತ ಬೇರೆಯಿಲ್ಲ ಎಂದು ಭಾವಿಸುವ ದೃಷ್ಟಿಯು ಕ್ರಮಪಡಿಸಿದ ಚಾರ್ವಾಕದೃಷ್ಟಿಯೇ ಎನ್ನಬಹುದಾಗಿದೆ. **ಬೌದ್ಧ**ರಲ್ಲಿ ಬಾಹ್ಯಾರ್ಥವಿದೆ ಎನ್ನುವವರು ಎಲ್ಲವೂ ಕ್ಷಣಿಕವೇ ಎಂಬ ತೀರ್ಮಾನಕ್ಕೆ ಬಂದಿದ್ದರು; ಮತ್ತೆ ಕೆಲವರು ಹೊರಗಿನ ವಸ್ತುಗಳಿವೆ ಎಂಬುದು ಅನುಮಾನಪ್ರಮಾಣದಿಂದ ಊಹಿಸತಕ್ಕದ್ದೇ ಹೊರತು ನೇರಾಗಿ ಅವುಗಳು ನಮಗೆ ಕಾಣುತ್ತಿಲ್ಲ ಎನ್ನುತ್ತಿದ್ದರು. **ವಿಜ್ಞಾನವಾದಿಗಳು** ಕ್ಷಣಿಕವಿಜ್ಞಾನಸಂತತಿಯೇ ಎಲ್ಲಾ ಆತ್ಮವ್ಯವಹಾರಕ್ಕೂ ಸಾಕಾಗಿವೆ ಎಂದು ಭಾವಿಸಿದ್ದರು. ಅವರ ದೃಷ್ಟಿಯಲ್ಲಿ ವಿಜ್ಞಾನಕ್ಕಿಂತ ಬೇರೆಯಾದ ಬಾಹ್ಯವಸ್ತುವೆಂಬುದು ಇಲ್ಲವೇ ಇಲ್ಲ; ಅದು ತನ್ನನ್ನು ತಾನೇ ತಿಳಿಯುತ್ತಿರುತ್ತದೆ. **ಶೂನ್ಯವಾದಿಗಳ ಮತ**ದಲ್ಲಿ ಪ್ರತಿಯೊಂದೂ ಸಾಪೇಕ್ಷವಾಗಿ ಇದೆ. ಕಣ್ಣು, ನೋಟ, ದೃಶ್ಯವಾದ ರೂಪ-ಇವುಗಳು ಒಂದರ ಅಪೇಕ್ಷೆಯಿಲ್ಲದೆ ಮತ್ತೊಂದು ಸಿದ್ಧವಾಗುವಂತೆಯೇ ಇಲ್ಲ. ಹೀಗೆಯೇ ಕಾರಣದ ಅಪೇಕ್ಷೆಯಿಂದ ಕಾರ್ಯವು ಇದೆ ಎನ್ನಬಹುದು. ಸ್ವತಂತ್ರವಾಗಿ ಕಾರಣವಾಗಲಿ, ಕಾರ್ಯವಾಗಲಿ ಇಲ್ಲವೇ ಇಲ್ಲ. ಸರಿಯಾಗಿ ನೋಡಿದರೆ ನಿರಪೇಕ್ಷವಾಗಿ ಯಾವದೊಂದು ವಸ್ತುವೂ ಇಲ್ಲವೇ ಇಲ್ಲ. ಇದೆ, ಇಲ್ಲ, ಇದ್ದೂ ಇಲ್ಲ, ಇಲ್ಲವೇ ಇಲ್ಲ -ಎಂಬ **ನಾಲ್ಕುಕೋಟಿ**ಗಳನ್ನು ಮೀರಿರುವ ನಿಸ್ಸ್ವಭಾವತ್ವವೇ ಪರಮಾರ್ಥವು ಎಂದು ಆ ವಾದಿಗಳು ಯುಕ್ತಿಯಿಂದ ಸ್ಥಾಪಿಸುತ್ತಿದ್ದರು.

ಹೀಗೆಯೇ **ಸಾಂಖ್ಯರು** ಪ್ರಕೃತಿಯ ವಿಕಾರವೇ ಜಗತ್ತು; ಪ್ರಕೃತಿಪುರುಷವಿವೇಕದಿಂದ ಅಜ್ಞಾನವು ಹೋಗುತ್ತದೆ ಎಂದು ತರ್ಕದಿಂದ ಸಿದ್ಧಮಾಡಿರುತ್ತಾರೆ. ಮೂಲಪ್ರಕೃತಿ, ಮಹತ್ತು, ಅಹಂಕಾರ, ತನ್ಮಾತ್ರೆಗಳು – ಎಂಬ ಏಳು ಪ್ರಕೃತಿವಿಕೃತಿಗಳು, ಅದರ ವಿಕಾರಗಳು ಹದಿನಾರು– ಇವೆಲ್ಲಕ್ಕಿಂತಲೂ ವಿಲಕ್ಷಣನಾದ ಪುರುಷ– ಎಂದು ಇಪ್ಪತ್ತೈದು ತತ್ತ್ವಗಳನ್ನು ಅವರು ತರ್ಕದಿಂದ ಸಿದ್ಧಪಡಿಸಿರುತ್ತಾರೆ. **ವೈಶೇಷಿಕರು** ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ–ಎಂಬ ಆರು ಪದಾರ್ಥಗಳನ್ನು ಅಥವಾ ಅಭಾವವೂ ಸೇರಿ ಏಳು ಪದಾರ್ಥಗಳನ್ನು ಅಂಗೀಕರಿಸಿರುತ್ತಾರೆ;

**ನೈಯಾಯಿಕರು** ಪ್ರಮಾಣಪ್ರಮೇಯಾದಿಯಾಗಿ ಹದಿನಾರು ಪದಾರ್ಥಗಳೆಂದು ಜ್ಞೇಯರಾಶಿಯನ್ನು ವಿಂಗಡಿಸಿರುತ್ತಾರೆ. ಈ ವಿಚಾರಕರಲ್ಲಿ ಪ್ರತಿಯೊಬ್ಬರೂ ಒಂದೊಂದು ದೃಷ್ಟಿಕೋಣವನ್ನು ಅವಲಂಬಿಸಿ ತತ್ತ್ವವನ್ನು ದರ್ಶನಗಳೂ ಬೇರೆಬೇರೆಯಾದವು.

ಈಗ ಪಶ್ಚಿಮದೇಶಗಳಲ್ಲಿ ಪ್ರಸಿದ್ಧರಾದ ತತ್ತ್ವವಿಚಾರಕರಲ್ಲಿ ಮುಖ್ಯರಾದ ಕೆಲವರ ಪ್ರಕ್ರಿಯೆಗಳನ್ನು ಸಂಗ್ರಹವಾಗಿ ನೋಡೋಣ. **ಡೆಕಾರ್ಟ್** (Decartes) ಎಂಬಾತನು ಯುರೋಪಿನ ಆಧುನಿಕವಿಚಾರಪದ್ಧತಿಗೆ ಮೊದಲಿಗನೆನ್ನಬಹುದು. ಅವನು ಆತ್ಮಸಿದ್ಧಿಗೆ ಮನನವನ್ನೇ ಹೇತುವೆಂದು ಇಟ್ಟುಕೊಂಡಿರುತ್ತಾನೆ. ಯಾವದನ್ನು ಬೇಕಾದರೂ 'ಇದೆಯೊ, ಇಲ್ಲವೊ?' ಎಂದು ಸಂಶಯಕ್ಕೆಡೆಯಾಗಿ ಮಾಡಿಕೊಳ್ಳಬಹುದು. ಆದರೆ ತಾನು ಇದೇನೆಂಬ ವಿಷಯಕ್ಕೆ ಮಾತ್ರ ಸಂಶಯವಾಗುವಂತಿಲ್ಲ; ಸಂಶಯವೆಂದರೆ ಮನೋವ್ಯಾಪಾರವೇ ಅಲ್ಲವೆ? ಆದ್ದರಿಂದ ಅದಕ್ಕೆ ಆಶ್ರಯನಾದ ನಾನು ಇರಲೇಬೇಕು. 'ನಾನು ವಿಚಾರಮಾಡುತ್ತೇನೆ, ಆದ್ದರಿಂದ ಇದೇನೆ' ಎಂಬುದು ಅವನ ತರ್ಕ. ಪರ್ವತದಲ್ಲಿ ಬೆಂಕಿಯಿರಬೇಕು, ಎಂದರೆ ಅಲ್ಲಿ ಹೊಗೆಯಿದೆ ಎಂಬಂತೆ ಆತನು ತಾನು ಇದೇನೆಂಬುದಕ್ಕೆ ಮನನವನ್ನು ಹೇತುವಾಗಿ ಕೊಟ್ಟಿರುವದು ಭಾರತದೇಶದವರಿಗೆ ಆಶ್ಚರ್ಯಕರವಾಗಿ ಕಾಣುವದು ಸ್ವಾಭಾವಿಕವಾಗಿರುತ್ತವೆ. ತನ್ನ ಇರವಿನ ವಿಷಯಕ್ಕೆ ಸಂಶಯವೆಂದರೇನು? ಸಂಶಯವನ್ನು ಮಾಡುವಾತನೇ ತಾನಲ್ಲವೆ? ಇದಂತಿರಲಿ, ಮನನವೆಂಬುದನ್ನು ಆಧಾರವಾಗಿಟ್ಟುಕೊಂಡು ಅದು ಸ್ವತಃಪ್ರಮಾಣವಾಗಿರುವದರಿಂದ ಮನಸ್ಸಿನಲ್ಲುಂಟಾಗುವ ಭಾವನೆಗಳ ಆಧಾರದಿಂದಲೇ ಈಶ್ವರ, ಪ್ರಪಂಚ–ಎಲ್ಲವನ್ನೂ ಅವನು ಸಾಧಿಸಿರುತ್ತಾನೆ. ತರ್ಕವೇ ಇಲ್ಲಿ ನ್ಯಾಯಾಧೀಶ; ತರ್ಕವು ಒಪ್ಪಿದ್ದು ಇರಲೇಬೇಕು.

**ಸ್ಪೈನೋಸಾ** ( Spinoza ) ಎಂಬಾತನು- ದೃಶ್ಯಕ್ಕೆಲ್ಲ ಒಂದು ಆಧಾರವಿರಲೇಬೇಕಷ್ಟೆ? ಆ ಅಧಿಷ್ಠಾನವಸ್ತುವೇ (Substance) ಪರಮಾರ್ಥವು. ಯಾವ ದೃಶ್ಯವಾದರೂ ಮನಸ್ಸಿನಲ್ಲಿ ಆಗುವ ವೃತ್ತಿವಿಶೇಷ

ವಸ್ತುಂಟುಮಾಡತಕ್ಕದ್ದಾಗಿರುತ್ತದೆ; ಆದ್ದರಿಂದ ಇದಕ್ಕೆ ಮೂಲಕಾರಣವಾದ ವಸ್ತುವಿದೆ. ಸರ್ವಕ್ಕೂ ಆಧಾರವಾಗಿ ಒಂದು ವಸ್ತುವಿದೆ, ಅವೇ ಪರಮಾರ್ಥ; ಅದೇ **ಈಶ್ವರ**. ಎಲ್ಲವೂ ಆ ಈಶ್ವರನಲ್ಲಿಯೇ ಇದ್ದುಕೊಂಡಿದೆ. ವಿಚಿತ್ರವಾದ ಪ್ರಪಂಚವೆಲ್ಲ, ಆ ಅದ್ವಿತೀಯವಸ್ತುವಿನ ಆಧಾರದಿಂದಲೇ ಇದ್ದುಕೊಂಡಿದೆ, ಅದರ ಆಭಾಸಮಾತ್ರವಾಗಿರುತ್ತದೆ. ಮನಸ್ಸಿನಲ್ಲಿ ಪರಮಾರ್ಥವು ಪ್ರತಿಬಿಂಬಿಸುತ್ತದೆ. ಪರಮಾರ್ಥವನ್ನು ಅರಿತುಕೊಳ್ಳುವವೇ ಪರಮಪುರುಷಾರ್ಥ ಎಂಬುದು ಸ್ಪೈನೋಸನ ಸಿದ್ಧಾಂತ. ಇದೂ ವೇದಾಂತದಲ್ಲಿ ಒಪ್ಪಿರುವ ಪರಮಾರ್ಥವೇ ಆದರೂ ಈತನ ಸಿದ್ಧಾಂತದಲ್ಲಿ ಇದಕ್ಕೆ ಯುಕ್ತ್ಯನುಭವಗಳ ಆಧಾರವಿಲ್ಲ. ವಿಚಿತ್ರವಾದ ದೃಶ್ಯಕ್ಕೊಂದು ಆಧಾರವಿರಬೇಕು ಎಂಬುದು ಕಲ್ಪನಾಮಾತ್ರವೇ ಹೊರತು ಅಬಾಧ್ಯವಾದ ಯುಕ್ತಿಯಲ್ಲ. ಅಖಂಡವಾದ ಪರಮಾರ್ಥವು ಪರಿಚ್ಛಿನ್ನವಾದ ವಿಚಿತ್ರತರವಾದ ದೃಶ್ಯಗಳಾಗಿವೆ ಎಂಬುದಕ್ಕೆ ಯಾವ ಅನುಭವದ ಆಧಾರವಿದೆ? ಅಖಂಡವಾದ ಅಸಂಗವಾದ ಆ ತತ್ತ್ವವು ಪ್ರಪಂಚಕ್ಕೆ ರೂಪವನ್ನು ಕೊಟ್ಟಿದೆ ಎಂದು ಕಲ್ಪಿಸುವದಕ್ಕೆ ಯುಕ್ತಿ ಏನಿದೆ? ಇದನ್ನು ಸ್ಪೈನೋಸನು ಸ್ಫುಟಗೊಳಿಸಿರುವದಿಲ್ಲ.

**ಬಾರ್ಕ್ಲೆ**(Berkley) ಎಂಬಾತನು 'ಮನಸ್ಸು ಮತ್ತು ಅದರಲ್ಲಿ ಉಂಟಾಗುವ ಸ್ಥಿತಿವಿಶೇಷಗಳಾದ ವಿಜ್ಞಾನಗಳು ( ideas ) ಇವುಗಳ ಹೊರತು ಮತ್ತೇನೂ ನಮಗೆ ತಿಳಿದುಬರುವಂತಿಲ್ಲ. ಬಾಹ್ಯಪದಾರ್ಥಗಳೆಂದರೆ ಈ ವಿಜ್ಞಾನಗಳೇ ಹೊರತು ಮತ್ತೇನೂ ಅಲ್ಲ. ಪದಾರ್ಥಗಳು ಈ ಜ್ಞಾನಗಳಿಗಿಂತ ಬೇರೆಯಾಗಿವೆ ಎಂದರೆ ಅವು ಸಗುಣವೋ, ನಿರ್ಗುಣವೋ? ಸಗುಣವಾದರೆ ಗುಣಗಳು ವಿಜ್ಞಾನಗಳಲ್ಲದೆ ಮತ್ತೇನು? ನಿರ್ಗುಣವೆಂದರೆ ಅದು ಇವೆ ಎಂಬುದಕ್ಕೆ ಏನು ಪ್ರಮಾಣ? ವಿಜ್ಞಾನಗಳ ಅನುಕ್ರಮಕ್ಕೂ ನಿಯಮಬದ್ಧತೆಗೂ ಕಾರಣವಿರಬೇಕಷ್ಟೆ? ಅವೇ ಸರ್ವಜ್ಞನಾದ **ಈಶ್ವರನು.** ಆ ಈಶ್ವರನೆಂದರೂ ನಮ್ಮ ಮನಸ್ಸಿನ ಜಾತಿಯ ಒಂದು ತತ್ತ್ವವೇ ಹೊರತು ಅದಕ್ಕಿಂತ ವಿಜಾತೀಯತತ್ತ್ವವನ್ನು ನಾವು ಕಲ್ಪಿಸುವದಕ್ಕೇ ಅವಕಾಶವಿಲ್ಲ' ಎಂದು ತರ್ಕಿಸಿರುತ್ತಾನೆ. ಈ ವಾದದಲ್ಲಿ ಮನಸ್ಸಿಗಿಂತ ಬೇರೆಯಾಗಿ ಆತ್ಮನಿರ್ಧಾನೆಯೆ ?--ಎಂಬುದು ಸ್ಪಷ್ಟವಾಗಿಲ್ಲ. ನನ್ನಂತೆಯೇ ಅನೇಕ ಜೀವರು

ಇದಾರೆ ಎಂಬುದು ಮನಸ್ಸಿನಿಂದ ಮಾಡಿಕೊಳ್ಳುವ ತೀರ್ಮಾನಮಾತ್ರವಾಗಿರುವದರಿಂದ ಅವರ ಅಸ್ತಿತ್ವವೂ ನಮ್ಮ ವಿಜ್ಞಾನಮಾತ್ರವೋ, ಅಲ್ಲವೋ ?- ಎಂಬುದು ಸ್ಪಷ್ಟವಾಗಿಲ್ಲ. ನಮ್ಮ ಮನಸ್ಸಿನಲ್ಲಿ ಆಗುತ್ತಿರುವ ನಿಯಮಬದ್ಧ ವಿಕಾರಗಳಿಗೆ ನಾವು ಹೊಣೆಗಾರರಲ್ಲವಾದ್ದರಿಂದ, ಇದೇ ಜಾತಿಯ ಮಹಾಮನಸ್ಸೊಂದು ಈಶ್ವರನೆಂಬ ಹೆಸರಿಗೆ ತಕ್ಕದ್ದಾಗಿದೆ ಎಂದು ಕಲ್ಪಿಸುವದು, ನಮಗೆ ನಮ್ಮ ಮನಸ್ಸುಮಾತ್ರ ತಿಳಿದೀತೇ ಹೊರತು ಮತ್ತೇನೂ ತಿಳಿಯುವಂತಿಲ್ಲ-ಎಂಬ ಸ್ವಸಿದ್ಧಾಂತಕ್ಕೆ ವಿರುದ್ಧವಾಗಿರುವಂತೆ ಕಾಣುತ್ತಿದೆ.

**ಹ್ಯೂಮ್** (Hume) ಎಂಬಾತನ ತರ್ಕಸರಣಿ ಹೇಗಿದೆಯೆಂದರೆ, 'ಬಾರ್ಕ್ಲಿ ಹೇಳುವಂತೆ ನಮಗೆ ವೇದನೆಗಳು, ಸಂಕಲ್ಪ, ಜ್ಞಾನಗಳು, ರಾಗದ್ವೇಷಗಳು, ಶಬ್ದಸ್ಪರ್ಶರೂಪರಸಗಳು--ಇಂಥವೆಲ್ಲ ನೇರಾಗಿ ತಿಳಿಯಬರುವದು ನಿಜವಾದರೂ ನಮ್ಮ 'ಮನಸ್ಸು' ಎಂಬುದು ಯಾವದೆಂಬುದರ ಅರಿವೇನೂ ಆಗುತ್ತಿಲ್ಲ. ಒಳಗೆ ವೇದನಾದಿಗಳಿಗಿಂತ ಬೇರೆಯಾದ ಮನಸ್ಸಾಗಲಿ ಹೊರಗೆ ಗುಣಗಳಿಗಿಂತ ಬೇರೆಯಾಗಿ ಅವಕ್ಕೆ ಆಧಾರವಾಗಿರುವ ದ್ರವ್ಯವಾಗಲಿ ಕಾಣಬರುವದಿಲ್ಲ. ವಿಕಾರಗಳು ನಿಯತವಾಗಿ ಒಂದರಹಿಂದೊಂದು ಆಗುವದನ್ನು ಬಿಟ್ಟರೆ ಕಾರ್ಯಕಾರಣರೂಪವಾದ ನಿತ್ಯದ್ರವ್ಯಗಳನ್ನು ಯಾರೊಬ್ಬರೂ ಕಂಡದ್ದಿಲ್ಲ. ಎಲ್ಲವೂ ವಿಜ್ಞಾನಮಾತ್ರವೇ'. ಈ ವಾದದಲ್ಲಿ ವಿಜ್ಞಾನಗಳು ಗೋಚರವಾಗುವದು ಯಾರಿಗೆ ?- ಎಂಬ ಪ್ರಶ್ನೆಗೆ ಉತ್ತರವಿಲ್ಲವಾದ್ದರಿಂದ ಎಲ್ಲವೂ ಭ್ರಾಂತಿಮಾತ್ರವೇ. ಪರಮಾರ್ಥವೆಂಬುದಾಗಲಿ ಸಮ್ಯಗ್ಜ್ಞಾನವಾಗಲಿ ನಿಜವಾಗಿಲ್ಲ; ಎಲ್ಲವೂ ಕಲ್ಪನಾಮಾತ್ರವೇ ಎಂದಾಗುತ್ತದೆ.

**ಕ್ಯಾಂಟ್** (Kant) ಎಂಬಾತನು ಮನಸ್ಸನ್ನು ವಿಶ್ಲೇಷಣಮಾಡಿದ್ದರಲ್ಲಿ ಕಾಲ, ದೇಶ, ನಿಮಿತ್ತ-ಎಂಬಿವು ಬಾಹ್ಯಪದಾರ್ಥಗಳಲ್ಲವೆಂದೂ ಪ್ರತ್ಯಕ್ಷಜ್ಞಾನಕ್ಕೆ ಪೂರ್ವಭಾವಿಯಾಗಿ ಮನಸ್ಸಿನಲ್ಲಿ ಆಗುವ ರೂಪಭೇದಗಳೆಂದೂ ಕಂಡುಹಿಡಿದನು. ಮನಸ್ಸು ಕಾಲದೇಶನಿಮಿತ್ತಗಳೆಂಬ ಮೂಸೆಯಲ್ಲಿಟ್ಟೇ ವಸ್ತುಗಳನ್ನು ಅರಿಯಬೇಕಾಗಿದೆ. ಮನಸ್ಸಿಗಿಂತ ಆಚೆಯಿರುವ ವಸ್ತುಗಳು ತಾವೇ ಹೇಗಿರುವವೋ ಹೇಳುವದಕ್ಕೆ ಬರುವಂತಿಲ್ಲ. ಹೊರಗಿರುವ ಸ್ವತಂತ್ರ

ವಸ್ತುಗಳು ಮನಸ್ಸಿನ ಮೂಲಕವಾಗಿ ಅದರ ನಿಯಮಕ್ಕೆ ಒಳಪಟ್ಟೇ ನಮಗೆ ತೋರುವ ಪ್ರಪಂಚವಾಗಿ ಅನುಭವಕ್ಕೆ ಬರುತ್ತವೆ—ಎಂಬುದು ಆತನ ತೀರ್ಪು. ಆತನು ಈ ನಿರ್ಣಯಕ್ಕೆ ಬಂದದ್ದು ತರ್ಕಮಾತ್ರದಿಂದಲಾದ್ದರಿಂದ ತರ್ಕದಂತೆ ನೋಡಿದರೆ ಹೊರಗೆ 'ವಸ್ತುಗಳು'— ಅಥವಾ 'ವಸ್ತುವೊಂದು'— ಇವೆಯೊ, ಅಥವಾ ಇವೆಲ್ಲ ನಮ್ಮ ಮನಸ್ಸಿನ ಕಲ್ಪನಾಮಾತ್ರವೊ?—ಎಂಬುದು ಅನಿಶ್ಚಿತವಾಗಿಯೇ ಉಳಿಯುತ್ತದೆ. ಏಕೆಂದರೆ 'ವಸ್ತುಗಳು' ಎಂದು ಬಹುವಚನವನ್ನು ಉಪಯೋಗಿಸುವದಕ್ಕೆ— ಕಾಲಾಕಾಶಗಳ ಆಧಾರವಿಲ್ಲದೆ ಸಂಖ್ಯೆಯೆಂಬುದೇ ಇರುವಂತಿಲ್ಲವಾದ್ದರಿಂದ— ನಮಗೆ ಅವಕಾಶವೇ ಇಲ್ಲ. ಹೊರಗೆ ವಸ್ತುವಿದ್ದರೂ ಅದು ನಮ್ಮ ಮನಸ್ಸಿನಮೇಲೆ ಯಾವದಾದರೂ ಪರಿಣಾಮವನ್ನುಂಟುಮಾಡುವದೆಂದು ಕಲ್ಪಿಸುವದಕ್ಕೂ ಆಧಾರವಿಲ್ಲ; ಏಕೆಂದರೆ ಕಾರ್ಯಕಾರಣಭಾವವೆಂಬುದೂ ಮನಸ್ಸಿನ ರೂಪಭೇದಮಾತ್ರವಾಗಿರುತ್ತದೆಯಾಗಿ ಮನಸ್ಸಿಗೂ ಅದರ ಹೊರಗಿರುವ ಮತ್ತೊಂದು ವಸ್ತುವಿಗೂ ಕಾರ್ಯಕಾರಣಭಾವವನ್ನು ಕಲ್ಪಿಸುವದಕ್ಕೆ ಅವಕಾಶವಿರುವದಿಲ್ಲ.

**ಹೆಗಲ್** (Hegel) ಎಂಬಾತನು ತರ್ಕಪ್ರಧಾನವಾದ ತನ್ನದೇ ಒಂದು ನವೀನಸಿದ್ಧಾಂತವನ್ನು ತೆಗೆದನು. ಪ್ರತಿಯೊಂದು ವಸ್ತುವೂ, ಪ್ರತಿಯೊಂದು ಪ್ರತ್ಯಯವೂ ತನ್ನೊಳಗೇ ತನ್ನ ಪ್ರತಿದ್ವಂದ್ವಿಯನ್ನು ಅಡಕಮಾಡಿಕೊಂಡಿರುತ್ತದೆ; ಬರಿಯ ಇರವು, ಅತ್ಯಂತಾಭಾವ—ಇವೆರಡೂ ಒಂದೇ. ಯಾವದಾದರೊಂದು ಪದಾರ್ಥದ ಪರಿಚ್ಛೇದಕವಿಶೇಷಣಗಳನ್ನು ತೆಗೆದುಹಾಕಿದರೆ ಅದು ಬರಿಯ ಇರವು ಆಗುವದು; ಅದಕ್ಕೂ ಅತ್ಯಂತಾಭಾವಕ್ಕೂ ಯಾವ ಭೇದವೂ ಇಲ್ಲ. ಪದಾರ್ಥವು ವಿಶೇಷಣಪುಂಜವೇ ಆಗಿರುತ್ತದೆ; ವಿಶೇಷಣಗಳೆಂಬಿವು ಪ್ರತ್ಯಯಮಾತ್ರವಾಗಿರುತ್ತವೆ. ಆದ್ದರಿಂದ ಇರುವದೆಂದರೂ ಅರಿವೆಂದರೂ ಒಂದೇ. ವಿಶ್ವವೆಲ್ಲವೂ ಸ್ವತಂತ್ರವಾದ ಮನಸ್ಸೇ, ಅದು ಯಾರೊಬ್ಬರ ಮನಸ್ಸೂ ಅಲ್ಲ; ವಿಷಯವಿಷಯಿಗಳಿಗೆ ಭೇದಸಹಿತಾಭೇದವಿರುತ್ತದೆ. ಇರವನ್ನೂ ಅತ್ಯಂತಾಭಾವವನ್ನೂ ಸೇರಿಸಿದರೆ 'ಆಗುವದು' ಎಂಬ ಹೊಸಭಾವವೊಂದು ಏರ್ಪಡುತ್ತದೆ. ಹೀಗೆಯೇ ಆಗುವದು ಎಂಬುದರ ಪ್ರತಿದ್ವಂದ್ವಿಯನ್ನು ಅದಕ್ಕೆ ಸೇರಿಸಿದರೆ ಮತ್ತೊಂದು ಹೊಸ ಭಾವವು ಬರುವದು.

ಕೊನೆಗೆ 'ನಿರಪೇಕ್ಷಭಾವ' (Absolute Idea) ಎಂಬ ಭಾವವು ಬರುತ್ತವೆ. ಅದರಿಂದ ಪ್ರಕೃತಿಯು ಸಿದ್ಧವಾಗುತ್ತದೆ; ಅವೆರಡೂ ಸೇರಿದರೆ ಪರಮಾತ್ಮ (Absolute Spirit) ಎಂಬ ಅಂತ್ಯಭಾವವು ಏರ್ಪಡುವದಂತೆ! ಈ ತಲೆತಿರುಗಿಸುವ ತರ್ಕದ ಸರಣಿಯು ನನ್ನ ಅಲ್ಪಮತಿಗೆ ಪೂರ್ಣವಾಗಿ ಹಿಡಿಸಿಲ್ಲವೆಂದು ಒಪ್ಪಿಕೊಳ್ಳಬೇಕಾಗಿದೆ. ವಿಶೇಷಣಗಳನ್ನೆಲ್ಲ ತೆಗೆದು ಹಾಕಿದರೆ 'ಇರವು' ಹೇಗೆ ಉಳಿಯುವದೋ, ಆ 'ಇರವು', 'ಅತ್ಯಂತಾಭಾವವೇ ಹೇಗೆ ಆಗುವದೋ ಅದು ತರ್ಕದಲ್ಲಿ ಕುಶಾಗ್ರಮತಿಗಳಾದವರಿಗೆ ಮಾತ್ರವೇ ಗೊತ್ತು. ಪ್ರತ್ಯಯಗಳು ಸ್ವತಂತ್ರವೆಂಬುದೂ ವಿಶ್ವವೆಲ್ಲವೂ ನಿರಪೇಕ್ಷಮನೋಮಾತ್ರವೆಂಬುದೂ ವಿಕಲ್ಪಮಾತ್ರವೇ ಹೊರತು ಮತ್ತೇನೂ ಅಲ್ಲ.

**ಷೋಪೆನ್ ಹ್ಯಾವರ್** (Schopenhauer) ಎಂಬವನು ಪ್ರತ್ಯಯಕ್ಕೆ ಹೆಚ್ಚಿಗೆಯ ಬೆಲೆಯನ್ನು ಕೊಡದೆ 'ಸಂಕಲ್ಪವೇ' ಮೂಲತತ್ತ್ವವೆಂಬ ಸಿದ್ಧಾಂತವನ್ನು ತೆಗೆದನು. ಸಂಕಲ್ಪವನ್ನಾಗಲಿ ವೇದನೆಯನ್ನಾಗಲಿ ಪ್ರತ್ಯಯಮಾತ್ರವೆನ್ನುವದಕ್ಕೆ ಆಗಲಾರದಾದ್ದರಿಂದ ಜೀವನದಲ್ಲಿ ಸಂಕಲ್ಪಕ್ಕೆ ಪ್ರಾಧಾನ್ಯವನ್ನು ಕೊಡಬೇಕಾದದ್ದು ಯುಕ್ತವೆಂದು ಆತನಿಗೆ ತೋರಿರಬೇಕು. ನಿಜವಾಗಿ ನೋಡಿದರೆ ಸಂಕಲ್ಪವಾಗಲಿ, ವೇದನೆಯಾಗಲಿ, ಪ್ರತ್ಯಯವಾಗಲಿ— ಇವುಗಳಲ್ಲಿ ಯಾವದೊಂದೂ ಮಿಕ್ಕೆರಡರ ಹಂಗಿಲ್ಲದೆ ಇರುವದು ಕಂಡುಬಂದದ್ದಿಲ್ಲ. ಇವನ್ನು ವಿಚಾರಮಾಡುವಾತನ ಅರಿವಿಲ್ಲದೆ ಸ್ವತಂತ್ರವಾಗಿ ಕಲ್ಪಿಸುವದಕ್ಕೆ ಅಗುವಂತಿಲ್ಲ. ಪ್ರಪಂಚವೆಲ್ಲವೂ ಸಂಕಲ್ಪದ ವ್ಯಾಪಾರಮಾತ್ರವು, ಭ್ರಾಂತಿಮಾತ್ರವು— ಎಂದು ಈ ತತ್ತ್ವವಿಚಾರಕನು ಹೇಗೆ ಸಿದ್ಧಮಾಡಿಕೊಂಡನೋ ತಿಳಿಯದು.

ಪಾಶ್ಚಾತ್ಯರಲ್ಲಿ ಇನ್ನೂ ಅನೇಕರು ತತ್ತ್ವವಿಚಾರಕರು ಆಗಿಹೋಗಿರುತ್ತಾರೆ. ಅವರಲ್ಲಿ ಬರ್ಗ್ಸನ್ (Bergson) ಎಂಬಾತನ ವಿಚಾರಕ್ರಮವನ್ನು ಮಾತ್ರ ಇಲ್ಲಿ ಪರಾಮರ್ಶಿಸುವೆವು. ಪರಮಾರ್ಥವೆಂಬುದು ಚಲನಮಾತ್ರವಾಗಿರುತ್ತದೆ ; ಈ ಕ್ರಿಯಾಪ್ರವಾಹವು ಹೊಸಹೊಸದಾಗಿ ಸೃಷ್ಟಿಕ್ರಮದಿಂದ ವಿಕಾಸವಾಗುತ್ತಾ ಬರುತ್ತಿದೆ. ಕಾಲವೂ ಅನುವೃತ್ತಿಯೂ ಪರಮಾರ್ಥವೇ

ಆಗಿದೆ; ಅದು ಭ್ರಾಂತಿಮಾತ್ರವೆಂದು ತಿಳಿಯುವದು ತಪ್ಪು, ಕಾರ್ಯಕಾರಣವಾದವು ಸರಿಯಲ್ಲ, ಪರಮಾರ್ಥವು ಸ್ಥಿರವಾಗಿಲ್ಲ ; ವಿಕಾರವೂ ಕ್ರಿಯೆಯೂ ಮಿಥ್ಯೆಯೆಂದು ತಿಳಿಯುವದು ತಪ್ಪು. ಅರಿವೆಂಬುದು ಚಲನರೂಪವಾಗಿಯೇ ಇರುತ್ತದೆ ; ನಿತ್ಯಪ್ರಚಲಿತವಾದ ಅರಿವಿಗೆ ನೈಸರ್ಗಿಕವಾದ ಭಾವನೆ, ಬುದ್ಧಿ, ಅನುಭವ- ಎಂಬ ರೂಪಾಂತರಗಳುಂಟು- ಎಂಬುದು ಆತನ ಮತವು. ಈ ತೀರ್ಮಾನವೂ ತರ್ಕದ ಆಧಾರದಿಂದಲ್ಲದಿದ್ದರೆ ಮತ್ತೆ ಹೇಗೆ ಸಿದ್ಧವಾಗುವದು ? ವಿಕಾರವೆಂಬುದನ್ನು ನಿರ್ವಿಕಾರವಾದ ಅರಿವಿನ ಸಹಾಯವಿಲ್ಲದೆ ಕಲ್ಪಿಸುವದಕ್ಕಾದರೂ ಹೇಗೆ ಬಂದೀತು ? ವಿಕಾರಕ್ಕೆ ಪ್ರಮಾಣವಾಗಿರುವ ಅರಿವು ವಿಕಾರಸ್ವರೂಪವಾಗಿರುವದೆಂದು ಹೇಗೆತಾನೆ ಹೇಳುವದು ? ಸಂತತ ವಿಕಾರವೇ ಪರಮಾರ್ಥವೆಂದಾದರೆ, ನಿರಪೇಕ್ಷವಾದ ಸತ್ಯವೆಂಬುದನ್ನು ಯಾರೂ ಎಂದಿಗೂ ನಿಶ್ಚಯಿಸುವದಕ್ಕೆ ಆಗಲಾರದೆಂದಷ್ಟೇ, ಹೇಳಬೇಕು ?

ಇದುವರೆಗೂ ನಾವು ವಿಚಾರಕ್ಕೆ ತೆಗೆದುಕೊಂಡಿರುವ ವಿಚಾರಕ್ರಮಗಳೆಲ್ಲವೂ- ನಾವು ಇಲ್ಲಿ ವಿಚಾರಮಾಡದೆ ಇರುವ ವಿಚಾರಪ್ರಕ್ರಿಯೆಗಳೂ ಸಹ- ಪರಮಾರ್ಥದ ಏಕದೇಶವನ್ನು ಮಾತ್ರ ಒಂದಾನೊಂದು ದೃಷ್ಟಿಕೋಣದಿಂದ ನೋಡಿ ನಿರ್ಣಯಿಸಿದವುಗಳಾಗಿರುತ್ತವೆ ಎಂಬುದು ಸ್ಪಷ್ಟವಾಗಿದೆ. ಆದ್ದರಿಂದಲೇ ಈ ವಿಚಾರಕರೊಳಗೆ ಏಕತ್ವವಾದಿಗಳು, ನಾನಾತ್ವವಾದಿಗಳು; ಬಾಹ್ಯಾರ್ಥವಾದಿಗಳು, ವಿಜ್ಞಾನಮಾತ್ರವಾದಿಗಳು, ಶೂನ್ಯವಾದಿಗಳು- ಮುಂತಾದ ಪಂಗಡಗಳು ಎದ್ದುಕೊಳ್ಳುವದಕ್ಕೆ ಕಾರಣವಾಗಿರುತ್ತದೆ. ಒಂದೊಂದು ಭೇದದಲ್ಲಿಯೂ ಮತ್ತೂ ಪ್ರಭೇದಗಳುಂಟಾಗಿರುತ್ತದೆ. ಅವರೆಲ್ಲರಿಗೂ ಒಂದೇ ತತ್ತ್ವವನ್ನು ಸರ್ವಸಮ್ಮತವಾಗುವಂತೆ ತರ್ಕದಿಂದ ಸಿದ್ಧಪಡಿಸಬೇಕೆಂಬ ಆಶೆಯಿದೆ. ಬೈಬಲಿನಲ್ಲಿ ಒಂದು ಆಖ್ಯಾನವಿದೆ. ಷಿನಾರ್ ಎಂಬಲ್ಲಿ ಜನರೆಲ್ಲ ಸೇರಿ ಒಂದು ದೊಡ್ಡ ಕೋಟೆಯನ್ನು ಕಟ್ಟಿ ಅದರೊಳಗೆ ಐಕಮತ್ಯದಿಂದ ಇರಬೇಕೆಂದು ಸಂಕಲ್ಪಿಸಿದರಂತೆ ; ಆದರೆ ಆ ರಾತ್ರಿ ನಿದ್ರಿಸಿ ಬೆಳಗ್ಗೆ ಎಚ್ಚರುವದರೊಳಗಾಗಿ ಅವರ ಮಾತುಗಳು ಒಬ್ಬರಿಗೊಬ್ಬರಿಗೆ ತಿಳಿಯಲಾರದಷ್ಟು ಭಿನ್ನವಾಗಿಬಿಟ್ಟವಂತೆ ! ಅದಕ್ಕೆ **ಬೇಬೆಲ್** (Babel) ಎಂದು ಹೆಸರಾಯಿತು. ತರ್ಕಪ್ರಧಾನರಾದವರ ಭಾಷೆಗಳೂ ಇಂಥ ಬೇಬೆಲ್ ಆಗಿ

ಬಿಟ್ಟಿವೆ; ಏಕೆಂದರೆ ಒಬ್ಬರ ಮತವು ಓಬ್ಬರಿಗೆ ಒಪ್ಪಿಲ್ಲವಾಗಿದೆ. ಇವಕ್ಕೆಲ್ಲ ಅಕೃತ್ಸ್ನದೃಷ್ಟಿಯೇ ಕಾರಣ. ಪ್ರಾಣ (ಉಸಿರಾಡುವವನು), ವಾಕ್ (ಮಾತಾಡುವವನು), ಚಕ್ಷುಸ್ಸು (ನೋಡುವವನು), ಶ್ರೋತ್ರ (ಕೇಳುವವನು), ಮನಸ್ಸು (ಮನನಮಾಡುವವನು)- ಎಂದು ಮುಂತಾಗಿ ಹೇಳಿದರೆ ಹೇಗೆ ಅಪೂರ್ಣವಾಗುವದೋ, ಹಾಗೆ ಏಕದೇಶವನ್ನು ಹಿಡಿದುಮಾಡುವ ತರ್ಕಸಿದ್ಧಾಂತವೆಲ್ಲ ಅಪೂರ್ಣವೇ. ಆತ್ಮ (ಎಲ್ಲವನ್ನೂ ವ್ಯಾಪಿಸಿರುವವನು) ಎಂದರೆ ಹೇಗೆ ಪೂರ್ಣವಾದ ಅರ್ಥವನ್ನು ತಿಳಿಸುವ ಮಾತಾಗುವದೋ, ಹಾಗೆಯೇ ಜ್ಞೇಯರಾಶಿಯನ್ನೆಲ್ಲ ವಿಚಾರಮಾಡುವದು ಪೂರ್ಣದರ್ಶನವಾಗುವದು, ಅದರಿಂದಲೇ ಎಲ್ಲವೂ ತಿಳಿಯುವದು- ಎಂದು ವೇದಾಂತದಲ್ಲಿ ಪೂರ್ಣದೃಷ್ಟಿಯನ್ನು ಹೊಗಳಿರುತ್ತದೆ.

ಆದ್ದರಿಂದ ಪ್ರತ್ಯಗ್ದೃಷ್ಟಿಯನ್ನನುಸರಿಸಿಕೊಂಡು ತರ್ಕಾತೀತವಾದ ಪೂರ್ಣವನ್ನು ತಿಳಿಯುವದಕ್ಕೆ ಯತ್ನಿಸಬೇಕು. ಇಲ್ಲದಿದ್ದರೆ ತತ್ತ್ವವಿಚಾರದಲ್ಲಿ ಎಂದಿಗೂ ಐಕಮತ್ಯವು ಸಿದ್ಧಿಸಲಾರದು.

---

# ೪. ಶಾಂಕರವೇದಾಂತಪ್ರಕ್ರಿಯೆಯ ವಿಶೇಷಲಕ್ಷಣಗಳು

ಲೌಕಿಕವಿಜ್ಞಾನಶಾಸ್ತ್ರಜ್ಞರೂ ಪಾಶ್ಚಾತ್ಯತತ್ತ್ವವಿಚಾರಕರೂ ನಮ್ಮ ದೇಶದ ದರ್ಶನಕಾರರೂ ಎಲ್ಲರೂ ತರ್ಕಪ್ರಧಾನರೇ ಆಗಿರುತ್ತಾರೆ; ಅವರ ತರ್ಕಕ್ಕೆ ಆಧಾರವಾಗಿರುವ ಅನುಭವವು ಖಂಡಾನುಭವವಾಗಿದೆ. ಪರಾಗ್ದೃಷ್ಟಿಯನ್ನನುಸರಿಸಿರುವದರಿಂದಲೇ ಇವರಿಗೆಲ್ಲ ಅಪೂರ್ಣಾನುಭವದ ಆಧಾರದಿಂದ ತರ್ಕಮಾಡುವ ಹವ್ಯಾಸವುಂಟಾಗಿರುತ್ತದೆ; ಒಬ್ಬರ ಸಿದ್ಧಾಂತಕ್ಕೆ ಮತ್ತೊಬ್ಬರ ಸಿದ್ಧಾಂತವು ವಿರುದ್ಧವಾಗುತ್ತಾಬಂದಿದೆ- ಎಂದು ತಿಳಿದುಕೊಂಡದ್ದಾಯಿತು.

ತತ್ತ್ವವಿಚಾರಕರಲ್ಲಿ ಕೆಲವರು ಒಂದೊಂದು **ಧರ್ಮಗ್ರಂಥ**ವನ್ನು ಪ್ರಮಾಣವಾಗಿ ಹಿಡಿದಿರುತ್ತಾರೆ. **ವೇದ**ದ ಕರ್ಮಕಾಂಡ, ಜ್ಞಾನಕಾಂಡ, ಪಾರಸಿಯವರ **ಅವೆಸ್ಟ,** ಯಹೂದಿ ಮತ್ತು ಕ್ರಿಸ್ತಿಯನರ **ಬೈಬಲ್,** ಮುಸಲ್ಮಾನರ **ಕುರಾನ್**- ಇವುಗಳನ್ನು ಪ್ರಮಾಣವಾಗಿ ಹಿಡಿದು ತಮ್ಮತಮ್ಮ ವ್ಯಾಖ್ಯಾನವೇ ಸರಿ ಎಂದು ಆಗ್ರಹಪೂರ್ವಕವಾಗಿ ವಾದಮಾಡಿರುವವರು ಅನೇಕರಿರುತ್ತಾರೆ. ಪೂರ್ವಾಪರವಿರೋಧವಿಲ್ಲದಂತೆ ತರ್ಕದಿಂದ ಒಂದು ಸಿದ್ಧಾಂತವನ್ನು ಉಪಪಾದನೆಮಾಡಿಕೊಟ್ಟಮಾತ್ರದಿಂದ ಅದೇ ಕಟ್ಟಕಡೆಯ ಮಾತಾಗುವದಿಲ್ಲ; ಏಕೆಂದರೆ ಹಾಗೆಯೇ ಮತ್ತೊಬ್ಬನು ಮತ್ತೊಂದು ದೃಷ್ಟಿಕೋಣವನ್ನು ಅವಲಂಬಿಸಿ ಪೂರ್ವಾಪರವಿರೋಧ ವಿಲ್ಲದಂತೆ ತನ್ನ ಸಿದ್ಧಾಂತವನ್ನು ಉಪಪಾದನೆಮಾಡಬಹುದಾಗಿದೆ. ಆಗ ಯಾವದು ಸರಿ ಎಂಬುದಕ್ಕೆ ನಮಗೆ ವಿನಿಗಮಕವೇನೂ ಇರುವದಿಲ್ಲ. ಹೀಗೆಯೇ ಆಯಾ ಧರ್ಮಗ್ರಂಥಗಳನ್ನು ಪ್ರಮಾಣವೆಂದಿಟ್ಟುಕೊಂಡವರೂ ಮತ್ತೊಂದು ಗ್ರಂಥವನ್ನವಲಂಬಿಸಿದವರೊಡನೆ ಹೇಗೋ ಹಾಗೆಯೇ ತಮ್ಮತಮ್ಮೊಳಗೇ ವಿವಾದಮಾಡುತ್ತಿರುವದೂ ಕಂಡುಬಂದಿರುತ್ತದೆ; ಇವರೆಲ್ಲರೂ ತರ್ಕವನ್ನೇ ಅವಲಂಬಿಸಿರುತ್ತಾರೆ.

ಇನ್ನು **ವೇದಾಂತವಿಚಾರ**ದತ್ತ ಮನಸ್ಸನ್ನು ಹೊರಳಿಸಿದರೂ **ಆಚಾರ್ಯರ ಹಿಂದೆ ಅನೇಕರು ಅದ್ವೈತವಾದಿಗಳಿದ್ದರು;** ಅವರೆಲ್ಲರೂ ಶ್ರುತಿಯನ್ನು ಪ್ರಮಾಣವೆಂದು ನಂಬಿಯೇ ತಮ್ಮತಮ್ಮ ವ್ಯಾಖ್ಯಾನಕ್ಕೆ ಪುಷ್ಟಿ

ಯನ್ನು ಕೊಡುವ ತರ್ಕವನ್ನು ಒಡ್ಡುತ್ತಲೇ ವಾದಿಸುತ್ತಿದ್ದರು. ಈಚೆಗೆ ಅವರ ಅನುಯಾಯಿಗಳಾದ ವೇದಾಂತಿಗಳೂ ಅವರ ವಿರೋಧಿಗಳಾದ ವೇದಾಂತಿಗಳೂ ತಮ್ಮತಮ್ಮ ದೃಷ್ಟಿಯಿಂದ ಶ್ರುತಿಗೆ ವ್ಯಾಖ್ಯಾನವನ್ನು ಮಾಡುತ್ತಲೂ ತಮ್ಮತಮ್ಮ ಪ್ರಕ್ರಿಯೆಯನ್ನು ತರ್ಕದಿಂದ ಸಿದ್ಧಪಡಿಸಿ ತೋರಿಸುತ್ತಲೂ ಬಂದಿರುತ್ತಾರೆ. ಇವರೆಲ್ಲರೊಳಗೆ ಇಂಥವೊಂದು ಪ್ರಕ್ರಿಯೆಯು ಸರಿ ಎಂಬುದಕ್ಕೆ ನಿಶ್ಚಾಯಕವಾದ ಆಧಾರವೇನಾದರೂ ಇದೆಯೆ? ಆಚಾರ್ಯರು ಅನುಸರಿಸಿರುವ ಸಂಪ್ರದಾಯದ ವೇದಾಂತದಲ್ಲಿರುವ ವಿಶೇಷಗಳೇನು? ಇದನ್ನು ಈಗ ವಿಚಾರಿಸಬೇಕಾಗಿದೆ.

ವೇದಾಂತಸಾಮಾನ್ಯದಲ್ಲಿ ವೇದವನ್ನೂ ವೇದಾಂತರ್ಗತವಾದ ಉಪನಿಷತ್ತನ್ನೂ ಪ್ರಮಾಣವೆಂದು ಹಿಡಿಯಲಾಗಿದೆಯಷ್ಟೆ? ಆದರೆ ಉಪನಿಷತ್ತನ್ನು ಯಾವ ಕಾರಣದಿಂದ ಪ್ರಮಾಣವೆನ್ನಬೇಕು?– ಎಂಬ ವಿಷಯಕ್ಕೆ ದರ್ಶನಕಾರರಲ್ಲಿಯೂ ವೇದಾಂತಿಗಳಲ್ಲಿಯೂ ಮತಭೇದವಿದೆ. ಕೆಲವರು ವೇದವಾಕ್ಯವನ್ನು **ಆಪ್ತವಾಕ್ಯ**ವೆಂದು ಒಪ್ಪಿರುತ್ತಾರೆ; ವೇದೇತರವಾದ ಆಗಮಗಳಂತೆಯೇ ಸರ್ವಜ್ಞನಾದ ಪರಮೇಶ್ವರನ ವಾಕ್ಯವಾದ್ದರಿಂದ ವೇದವೂ ಪ್ರಮಾಣವೆಂದು ಅವರ ಮತ. ಈ ಅಭಿಪ್ರಾಯದವರು 'ಆಗಮಪ್ರಾಮಾಣ್ಯವನ್ನು ಒಪ್ಪುವವರ ಮತವನ್ನೂ ಕುರಾನ್‌ಗ್ರಂಥವು ಈಶ್ವರನಿಂದ ಮಹಮದ್ ಪೈಗಂಬರನಿಗೆ ಬಂದಿತೆಂದು ನಂಬುವ ಮುಸಲ್ಮಾನರು ಮತ್ತು ಬೈಬಲ್ ಗ್ರಂಥವು ಈಶ್ವರ ಪ್ರೇರಿತರಾದ ಮಹಾತ್ಮರಿಂದ ಲಿಖಿತವಾಗಿದೆ ಎಂದು ನಂಬುವ ಕ್ರಿಸ್ತಿಯನರು– ಇವರ ಮತವನ್ನೂ ಏತಕ್ಕೆ ಒಪ್ಪುವದಿಲ್ಲ?' ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಬೇಕಾದದ್ದು ಉಳಿಯುತ್ತದೆ. ಆಪ್ತವಾಕ್ಯಗಳೆಂದು ಗಣಿಸಲಾಗಿರುವ ಗ್ರಂಥಗಳಲ್ಲಿ ಒಂದಕ್ಕೊಂದು ವಿರೋಧವು ಕಂಡುಬಂದರೆ ಯಾವದನ್ನು ಪ್ರಮಾಣವೆಂದು ಹಿಡಿಯಬೇಕು?– ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವದೂ ಇವರಿಂದ ಆಗುವಂತಿಲ್ಲ. ಮತ್ತೆ ಕೆಲವರು ಮೀಮಾಂಸಕರ ಮತವನ್ನವಲಂಬಿಸಿ ವೇದವು **ಅಪೌರುಷೇಯ**ವಾಗಿರುವದರಿಂದ ಪುರುಷಗತ ದೋಷಗಳು ಯಾವವೂ ಶ್ರುತಿಯಲ್ಲಿಲ್ಲವೆಂಬ ಕಾರಣದಿಂದ ಅದನ್ನು ಪ್ರಮಾಣವೆನ್ನುತ್ತೇವೆನ್ನುತ್ತಾರೆ. ಹೀಗೆಯೇ ಮತಾಂತರದವರೂ ತಮ್ಮ ಮತಗ್ರಂಥವು ಅಪೌರುಷೇಯವೆಂದು ವಾದಿಸಿ

ದಾಗ ಯಾವ ಗ್ರಂಥವನ್ನು ಏತಕ್ಕೆ ಪ್ರಮಾಣವೆಂದು ಹಿಡಿಯಬೇಕೆಂಬ ಪ್ರಶ್ನೆಯು ಅವರ ಪಕ್ಷದಲ್ಲಿ ಅನಿರ್ಣೀತವಾಗಿಯೇ ಉಳಿದುಕೊಳ್ಳುವದೆಂಬುದು ಸ್ಪಷ್ಟವಾಗಿದೆ.

**ಶ್ರೀಶಂಕರಭಗವತ್ಪಾದರವರು ಅನುಸರಿಸಿರುವ ಸಂಪ್ರದಾಯ**ದಲ್ಲಿ ವೇದಾಂತಗಳು– ಅಥವಾ ಉಪನಿಷತ್ತುಗಳು– ಏತಕ್ಕೆ ಪ್ರಮಾಣವೆಂಬ ಪ್ರಶ್ನೆಗೆ ಒಂದು ಸರ್ವಸಂಮತವಾಗುವ ಸ್ವಾಭಾವಿಕವಾದ ಉತ್ತರವನ್ನು ಕೊಟ್ಟಿರುತ್ತಾರೆ. **'ಜ್ಞಾಪಕಂ ಶಾಸ್ತ್ರಂ ನ ತು ಕಾರಕಮ್'** ಶಾಸ್ತ್ರವು ಇಲ್ಲದ ವಸ್ತುವನ್ನು ಉಂಟುಮಾಡುವದಿಲ್ಲ; ಇದ್ದುದ್ದನ್ನು ಇದ್ದಂತೆ ತಿಳಿಯಿಸಿ ಕೊಡುವದರಿಂದ ಪ್ರಮಾಣವೆನಿಸಿದೆ ಎಂಬುದು ಅವರ ಅಭ್ಯುಪಗಮ. ಕುಂಬಾರ, ತಿಗುರಿ, ಕೋಲು, ಮಣ್ಣು– ಮುಂತಾದದ್ದು ಗಡಿಗೆಯನ್ನುಂಟು ಮಾಡುವಂತೆ ಶಾಸ್ತ್ರವು ಯಾವದೊಂದು ವಿಷಯವನ್ನೂ ಹೊಸದಾಗಿ ಉಂಟು ಮಾಡುವದಿಲ್ಲ. ಪ್ರತ್ಯಕ್ಷಾದಿಗಳು ಹೇಗೆ ವಸ್ತುವನ್ನು ಇದ್ದದ್ದು ಇದ್ದಂತೆ ತೋರಿಸಿಕೊಡುವದರಿಂದಲೇ ಪ್ರಮಾಣವೆನಿಸಿರುವವೋ, ಶಾಸ್ತ್ರವೂ ಹಾಗೆಯೇ ಬ್ರಹ್ಮವಸ್ತುವನ್ನು ಇದ್ದುದ್ದು ಇದ್ದಂತೆಯೇ ತಿಳಿಸಿಕೊಡುವದರಿಂದ ಪ್ರಮಾಣವೆನಿಸಿರುತ್ತದೆ. ಯಾವ ಪ್ರಮಾಣವೇ ಆಗಲಿ, ತನ್ನ ಪ್ರಮೇಯವನ್ನು ಅನುಭವಕ್ಕೆ ತಂದುಕೊಡುವದರಿಂದಲೇ ಪ್ರಮಾಣವೆನಿಸಿರುತ್ತದೆ; ಅದು ಮತ್ತೊಂದು ಪ್ರಮಾಣವು ತಿಳಿಸಿಕೊಡದೆ ಇರುವದನ್ನು ತಿಳಿಸುತ್ತದೆ; ಅಷ್ಟರಿಂದಲೇ ಅದು ಪ್ರಮಾಣವೆಂದು ಒಪ್ಪುತ್ತೇವೆ; ಅದನ್ನು ಪ್ರಮಾಣವೆಂದು ನಂಬಬೇಕಾದದ್ದೇನೂ ಇರುವದಿಲ್ಲ. ಪ್ರಮಾಣವು ತಿಳಿಸಿಕೊಟ್ಟದ್ದು ಮತ್ತೊಂದು ಅನುಭವಕ್ಕೆ ವಿರುದ್ಧವಾದರೆ ಬಾಧಿತವಾದದ್ದು ಅಪ್ರಮಾಣವೆಂದಾಗುತ್ತದೆ. ಇದೆಲ್ಲವನ್ನೂ ಮನಸದಂದು ಆಚಾರ್ಯರು **'ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್, ಕಿಂ ತು ಶ್ರುತ್ಯಾದಯೋಽನುಭವಾದಯಶ್ಚ ಯಥಾಸಂಭವಮಿಹ ಪ್ರಮಾಣಮ್ । ಅನುಭವಾವಸಾನತ್ವಾತ್ ಭೂತವಸ್ತುವಿಷಯತ್ವಾಚ್ಚ ಬ್ರಹ್ಮವಿದ್ಯಾಯಾಃ'** (ಸೂ. ಭಾ. ೧–೧–೨) ಎಂದು ಹೇಳಿರುತ್ತಾರೆ. ಕರ್ಮಕಾಂಡದಲ್ಲಿ ಹೇಳಿರುವ ಕರ್ಮವಾಕ್ಯವು ಲೋಕಾಂತರದಲ್ಲಿ ಕಾಲಾಂತರದಲ್ಲಿ ಆಗುವ ಫಲವನ್ನು ಹೇಳುವದರಿಂದ ಆ ವಿಷಯಕ್ಕೆ ಶ್ರುತ್ಯಾ

ದಿಗಳೇ ಪ್ರಮಾಣ; ಆದರೆ ಬ್ರಹ್ಮವಿದ್ಯೆಯು **ಅನುಭವ**ದಲ್ಲಿ ಕೊನೆಗಾಣು ವದರಿಂದಲೂ ಈಗಲೆ ಇದ್ದುಕೊಂಡಿರುವ ವಸ್ತುವನ್ನು ತಿಳಿಸಿಕೊಡುವದ ರಿಂದಲೂ ಶ್ರುತ್ಯಾದಿಗಳೇ ಅಲ್ಲದೆ, ಅನುಭವಾದಿಗಳೂ ಪ್ರಮಾಣ ಎಂದು ಆ ವಾಕ್ಯಕ್ಕೆ ಅರ್ಥ. ವೇದಾಂತವು ಹೇಳುವ ಬ್ರಹ್ಮವಸ್ತುವು ಇಲ್ಲಿಯೇ ಈಗಲೇ ಅನುಭವಕ್ಕೆ ಬರುವ ತತ್ತ್ವವಾದ್ದರಿಂದ ಅದನ್ನು ಹೇಳುವ ವಾಕ್ಯವು ಪ್ರಮಾಣವಾಗಿರುತ್ತದೆ- ಎಂದಂತೆ ಆಯಿತು. ಈ ದೃಷ್ಟಿಯಿಂದ ನೋಡಿ ದಾಗ ಬೇರೊಂದು ಮತದವರ ಗ್ರಂಥವು ಹೇಳುವ ವಸ್ತುವಿನ ಅನುಭವವು ಇಲ್ಲಿಯೇ ಆಗುವದಾದರೆ ಅವಶ್ಯವಾಗಿ ಅದನ್ನು ಪ್ರಮಾಣವೆಂದೇ ಅಂಗೀಕರಿಸು ತ್ತೇವೆ ಎಂಬುದು ಆಚಾರ್ಯರ ಮತವೆಂದಾಗುತ್ತದೆ. ಆದ್ದರಿಂದಲೇ ಅವರು **'ಪರಮತಮಪ್ರತಿಷಿದ್ಧಮನುಮತಂ ಭವತಿ'** (ಸೂ. ಭಾ. ೨-೪-೧೨) ಎಂದಿರುತ್ತಾರೆ. ಹೇಗೆ ಆಪ್ತವಾಕ್ಯವೆಂಬಲ್ಲಿ ಆಪ್ತರಲ್ಲಿ ಆರ್ಯರು, ಮ್ಲೇಚ್ಛರು ಎಂಬ ಭೇದವಿಲ್ಲವೆಂದು ತರ್ಕಭಾಷ್ಯಕಾರರು ಬರೆದಿರುತ್ತಾರೋ ಹಾಗೆಯೇ ಇದು.

ಅಂತು **ಅನುಭವವು** ಶಾಸ್ತ್ರಪ್ರಾಮಾಣ್ಯಕ್ಕೆ ಒರೆಗಲ್ಲು ಎಂದು ಹೇಳಿದ್ದು ಆಚಾರ್ಯರ ಪ್ರಕ್ರಿಯೆಯ ಒಂದು ವಿಶೇಷವಾಯಿತು. 'ಅನು ಭವಾದಯಶ್ಚ' ಅನುಭವಾದಿಗಳೂ ಪ್ರಮಾಣವು ಎಂದು ಹೇಳಿದ್ದರಿಂದ **ತರ್ಕ**ವನ್ನೂ ಇಲ್ಲಿ ಸ್ವೀಕರಿಸಬಹುದು ಎಂದಾಯಿತು. ಏಕೆಂದರೆ ತರ್ಕವು ಅನುಭವಕ್ಕೆ ಅನುಸಾರವಾಗಿಯೇ ಇರಬೇಕಾಗುತ್ತದೆ. ಸುಪ್ರಸಿದ್ಧವಾದ ಕಥೆಯಲ್ಲಿ 'ಭಟ್ಟಸ್ಯ ಕಟ್ಯಾಂ ಸರಟಃ ಪ್ರವಿಷ್ಟಃ' 'ಭಟ್ಟರ ಸೊಂಟದಲ್ಲಿ ಓತಿ ಕೇತವು ಹೊಕ್ಕಿದೆ'- ಎಂಬ ವಾಕ್ಯವನ್ನು ಕೇಳಿದ ವ್ಯಾಕರಣದ ಶಿಷ್ಯನು ಶಬ್ದಗಳ ಲಿಂಗವಚನವಿಭಕ್ತಿಗಳನ್ನೂ ಅನ್ವಯಕ್ರಮವನ್ನೂ ನೋಡಿ ಎಲ್ಲವೂ ಸರಿಹೋಯಿತೆಂದು ಸುಮ್ಮನಾದರೂ ತರ್ಕದ ಶಿಷ್ಯನು 'ಓತಿಕೇತನು ಸೊಂಟ ದೊಳಕ್ಕೆ ಹೋಗುವದೆಂದರೆ ಹೇಗೆ? ಅದು ಅನುಭವಸಂಮತವಲ್ಲವಲ್ಲ?' ಎಂದು ವಿಚಾರವನ್ನು ಮಾಡಿದಂತೆ ಯಾವದಾದರೊಂದು ವಿಷಯವನ್ನು ಒಂದು ವಾಕ್ಯವು ಹೇಳಿದರೆ ಅದು ಅನುಭವಕ್ಕೆ ಹೊಂದುಗೆಯಾಗುತ್ತದೆಯೆ? ತರ್ಕಬದ್ಧವೆ?-ಎಂದು ವಿಚಾರಮಾಡುವದು ಯುಕ್ತವೂ ಆಗಿದೆ. ತರ್ಕವನ್ನು ಮಾಡುವದಕ್ಕೆ ತೆಗೆದುಕೊಂಡ ವಿಚಾರಗಳು ಪೂರ್ವಾಪರವಿರುದ್ಧವಲ್ಲ

ದಿದ್ದರೂ ಆ ತರ್ಕದಿಂದ ತೆಗೆದ ನಿರ್ಣಯವು ಸಿದ್ಧಾಂತವೇ ಎನ್ನುವದಕ್ಕಾಗುವದಿಲ್ಲ; ಏಕೆಂದರೆ ಎರಡು ವಿರುದ್ಧಸಿದ್ಧಾಂತಗಳು ತರ್ಕಕ್ಕೆ ಹೊಂದಿಕೆಯಾಗಿದ್ದರೆ ಪೂರ್ವಾಪರವಿರೋಧವಿಲ್ಲವೆಂಬುದೊಂದೇ ಕಾರಣದಿಂದ ಅವೆರಡೂ ಸರಿ ಎನ್ನುವದಕ್ಕೆ ಬರಲಾರದು. ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ **ತರ್ಕಗ್ರಂಥಗಳ ಭಾಷೆ** ಎರಡು ಪ್ರಕಾರದ್ದಾಗಿದೆ. ಸೂತ್ರಭಾಷ್ಯ, ವಾರ್ತಿಕ-ಮುಂತಾದ ಪ್ರಾಚೀನತರ್ಕದ ಭಾಷೆಯು ವೇದಾಂತಭಾಷ್ಯಾದಿಗ್ರಂಥಗಳ ಭಾಷೆಯಂತೆಯೇ ಇದೆ ; ಆದರೆ ಈಚೆಗೆ ನವದ್ವೀಪದಲ್ಲಿ ಹುಟ್ಟಿದ ಹೊಸ ಭಾಷೆಯ ತರ್ಕವು ಚಿಂತಾಮಣಿ, ದೀಧಿತಿ, ಗಾದಾಧರಿ-ಇವೇ ಮುಂತಾದ ಗ್ರಂಥಗಳಲ್ಲಿ ಕಾಣಬರುತ್ತದೆ. ಆ ಬಗೆಯ ಗ್ರಂಥಗಳು ನಿಷ್ಕೃಷ್ಟಲಕ್ಷಣವಾಕ್ಯಗಳನ್ನು ಏರ್ಪಡಿಸುವದು, ಹೇತ್ವಾಭಾಸಗಳನ್ನೂ ನಿಗ್ರಹಸ್ಥಾನಗಳನ್ನೂ ಬಗೆಬಗೆಯಿಂದ ತೋರಿಸಿ ಪ್ರತಿವಾದಿಗಳನ್ನು ಜಯಿಸುವದು - ಮುಂತಾದದ್ದರಲ್ಲಿಯೇ ಹೆಚ್ಚಾಗಿ ವ್ಯಾಪೃತವಾಗಿವೆ ; 'ಅವಚ್ಛೇದಕಾವಚ್ಛಿನ್ನ', 'ನಿರೂಪ್ಯನಿರೂಪಕಭಾವ'- ಮುಂತಾದ ಪಾರಿಭಾಷಿಕಶಬ್ದಗಳ ಪ್ರವಾಹರೂಪವಾದ ಭಾಷೆಯನ್ನು ಅಂಗೀಕರಿಸಿವೆ. ಇತ್ತೀಚಿನ ದ್ವೈತಾದ್ವೈತವೇದಾಂತಿಗಳು ಒಬ್ಬರೊಡನೊಬ್ಬರು ವಾದಮಾಡುವಾಗ ಈ ನವೀನ ತರ್ಕದ ಭಾಷಾಶೈಲಿಯನ್ನು ಅನುಕರಿಸಿ ತಮ್ಮದೇ ಆದ ಒಂದು ಪರಿಭಾಷೆಯನ್ನೂ ಏರ್ಪಡಿಸಿಕೊಂಡು ವಿಚಾರಕ್ಕೆ ಹೊರಟಿರುವದರಿಂದ ತರ್ಕವು ಅನುಭವಾನುಸಾರವಾಗಿರಬೇಕೆಂಬ ಮೂಲತತ್ತ್ವವನ್ನು ಬಿಟ್ಟು ಕೇವಲ (ಶುಷ್ಕ) ತರ್ಕಕ್ಕೂ ಮೆಚ್ಚುಗೆಯನ್ನು ತೋರಿಸುವ ಪರಿಸ್ಥಿತಿಯುಂಟಾಗಿಬಿಟ್ಟಿದೆ. ಹೀಗಾಗಿ ವೇದಾಂತದಲ್ಲಿ ಶಾಸ್ತ್ರವೇ ಪ್ರಮಾಣ ಎಂಬುದು ಹೋಗಿ ತರ್ಕಭಾಷೆಯ ಶಬ್ದಗಳ ರಾಶಿಯನ್ನುಚ್ಚರಿಸುವದೇ ವೇದಾಂತಕ್ಕೆ ಪ್ರಮಾಣ ಎಂಬವರೆಗೂ ವಿಚಾರಕ್ರಮವು ಹೋಗಿದೆ !

ಹೀಗೆ ತರ್ಕವು ಅನುಭವದ ನೆರಳಿನಲ್ಲಿಯೇ ಇದ್ದುಕೊಂಡು ಮೊದಲು, ನಡುವೆ, ಕೊನೆ-ಎಲ್ಲೆಲ್ಲಿಯೂ ಅನುಭವಕ್ಕೆ ಪ್ರಾಧಾನ್ಯವನ್ನು ಕೊಡುತ್ತಿದ್ದು ಈಗ 'ಅವ್ಯಾಪ್ತಿ', 'ಅತಿವ್ಯಾಪ್ತಿ', 'ಅಸಂಭವ', 'ಆತ್ಮಾಶ್ರಯ', 'ಅನ್ಯೋನ್ಯಾಶ್ರಯ', 'ಚಕ್ರಿಕಾಪತ್ತಿ'-ಮುಂತಾದ ದೋಷಗಳನ್ನು ಒಬ್ಬರಮೇಲೊಬ್ಬರು ಹೊರಿಸುವದಕ್ಕೆ ಮಾತ್ರ ಸಹಾಯಕವಾಗಿಬಿಟ್ಟಿದೆ. ಶಾಸ್ತ್ರವ

ಅನುಭವದಿಂದ ದೂರ ಸರಿದದ್ದರಿಂದ ನಮಗೆ ಬೇಕಾದ ವಾಕ್ಯಗಳನ್ನು ನಾವು ಆರಿಸಿಕೊಂಡು **'ಏಕಮೇವಾದ್ವಿತೀಯಮ್'** ಎಂದಿರುವದರಿಂದ **ಅದ್ವೈತ, 'ದ್ವಾ ಸುಪರ್ಣಾ'** ಎಂದಿರುವದರಿಂದ **ದ್ವೈತ, 'ಯ ಆತ್ಮನಿ ತಿಷ್ಠನ್'** ಎಂದು ಮುಂತಾಗಿರುವದರಿಂದ **ವಿಶಿಷ್ಟಾದ್ವೈತ**– ಎಂದು ಮುಂತಾಗಿ ವೇದಾಂತಸಿದ್ಧಾಂತಗಳನ್ನು ವಾಕ್ಯೋದಾಹರಣಮಾತ್ರ ದಿಂದಲೇ ಸಾಧಿಸಿದೆವೆಂಬುದೂ, ಅದಕ್ಕೆ ಅನುಕೂಲವಾಗಿ ತರ್ಕಪಙ್ಕ್ತಿಗಳ ನ್ನುಚ್ಚರಿಸುವದೂ ವೇದಾಂತ–ಎಂಬಲ್ಲಿಗೆ ಬಂದು ಮುಟ್ಟಿರುತ್ತೇವೆ !

ಇದರ ಜೊತೆಗೆ ವೇದಾಂತಿಗಳು ಈಗ ಇನ್ನೂ ಒಂದು ಹೆಜ್ಜೆಯನ್ನು ಮುಂದಿಟ್ಟಿರುತ್ತಾರೆ. 'ಭಾಮತೀಪ್ರಸ್ಥಾನದ ಪ್ರಕಾರ ಹೀಗಾಯಿತು, ಆದರೆ ವಿವರಣಪ್ರಸ್ಥಾನದ ಪ್ರಕಾರ ಹಾಗಾಗುತ್ತದೆ', 'ದೃಷ್ಟಿಸೃಷ್ಟಿವಾದದ ಪ್ರಕಾರ ಹೀಗೆ, ಸೃಷ್ಟಿದೃಷ್ಟಿವಾದದ ಪ್ರಕಾರ ಹಾಗೆ', 'ಇದು ಅವಚ್ಛೇದವಾದದವರ ಮತ, ಅದು ಪ್ರತಿಬಿಂಬವಾದದವರ ಮತ' – ಮುಂತಾಗಿ ವೇದಾಂತದಲ್ಲಿ ಪ್ರಕ್ರಿಯಾಭೇದಗಳನ್ನವಲಂಬಿಸುವ ಹವ್ಯಾಸವು ವಾದಿಗಳಿಗೆ ಬಂದುಬಿಟ್ಟಿದೆ. **'ಕ್ರಿಯಾಯಾಮಿವ ವಸ್ತುನಿ ವಿಕಲ್ಪಸ್ಯಾಸಂಭವಾತ್'** ಕರ್ಮದಲ್ಲಿ ಹೀಗೂ ಆಗಬಹುದು, ಹಾಗೂ ಆಗಬಹುದು– ಎಂಬ ವಿಕಲ್ಪವಿರಬಹುದಾ ದರೂ ವಸ್ತುವನ್ನು ಹೀಗೂ ಇರಬಹುದು, ಹಾಗೂ ಇರಬಹುದು– ಎಂದು ವಿಕಲ್ಪಿಸುವದಕ್ಕೆ ಆಗಲಾರದು (ಸೂ. ಭಾ. ೧–೪–೧೫)–ಎಂದು ಆಚಾರ್ಯ ರು ಸ್ಪಷ್ಟವಾಗಿ ಹೇಳಿಕೊಟ್ಟಿದ್ದ ವಿಚಾರನಿಯಮವನ್ನು ಕಡೆಗಣಿಸುವದು ವೇದಾಂತಿಗಳ ವಾದದ ಗುರುತಾಗಿಬಿಟ್ಟಿದೆ! ವೇದಾಂತದೇಶಿಕರು ಬರೆದಿರುವ **'ಶತದೂಷಣಿ'** ಎಂಬ ತರ್ಕಪ್ರಧಾನಗ್ರಂಥಕ್ಕೆ ಉತ್ತರವಾಗಿ ಈಚೆಗೆ ಬರೆದಿ ರುವ **'ಶತಭೂಷಣಿ'**ಯಲ್ಲಿ ಪ್ರಕ್ರಿಯಾಭೇದವನ್ನನುಸರಿಸುವ ಈ ಶೈಲಿಯ ಉದಾಹರಣೆಯನ್ನು ಕಾಣಬಹುದು. **'ವೇದಾಂತವಿಜ್ಞಾನಸುನಿಶ್ಚಿ ತಾರ್ಥಾಃ'** (ಮುಂ. ೩–೨–೬) ಎಂಬಂತೆ ವೇದಾಂತದಲ್ಲಿ ವಿಷಯವು ಸುನಿ ಶ್ಚಿತವಾಗಬೇಕು; ಹೀಗೆ ಅದು ಕವಲುಕವಲಾಗಿ ವಾದದ ಸೀಳುಹಾದಿಗಳು ಒಡೆದುಕೊಂಡರೆ ಅದು ವೇದಾಂತವೆನಿಸೀತೆ? ಎಂದಿಗೂ ಎನಿಸಲಾರದು. ಆದ್ದರಿಂದ ವೇದಾಂತದ ವಿಶೇಷಗಳೇನು? ತರ್ಕವೆಂದರೇನು? ಶಾಸ್ತ್ರವೆಂದರೆ

ಯಾವದು ? ಅನುಭವವೆಂಬುದು ಯಾವದು?–ಎಂಬಿದರ ನಿಶ್ಚಯವು ನಮಗೆ ಆಗಲೇಬೇಕಾಗಿದೆ.

ಶ್ರುತಿಯಲ್ಲಿ **'ಅಭಯಂ ವೈ ಜನಕ ಪ್ರಾಪ್ತೋಽಸಿ'** (ಬೃ.೪–೨–೪) 'ಜನಕನೆ, ಅಭಯವನ್ನು ಹೊಂದಿರುತ್ತೀಯೆ', **"ತದ್ಧಾಸ್ಯ ವಿಜಜ್ಞೌ'** (ಛಾಂ. ೬–೧೬–೩) 'ಆ ತಂದೆಯ ಉಪದೇಶದ ಅರ್ಥವನ್ನು ಅವನು ಅನುಭವಕ್ಕೆ ತಂದುಕೊಂಡನು', **'ತದ್ಯೋ ಯೋ ದೇವಾನಾಂ ಪ್ರತ್ಯಬುಧ್ಯತ ಸ ಏವ ತದಭವತ್ತಥರ್ಷೀಣಾಂ ತಥಾ ಮನುಷ್ಯಾಣಾಂ ತದ್ಧೈತತ್ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೇಽಹಂ ಮನುರಭವಂ ಸೂರ್ಯಶ್ಚೇತಿ। ತದಿದಮಪ್ಯೇತರ್ಹಿ ಯ ಏವಂ ವೇದಾಹಂ ಬ್ರಹ್ಮಾಸ್ಮೀತಿ ಸ ಇದಂ ಸರ್ವಂ ಭವತಿ ತಸ್ಯ ಹ ನ ದೇವಾಶ್ಚ ನಾಭೂತ್ಯಾ ಈಶತೇ॥'** (ಬೃ.೧-೪-೧೦) ದೇವತೆಗಳಲ್ಲಿ ಯಾವಯಾವನು ನಾನು ಬ್ರಹ್ಮವೇ ಎಂದು ಅರಿತುಕೊಂಡನೋ ಅವನೇ ಅದಾದನು, ಋಷಿಗಳಲ್ಲಿಯೂ ಹಾಗೆಯೇ, ಮನುಷ್ಯರಲ್ಲಿಯೂ ಹಾಗೆಯೇ. ಇದನ್ನು ಕಂಡುಕೊಂಡು ವಾಮದೇವಋಷಿಯು 'ನಾನೇ ಮನುವಾದೆನು, ಸೂರ್ಯನೂ ಆದೆನು' ಎಂದು ಅರಿತುಕೊಂಡನು. ಈಗಲೂ ಯಾವನು ನಾನು ಬ್ರಹ್ಮವಾಗಿರುವೆನು ಎಂದಿತು ಅರಿತುಕೊಳ್ಳುವನೋ ಅವನು ಇದೆಲ್ಲವೂ ಆಗುತ್ತಾನೆ, ಹಾಗೆ ಆಗಗೊಡದೆ ಇರುವದಕ್ಕೆ ದೇವತೆಗಳಿಂದಲೂ ಶಕ್ಯವಿಲ್ಲ – ಎಂದು ಶ್ರುತಿಯು ಹೇಳಿರುವಂತೆ ಅನುಭವವಾಗಬೇಕು. 'ಅಡಿಗೆಯಾಗಿದೆ' ಎಂದು ಒಬ್ಬನೆಂದಾಗ ಅನ್ನವಿಲ್ಲವಲ್ಲ !–ಎಂದು ಶಂಕಿಸಿದರೆ 'ದೆವ್ವ ತಿಂದಿರಬಹುದು' ಎಂದು ತರ್ಕದ ಉತ್ತರವನ್ನು ಕೊಟ್ಟಮಾತ್ರದಿಂದ ಶಂಕಿಸಿದವನ ಹೊಟ್ಟೆ ತುಂಬೀತೆ ?

ವೇದಾಂತದ ಜಗಳವಲ್ಲ, ನಮಗೆ ಬೇಕಾಗಿರುವದು, ಕೃತಾರ್ಥರಾಗುವ ಮಾರ್ಗವು ಬೇಕಾಗಿದೆ. ಕುತೂಹಲದಿಂದ ವೃತ್ತಾಂತಪತ್ರಿಕೆಗಳನ್ನು ಓದುವಂತೆ ವೇದಾಂತಗ್ರಂಥಗಳನ್ನು ಓದಿದರೆ ಸಾಲದು. ಅವಿದ್ಯಾಕಾಮಕರ್ಮಗಳೇ ಸಂಸಾರಬೀಜ; ಜ್ಞಾನವು ಬಂದಮಾತ್ರದಿಂದ ಸಂಸಾರವು ಹೋಗಿಬಿಡುತ್ತದೆ –ಎಂದರೆ ಹೇಗೆಂಬುದನ್ನು ಮನಮುಟ್ಟಿ ವಿಚಾರಮಾಡಬೇಕು. ಅಶಾಂತಿ

ಯೂ ದುಃಖವೂ ಹೋಗಬೇಕು, ಶಾಂತಿಯೂ ಸುಖವೂ ತೋರಿಕೊಳ್ಳಬೇಕು. ನಮಗೆ ಸಂಸಾರಾನರ್ಥವು ಹೋಗಿದೆಯೆ? ಪುರುಷಾರ್ಥದ ಅನುಭವವುಂಟಾಗಿದೆಯೆ? ನೋಡಿಕೊಳ್ಳಬೇಕು. ಈ ಶಾಸ್ತ್ರಜ್ಞಾನವು ಪುಸ್ತಕಸ್ಥವಲ್ಲ, ಹೃದಯಸ್ಥ. 'ಶಾಸ್ತ್ರವೇ ಅತೀಂದ್ರಿಯವಿಷಯದಲ್ಲಿ ಪ್ರಮಾಣ, ಸೂರ್ಯನು ಹೇಗೆ ರೂಪವನ್ನು ತಿಳಿಸುವದಕ್ಕೆ ಸಾಧನವೋ ಹಾಗೆ' (ಸೂ. ಭಾ. ೨-೧-೧) ಎಂದು ಆಚಾರ್ಯರು ಹೇಳಿರುತ್ತಾರೆ. ಆದ್ದರಿಂದ ಶಾಸ್ತ್ರವು ಹಾಗೆ ನಮಗೆ ವಿಷಯವನ್ನು ಸ್ಫುಟವಾಗಿ ತಿಳಿಸಿಕೊಡಬೇಕು. ಆಗಲೇ ಅದು ಪ್ರಮಾಣ. ತರ್ಕವನ್ನು ಉಪಯೋಗಿಸಿಕೊಂಡದ್ದರಿಂದ ಅನುಭವದ ಹತ್ತಿರಹತ್ತಿರಕ್ಕೆ ತಲುಪಬೇಕು. ಶಾಸ್ತ್ರ, ತರ್ಕ, ಅನುಭವ- ಇವುಗಳಿಗೆ ಹೊಂದುಗೆಯಾಗುವಂತೆ ತಿಳಿದುಕೊಳ್ಳಬೇಕು. ಇದೇ ಶಾಂಕರಪ್ರಕ್ರಿಯೆಯ ವಿಶೇಷ. ಈ ಪ್ರಕ್ರಿಯೆಯ ಮರ್ಮವನ್ನು ನಮಗೆ ಅನುಗ್ರಹಿಸಿರೆಂದು ಶ್ರೀ ಶಂಕರರನ್ನು ಹೀಗೆ ಬೇಡಿಕೊಳ್ಳೋಣ :

**ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಮ್ ।**
**ನಮಾಮಿ ಭಗವತ್ಪಾದಶಙ್ಕರಂ ಲೋಕಶಙ್ಕರಮ್ ॥**

---

## ೫. ವೇದಾಂತವು ಒಪ್ಪಿರುವ ಶಾಸ್ತ್ರ, ಪ್ರಮಾಣ, ತರ್ಕಗಳ ಸ್ವರೂಪ

ತರ್ಕವೆಂಬ ಮಾತನ್ನು ಎರಡರ್ಥದಲ್ಲಿ ವಾದಿಗಳು ಉಪಯೋಗಿಸುತ್ತಾರೆ. 'ಹೊಗೆಯಿರುವದರಿಂದ ಅಲ್ಲಿ ಬೆಂಕಿಯಿರಬೇಕು' ಎಂಬುದು ಒಂದು ತರ್ಕ. ಹೊಗೆ ಎಲ್ಲೆಲ್ಲಿರುವದೋ ಅಲ್ಲೆಲ್ಲ ಬೆಂಕಿಯನ್ನು ಕಂಡಿರುವದರಿಂದ, ಪ್ರಕೃತದಲ್ಲಿ ಕಂಡ ಹೊಗೆಯ ಗುರುತಿನಿಂದ ಇಲ್ಲಿಯೂ ಬೆಂಕಿಯಿರಬೇಕೆಂದು ನಿಶ್ಚಯಿಸುವೆವಷ್ಟೆ. ಹೀಗೆ ನಿಶ್ಚಯಿಸುವ ತರ್ಕವನ್ನು 'ಅನುಮಾನ' ಎಂದು ಕರೆಯುತ್ತಾರೆ. ಈ ಅನುಮಾನದಿಂದ ಮಾಡಿದ ಕಲ್ಪನೆಯು ಸರಿಯೋ ಅಲ್ಲವೋ? - ಎಂಬ ಸಂಶಯವು ಬಂದಾಗ ಹೊಗೆಯಿದ್ದಲ್ಲಿ ಬೆಂಕಿಯೇಕೆ ಇರಬೇಕು?-ಎಂದು ಆಕ್ಷೇಪಿಸಿದರೆ 'ಬೆಂಕಿಯಿಲ್ಲದಿದ್ದರೆ ಹೊಗೆಯೂ ಇರಲಾರದು'

ಎಂಬ ಪ್ರೋಷಕತರ್ಕವನ್ನು ಉಪಯೋಗಿಸಿ ಅನುಮಾನವು ಸರಿಯೆಂದು ಸಿದ್ಧಪಡಿಸುತ್ತಾರೆ. ಇದೊಂದು ತರ್ಕ. ಹೀಗೆ ಅನುಮಾನ, ಅದಕ್ಕೆ ಉಪ್ರೋದ್ಬಲಕವಾದ ಯುಕ್ತಿ– ಈ ಎರಡರಿಂದಲೂ ಸಿದ್ಧಿಯಾದಮೇಲೂ ನಮಗೆ ವಸ್ತುವು ನೇರಾಗಿ ಸಿದ್ಧಿಸುವದಿಲ್ಲ ; ಈ ಯುಕ್ತಿಯಿಂದ ಅದು ಇರಲೇಬೇಕು ಎಂದು ಮಾತ್ರ ಸಿದ್ಧವಾಗುತ್ತದೆ. ಅಷ್ಟೆ. ದೃಷ್ಟವಾದ ಗುರುತು ನಿಜವಾಗಿ ಹೊಗೆಯಾಗದಿದ್ದರೆ, ತರ್ಕವು ತಪ್ಪಾಗಬಹುದು ; ಅಥವಾ ಈ ಪ್ರಕಾರದಿಂದ ತರ್ಕಿಸುವಾಗ ನಾವು ಅನುಸರಿಸಿರುವ ನಿಯಮವು ತಪ್ಪಾದರೂ ನಮ್ಮ ಊಹೆಯೂ ತಪ್ಪಾಗಬಹುದಾಗಿದೆ. ಉದಾಹರಣೆಗೆ ಎಲ್ಲೆಲ್ಲಿ ಬೆಂಕಿಯಿರುವದೋ ಅಲ್ಲಲ್ಲಿ ಹೊಗೆಯಿರುವದು–ಎಂಬ ನಿಯಮವು ದೃಷ್ಟವಿರುದ್ಧವಾಗಿರುತ್ತದೆ; ಆದ್ದರಿಂದ ಇಲ್ಲಿ ಬೆಂಕಿಯಿರುವದರಿಂದ ಹೊಗೆಯೂ ಇರಬೇಕು ಎಂಬ ಕಲ್ಪನೆಯು ತಪ್ಪೇ ಆಗುವದು.

ಅಂತೂ ವಸ್ತುವನ್ನು ಪರೋಕ್ಷವಾಗಿ ತಿಳಿಸುವದರಲ್ಲಿಕೂಡ ತರ್ಕವು ಹೇತ್ವಾಭಾಸಗಳ ಅಡ್ಡಿಯನ್ನು ಎದುರಿಸಬೇಕಾಗುವದು. ವೇದಾಂತದಲ್ಲಿ ಇಂಥ ತರ್ಕವನ್ನು ಅನುಸರಿಸಿಲ್ಲ. ಧರ್ಮಗ್ರಂಥಗಳನ್ನು ನಂಬಿರುವವರು ಹೇಳುವ ಕರ್ಮೋಪಾಸನೆಗಳ ಫಲವೂ ಪರೋಕ್ಷವಾಗಿಯೇ ಇರುತ್ತದೆ. ಅದು ನಿಜವೋ, ಅಲ್ಲವೋ ? ಎಂಬುದನ್ನು ಈಗ ಅನುಭವಕ್ಕೆ ಹೊಂದಿಸಿ ನಿಶ್ಚಯಿಸುವದಕ್ಕೆ ಆಗುವಂತಿರುವದಿಲ್ಲ. ಆದ್ದರಿಂದಲೇ ಪರೋಕ್ಷದಲ್ಲಾಗುವ ಫಲದ ವಿಷಯದಲ್ಲಿ ವಾದಿಗಳಿಗೆ ಅನ್ಯೋನ್ಯವಾಗಿ ವೈಮತ್ಯವಿರುತ್ತದೆ. ಸ್ವಾಮಿ ವಿವೇಕಾನಂದರವರು ಒಂದು ಕಡೆಯಲ್ಲಿ ಉದಾಹರಿಸಿರುವ ಕಥೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು : ಒಬ್ಬ ಮಿಷನರಿಯು 'ನಿಮ್ಮ ಈ ದೇವತಾವಿಗ್ರಹವನ್ನು ನಾನು ಬೆತ್ತದಿಂದ ಹೊಡೆದರೆ, ಅದು ನನಗೆ ಏನು ಮಾಡುವದು ?' ಎಂದು ಒಬ್ಬ ಹಳ್ಳಿಯವನನ್ನು ಹಾಸ್ಯಕ್ಕಾಗಿ ಕೇಳಿದನಂತೆ; ಅವನು ಪೂಜಿಸುತ್ತಿದ್ದ ಮೂರ್ತಿಯು ಯಾವ ಫಲವನ್ನೂ ಕೊಡಲಾರದ ಅಚೇತನವಸ್ತುವೆಂದು ತಿಳಿಸಿಕೊಡುವದೇ ಅವನ ಉದ್ದೇಶವಾಗಿತ್ತು. ಆದರೆ ಗೌಡನು ಮತ್ತೊಂದು ಪ್ರಶ್ನೆಯನ್ನು ಈ ಪಾದ್ರಿಗೆ ಹಾಕಿದನು. 'ನಿಮ್ಮ ಕ್ರೈಸ್ತನನ್ನು ನಾನು ನಿಂದಿಸಿದರೆ ನನಗೇನಾಗುವದು ?' ಈ ಪ್ರಶ್ನೆಗೆ ಪಾದ್ರಿಯು 'ಪರಲೋಕದಲ್ಲಿ ನಿನಗೆ ದಂಡನೆಮಾಡುತ್ತಾನೆ' ಎನ್ನಲು ಗೌಡನೂ 'ನಮ್ಮ

ಈ ದೇವನೂ ನಿನಗೆ ಪರಲೋಕದಲ್ಲಿ ಶಿಕ್ಷೆಯನ್ನು ವಿಧಿಸುತ್ತಾನೆ' ಎಂದನಂತೆ! ಅನುಭವಾರೂಢವಲ್ಲದ ಈ ಎರಡು ಫಲಗಳಲ್ಲಿ ಯಾವದನ್ನೇ ಆಗಲಿ, 'ಉಂಟು', ಅಥವಾ 'ಇಲ್ಲ' –ಎಂದು ಹೇಳುವದಕ್ಕೆ ಆಗುವಂತಿಲ್ಲವಷ್ಟೆ ?

ವೇದಾಂತದಲ್ಲಿ ಹೇಳುವ ವಿಷಯವೂ ಅದರಿಂದಾಗುವ ಫಲವೂ ಇಂಥ ಪರೋಕ್ಷವಿಷಯದ ಕಲ್ಪನೆಯಲ್ಲ. **'ಜ್ಞಾಪಕಂ ಶಾಸ್ತ್ರಂ ನ ಕಾರಕಮ್'** (ಬೃ. ೧–೪–೧೦), ಶಾಸ್ತ್ರವು ಇದ್ದದ್ದನ್ನು ಇದ್ದಂತೆಯೇ ತಿಳಿಸಿಕೊಡುವದು ಎಂಬ ಆಚಾರ್ಯರ ಉಪದೇಶದಲ್ಲಿ ಈ ತತ್ತ್ವವು ಅಡಗಿದೆ. ಮೀಮಾಂಸಕರು ಪ್ರಮಾಣವಾಗಿ ಒಪ್ಪಿರುವ ಶಾಸ್ತ್ರವೂ ಜ್ಞಾಪಕವೇ ; ಈಗ ಮಾಡುವ ಸಾಧನಕ್ಕೂ ಲೋಕಾಂತರದಲ್ಲಾಗುವ ಫಲಕ್ಕೂ ಇರುವ ಸಾಧ್ಯಸಾಧನಸಂಬಂಧವನ್ನು ಅದು ಜ್ಞಾಪಿಸುತ್ತದೆ. ಆದರೆ ಅಲ್ಲಿ ಫಲವು ಅನುಭವಾರೂಢವಲ್ಲ ; ಇಲ್ಲಿ ಸಿದ್ಧವೇ ಆಗಿರುವ ಆತ್ಮವಸ್ತುವಿನ ಸ್ವರೂಪವನ್ನೂ ಅದರಿಂದಾಗುವ ಫಲವನ್ನೂ ತಿಳಿಸಿಕೊಡುವದರಿಂದ ಶ್ರುತಿಯು ಅನುಭವದಲ್ಲಿ ತೋರಿಬರುವ ಫಲವುಳ್ಳ ಜ್ಞಾನವನ್ನೇ ತಿಳಿಯಿಸುತ್ತದೆ ಎಂಬುದೊಂದು ವಿಶೇಷವು.

ವೇದಾಂತದಲ್ಲಿ ತಿಳಿದುಕೊಳ್ಳಬೇಕಾಗಿರುವ ಬ್ರಹ್ಮವು ನಮ್ಮೆಲ್ಲರ ಆತ್ಮನೇ ಆಗಿರುವದರಿಂದ ಅದು ಅಪರೋಕ್ಷವೇ ಆಗಿರುತ್ತದೆಯಾಗಿ ಅದನ್ನು ತಿಳಿಸುವದಕ್ಕೆ ಯಾವ ಪ್ರಮಾಣವೂ ಅವಶ್ಯವಿಲ್ಲ; ಅದು ತಾನೇ ಎಲ್ಲಾ ಪ್ರಮಾಣಗಳನ್ನೂ ಬೆಳಗುತ್ತಿರುವದರಿಂದ ಯಾವ ಪ್ರಮಾಣವೂ ಅದನ್ನು ವಿಷಯೀಕರಿಸಿ ಬೆಳಗಲೂ ಆರದು. ಹಾಗಾದರೆ ಬ್ರಹ್ಮಕ್ಕೆ ಶಾಸ್ತ್ರವು ಪ್ರಮಾಣವೆಂದರೆ ಏನರ್ಥ ? –ಎಂದರೆ ಅದಕ್ಕೆ ಆಚಾರ್ಯರು ಕೊಟ್ಟಿರುವ ಉತ್ತರವಿದು : ಬ್ರಹ್ಮವು ನಮ್ಮಗಳ ಆತ್ಮನೇ ಆಗಿರುವದರಿಂದ ಸ್ವಯಂಸಿದ್ಧವಾಗಿರುತ್ತದೆ. ಆತ್ಮನಿಗಲ್ಲವೆ, ಮಿಕ್ಕದ್ದೆಲ್ಲವೂ ಪ್ರಮಾಣದಿಂದ ಸಿದ್ಧವಾಗಬೇಕು? ಪ್ರಮಾಣಗಳಿಗಿಂತ ಮೊದಲೇ ಸಿದ್ಧನಾಗಿರುವ ಆತ್ಮನನ್ನು ಇದಾನೆಂದು ತಿಳಿಸುವದಕ್ಕೆ ಯಾವ ಪ್ರಮಾಣವಾದರೂ ಏತಕ್ಕೆ ಬೇಕು ? ಹೀಗೆ ಆತ್ಮರೂಪದಿಂದ ಬ್ರಹ್ಮವು ಸಿದ್ಧವೇ ಆಗಿದ್ದರೂ, ಆತ್ಮನೆಂದರೆ ಯಾವದು ? –ಎಂಬ ವಿಷಯದಲ್ಲಿ ಅನೇಕ ಮತಭೇದಗಳಿರುತ್ತವೆ. ಆದ್ದರಿಂದ ಆತ್ಮನ ಸ್ವರೂಪವು ಇಂಥದ್ದೇ ಎಂದು ನಿಶ್ಚಯಿಸಿಕೊಳ್ಳುವದು ಅವಶ್ಯವಾಗಿರುತ್ತದೆ. ಇದನ್ನಾದರೂ ಶಾಸ್ತ್ರವು ಹೇಗೆ ಮಾಡೀತು ? ಅದೂ ಪ್ರಮಾಣವೇ ಅಲ್ಲವೆ ? ಆತ್ಮನು ಯಾವ

ಪ್ರಮಾಣಕ್ಕೂ ವಿಷಯನಲ್ಲವಲ್ಲ ! --ಎಂಬ ಶಂಕೆಗೆ ಪರಿಹಾರವಿದು : **'ನ ಹಿ ಶಾಸ್ತ್ರಮಿದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಾದಯಿಷತಿ; ಕಿಂ ತರ್ಹಿ, ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್, ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿಭೇದಮ್ ಅಪನಯತಿ |.'** (ಸೂ. ಭಾ. ೧-೧-೪) ಶಾಸ್ತ್ರವು ಬ್ರಹ್ಮವು ಇದು ಎಂದು ವಿಷಯೀಕರಿಸಿ ತಿಳಿಸಿಕೊಡುವದಿಲ್ಲ ; ಮತ್ತೇನೆಂದರೆ : ನಮ್ಮೆಲ್ಲರ ಪ್ರತ್ಯಗಾತ್ಮನೇ ಅದೆಂದು ತಿಳಿಸಿ 'ಅದು ವಿಷಯವಲ್ಲ' ಎಂದೇ ಮನದಟ್ಟುಮಾಡಿಕೊಡುವ ಮೂಲಕ 'ತಿಳಿಯಬೇಕಾದದ್ದು, ತಿಳಿವಳಿಕೆ, ತಿಳಿಯುವವನು'- ಎಂಬ ಅವಿದ್ಯಾಕಲ್ಪಿತ ಭೇದವನ್ನು ಹೋಗಲಾಡಿಸುತ್ತದೆ. ಪ್ರಮಾತೃ, ಪ್ರಮಾಣ, ಪ್ರಮೇಯ- ಎಂಬ ಭೇದವೇ ಅವಿದ್ಯಾಕಲ್ಪಿತವೆಂದು ತಿಳಿಸಿಕೊಡುವದರಿಂದಲೂ ಮತ್ತೆ ಯಾವ ಪ್ರಮಾಣದಿಂದಲೂ ಈ ತತ್ತ್ವವು ತಿಳಿಯಬರದೆ ಇರುವದರಿಂದಲೂ ಈ ಭೇದವ್ಯವಹಾರವಿಲ್ಲದಿರುವಾಗ ಮತ್ತೆ ಯಾವ ಶಂಕೆಯೂ ಬರುವಂತಿಲ್ಲ ವಾದ್ದರಿಂದ ಸರ್ವಥಾ ಅಬಾಧ್ಯವಿಷಯವನ್ನು ತಿಳಿಸಿಕೊಡುವದರಿಂದಲೂ ಶಾಸ್ತ್ರವು ಇಷ್ಟರಮಟ್ಟಿಗೆ ಪ್ರಮಾಣವೆನಿಸಿರುತ್ತದೆ.

ಸರಿಯಾಗಿ ನೋಡಿದರೆ ಆತ್ಮನು ಪ್ರಮೇಯನೇ ಅಲ್ಲದ್ದರಿಂದ ಅವನಿಗೆ ಯಾವ ಪ್ರಮಾಣವೂ ಬೇಕಿರುವದಿಲ್ಲ. ಯಾವದು ನಮಗಿಂತ ಬೇರೆಯಾಗಿ ನಮ್ಮ ಹೊರಗೆ ಇದ್ದು ಯಾವದಾದರೊಂದು ಮರೆಯಿಂದಾಗಿ ತಿಳಿಯದೆ ಇರುತ್ತದೆಯೋ ಅದನ್ನಲ್ಲವೆ, ಪ್ರಮಾಣವು ಬೆಳಗಿತೋರಿಸಬೇಕು? ಆದರೆ ಬ್ರಹ್ಮವು ನಮ್ಮ ಆತ್ಮನೇ ಆಗಿರುತ್ತದೆ ; ಆದ್ದರಿಂದ ಅದಕ್ಕೆ ಪ್ರಮಾಣವು ಬೇಕಿಲ್ಲ. ಅದು ನಮ್ಮ ಹೊರಗಿಲ್ಲ; ಆದ್ದರಿಂದ ಅದನ್ನು ಮತ್ತೊಂದು ಪ್ರಮಾಣದಿಂದ ಅರಿಯಬೇಕಾದದ್ದಿರುವದಿಲ್ಲ. ಅದಕ್ಕೆ ಯಾವ ಮರೆಯೂ ಇರುವದಿಲ್ಲ ; ನಮಗೆ ನಾವೇ ಯಾವದೋ ಒಂದು ಮರೆಯಿಂದ ದೂರವಾಗಿ ರುವೆವೆಂದರೇನರ್ಥ? ಆದ್ದರಿಂದಲೂ ಅದಕ್ಕೆ ಪ್ರಮಾಣವು ಬೇಕಿಲ್ಲ. ಆತ್ಮ ನನ್ನು ಬೆಳಗಿತೋರಿಸುವದಕ್ಕೆ ಮತ್ತೆ ಯಾವ ಪ್ರಮಾಣವೂ ಬೇಕಿಲ್ಲವೆಂಬು ದಕ್ಕೆ ಇವೆಲ್ಲಕ್ಕಿಂತಲೂ ಬೇರೆಯಾದ ಪ್ರಬಲವಾದ ಒಂದು ಕಾರಣವಿದೆ. ಅದೇ ನೆಂದರೆ, ಆತ್ಮನು ನಿತ್ಯಚೈತನ್ಯಸ್ವರೂಪನಾಗಿ ಸ್ವತಃಸಿದ್ಧನಾಗಿರುತ್ತಾನೆ.

ಇವನ ಚೈತನ್ಯದ ಬೆಳಕಿನಿಂದಲೇ ಎಲ್ಲವನ್ನೂ ನಾವು ಅರಿಯುತ್ತಿರುವೆವು. ನಮ್ಮ ಮನಸ್ಸೂ ಇಂದ್ರಿಯಗಳೂ ವಿಷಯಗಳನ್ನು ಅರಿಯುತ್ತಿರುವದೂ ಹೊರಗಿರುವ ಸೂರ್ಯಚಂದ್ರಾದಿಜ್ಯೋತಿಗಳು ಬೆಳಕಿಲ್ಲದ ಬೇರೆಯ ವಸ್ತುಗಳನ್ನು ಬೆಳಗುತ್ತಿರುವವೆಂದು ಅರಿತುಕೊಳ್ಳುವದೂ ಈ ಆತ್ಮಜ್ಯೋತಿಯ ಬೆಳಕಿನಿಂದಲೇ. ಆತ್ಮನ ಬೆಳಕಿನಲ್ಲಿಯೇ ನಾವು ಎಲ್ಲವನ್ನೂ ಕಾಣುತ್ತಾ ಕುಳಿತಿರುವದು, ಹೊರಕ್ಕೆ ಹೋಗುವದು, ಕೆಲಸವನ್ನು ಮಾಡುವದು, ಹಿಂತಿರುಗಿಬರುವದು– ಮುಂತಾದ ಎಲ್ಲಾ ವ್ಯವಹಾರವನ್ನೂ ಮಾಡುತ್ತಿರುವೆವು. ಇಂಥ **ನಿತ್ಯಸ್ವಯಂಪ್ರಕಾಶ**ವಸ್ತುವನ್ನು ತಿಳಿಸುವದಕ್ಕೆ ಸಾಧನದ ಆವಶ್ಯಕತೆಯಾದರೂ ಏನಿದೆ? ಕಪ್ಪೆಯಚಿಪ್ಪನ್ನು ನೋಡುತ್ತಲೇ ಇರುವಾಗಲೇ ಅದರಲ್ಲಿ ಬೆಳ್ಳಿಯೆಂಬ ಭ್ರಾಂತಿಯುಂಟಾಗುವದರಿಂದಲೇ ಅದನ್ನು ನೋಡುತ್ತಿಲ್ಲವೆನ್ನುತ್ತೇವಲ್ಲವೆ? ಆ ದೃಷ್ಟಾಂತದಲ್ಲಿ ಕಪ್ಪೆಯಚಿಪ್ಪು ನಮ್ಮ ಹೊರಗೆ ಇದೆ; ಆದರೆ ಬ್ರಹ್ಮವು ನಮ್ಮ ಸ್ವರೂಪವೇ ಆಗಿದೆ. ಆದ್ದರಿಂದ ಇಲ್ಲಿ ಅವಿದ್ಯೆಯಿಂದ ಆರೋಪಿತವಾಗಿರುವ ಪ್ರಮಾತೃತ್ವವೊಂದಲ್ಲದೆ ಮತ್ತೆ ಯಾವ ವ್ಯವಧಾನವೂ ಬ್ರಹ್ಮಕ್ಕೆ ಇರುವ ಹಾಗೇ ಇಲ್ಲ. ಆದ್ದರಿಂದ ಶಾಸ್ತ್ರವು ಈ ಪ್ರಮಾತೃತ್ವವನ್ನು ಕಳೆದುಹಾಕುವದರಿಂದಲೇ ನಮ್ಮ ಆತ್ಮನಾಗಿರುವ ಬ್ರಹ್ಮಕ್ಕೆ ಪ್ರಮಾಣವು– ಎಂದು ಉಪಚಾರಕ್ಕೆ ಹೇಳುತ್ತೇವೆ. ಆದ್ದರಿಂದ ಆತ್ಮಜ್ಞಾನವು ಅತ್ಯಂತ ಪ್ರಸಿದ್ಧವಾಗಿದೆ; ಅದನ್ನೇನೂ ಮಾಡಬೇಕಾದದ್ದಿಲ್ಲ; ಅನಾತ್ಮದಲ್ಲಿ ಆತ್ಮಬುದ್ಧಿಯನ್ನು ಕಳೆದುಹಾಕುವದಕ್ಕೇ ಪ್ರಯತ್ನಿಸಬೇಕು– ಎಂದು **ಗೀತಾಭಾಷ್ಯ**ದಲ್ಲಿ (ಗೀ. ಭಾ. ೧೮-೫೦) ಆಚಾರ್ಯರು ಬರೆದಿರುತ್ತಾರೆ. ಶಾಸ್ತ್ರವು **ಅಂತ್ಯಪ್ರಮಾಣವು**-ಎಂದರೆ ಪ್ರಮಾಣವ್ಯವಹಾರವನ್ನೇ ಬಾಧಿಸಿ, ತಾನೂ ಪ್ರಮಾಣವಲ್ಲವೆಂದು ತಿಳಿಸಿ, ಆತ್ಮನು ಸ್ವಯಂಸಿದ್ಧನೆಂದು ತಿಳಿಸುವದು ಎಂಬರ್ಥದಲ್ಲಿ ಪ್ರಮಾಣವು–ಎಂಬುದು ಆಚಾರ್ಯರ ಮತ.

ಆತ್ಮನು ನಾನು ಎಂಬ ಅರಿವಿಗೆ ವಿಷಯನಾಗಿರುವನೆಂದು ಮೀಮಾಂಸಕರೂ ತಾರ್ಕಿಕರೂ ನಂಬಿರುತ್ತಾರೆ. ಅವನಿಗಿಂತ ವಿಲಕ್ಷಣನಾಗಿರುವ ಸರ್ವರಿಗೂ ಆತ್ಮನಾದ **ಸಾಕ್ಷಿಯು** ಇರುತ್ತಾನೆಂಬುದು ಅವರಿಗಾಗಲಿ ಮತ್ತೆ ಯಾರಿಗಾಗಲಿ ತಿಳಿದಿಲ್ಲ. **'ನ ಹ್ಯಹಂಪ್ರತ್ಯಯವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ ಸಮ ಏಕಃ ಕೂಟಸ್ಥನಿತ್ಯಃ**

**ಪುರುಷೋ ವಿಧಿಕಾಣ್ಡೇ ತರ್ಕಸಮಯೇ ವಾ ಕೇನಚಿದಧಿಗತಃ ॥'** (ಸೂ. ಭಾ. ೧-೧-೪) ನಾನು ಎಂಬ ಪ್ರತ್ಯಯಕ್ಕೆ ವಿಷಯನಾಗಿರುವ ಆತ್ಮನಾಗಿರುವ ಕರ್ತೃವಿಗಿಂತ ಬೇರೆಯಾಗಿ ಅವನಿಗೂ ಸಾಕ್ಷಿಯಾಗಿ ಸರ್ವಭೂತಗಳಲ್ಲಿಯೂ ಇದ್ದುಕೊಂಡಿರುವ ವೇದಾಂತೋಕ್ತಕೂಟಸ್ಥಾತ್ಮನನ್ನು ವಿಧಿಕಾಂಡದಲ್ಲಾಗಲಿ ತರ್ಕಶಾಸ್ತ್ರದಲ್ಲಾಗಲಿ ಯಾವನೊಬ್ಬನೂ ತಿಳಿದದ್ದಿಲ್ಲ-ಎಂದು ಆಚಾರ್ಯರು ಸ್ಪಷ್ಟವಾಗಿ ಹೇಳಿರುತ್ತಾರೆ. ಹೀಗೆ ಪ್ರಮಾಣಕ್ಕೆ ಅವಿಷಯನಾಗಿ ಸ್ವತಃಸಿದ್ಧನಾಗಿರುವ ಅದ್ವಿತೀಯಾತ್ಮನನ್ನು ಅನುಭವೈಕಗಮ್ಯನೆಂದು ತಿಳಿಸಿಕೊಟ್ಟಿರುವದು ಆಚಾರ್ಯರ ವೇದಾಂತಪ್ರಕ್ರಿಯೆಯ ಒಂದು ವಿಶೇಷವು. ಅಥವಾ ಅನುಭವವು ಆತ್ಮನಿಗೆ ಪ್ರಮಾಣವೆನ್ನುವದಕ್ಕಿಂತ ಆತ್ಮನೇ ಅನುಭವಸ್ವರೂಪನು ಎಂದು ತಿಳಿಯುವದು ಇನ್ನೂ ಯುಕ್ತತರವಾಗಿರುತ್ತದೆ. ವೇದವೆಂದರೆ ಯಾವದರಿಂದ ತಿಳಿಯುತ್ತಾರೋ (ಯೇನ ವೇತ್ತಿ) ಅದು; ಈ ಅರ್ಥದಲ್ಲಿ ವೇದದ ತಿರುಳೇ ಆತ್ಮನು, ಆದ್ದರಿಂದಲೇ ವೇದನಿತ್ಯತ್ವವೂ ಪ್ರಾಮಾಣ್ಯವೂ ನಿರಪವಾದವಾಗಿ ಸಿದ್ಧಿಸುತ್ತದೆ. ಇದು ಶಾಸ್ತ್ರಪ್ರಾಮಾಣ್ಯದ ತತ್ತ್ವ.

ಇನ್ನು **ತರ್ಕದ** ವಿಷಯ. ದೃಷ್ಟದಿಂದ ಅದೃಷ್ಟದ ಕಲ್ಪನೆಯನ್ನು ಮಾಡಿಕೊಡುವದೇ ತರ್ಕವೆಂದು ತಾರ್ಕಿಕರ ನಂಬಿಕೆ. ಆತ್ಮನು ಎಂದೆಂದಿಗೂ ದೃಗ್ರೂಪನಾಗಿಯೇ ಇರುವದರಿಂದ ಅವನ ವಿಷಯದಲ್ಲಿ ಈ ಬಗೆಯ ತರ್ಕವು ಪ್ರಯೋಜನವಿಲ್ಲವಾದ್ದರಿಂದ ಇದನ್ನು ವೇದಾಂತದಲ್ಲಿ ಉಪಯೋಗಿಸಿರುವದಿಲ್ಲವೆಂದು ಹೇಳಿದ್ದಾಗಿದೆಯಷ್ಟೆ? ತಮ್ಮ ತಮ್ಮ ಮತವನ್ನು ಸರಿಯೆಂದು ತೋರಿಸುವದಕ್ಕೆ ಆಯಾ ಮತದವರು ಆರಿಸಿಕೊಂಡಿರುವ ಮತಗ್ರಂಥಗಳಿಗೂ ವೇದಾಂತಿಗಳು ಪ್ರಮಾಣವೆಂದು ಇಟ್ಟುಕೊಂಡಿರುವ ಶ್ರುತಿಗೂ ಹೇಗೆ ಪ್ರಾಮಾಣ್ಯವಿಷಯದಲ್ಲಿ ಅಜಗಜಾಂತರವಿದೆಯೋ ಹಾಗೆಯೇ ತಾರ್ಕಿಕರು ಒಪ್ಪಿರುವ ತರ್ಕಕ್ಕೂ ವೇದಾಂತದಲ್ಲಿ ಅನುಸರಿಸುವ ತರ್ಕಕ್ಕೂ ವಿಷಯವನ್ನು ತಿಳಿಸಿಕೊಡುವದರಲ್ಲಿ ಅತ್ಯಂತ ಅಂತರವಿರುತ್ತದೆ. ಆಚಾರ್ಯರು ಈ ವಿಷಯದಲ್ಲಿ ಹೇಳಿರುವದೇನೆಂದರೆ, **'ಶ್ರುತ್ಯನುಗೃಹೀತ ಏವ ಹ್ಯತ್ರ ತರ್ಕೋಽನುಭವಾಙ್ಗತ್ವೇನಾಶ್ರೀಯತೇ ॥'** (ಸೂ. ಭಾ. ೨-೧-೬)

ಶ್ರುತಿಯು ತಿಳಿಸಿಕೊಟ್ಟಿರುವ ತರ್ಕವನ್ನೇ ಅನುಭವಕ್ಕೆ ಅಂಗವಾಗಿ ಇಲ್ಲಿ ಆಶ್ರಯಿಸಿರುತ್ತದೆ. ಶ್ರುತಿಯಲ್ಲಿಯೂ ಕೆಲವು ಕಡೆಯಲ್ಲಿ ಲೋಕಬುದ್ಧಿಯನ್ನನುಸರಿಸಿ ಅನುಮಾನದಂತೆ ಕಾಣುವ ಕೆಲವು ತರ್ಕಗಳನ್ನು ಉಪಯೋಗಿಸುವದುಂಟು ; ಆದರೆ ಅಲ್ಲಿ ಅನುಮಾನಪ್ರಮಾಣವನ್ನೇ ಉದಾಹರಿಸಿದೆ-ಎಂದು ತಿಳಿಯುವ ಹಾಗಿಲ್ಲ. ಉದಾಹರಣೆಗೆ **ಬೃಹದಾರಣ್ಯಕದಲ್ಲಿ** ಈ ಅಕ್ಷರಾಖ್ಯನಾದ ಪರಮಾತ್ಮನ ಶಾಸನಕ್ಕೊಳಪಟ್ಟು ಸೂರ್ಯಚಂದ್ರರು ನಿಯತವಾಗಿ ಕರ್ಮವನ್ನು ಮಾಡುತ್ತಿರುವರು ; ಭೂಮ್ಯಂತರಿಕ್ಷಗಳು ವ್ಯವಸ್ಥಿತವಾಗಿರುತ್ತವೆ, ಕಾಲದ ಅವಯವಗಳು ನಿಯತವಾಗಿರುತ್ತವೆ, ನದಿಗಳು ಗೊತ್ತಾದ ದಿಕ್ಕಿನಲ್ಲಿ ಹರಿಯುತ್ತಿರುತ್ತವೆ, ದಾನಮಾಡುವವರು ಲೋಕದ ಸ್ತುತಿಗೆ ಪಾತ್ರರಾಗಿರುತ್ತಾರೆ- ಎಂದು ಮುಂತಾಗಿ ಪರಮಾತ್ಮನಿದಾನೆಂಬುದಕ್ಕೆ ತರ್ಕವನ್ನು ಹೇಳಿರುತ್ತಾರೆ. ಇಲ್ಲಿ ಇವೆಲ್ಲ ತಾರ್ಕಿಕರಿಗೆ ಒಪ್ಪಾದ ಅನುಮಾನಗಳೆಂದೇನೂ ಹೇಳುವದಕ್ಕೆ ಬರುವದಿಲ್ಲ ; ಏಕೆಂದರೆ ತರ್ಕನಿಷ್ಣಾತರಾದವರು ಇದರಲ್ಲಿ ಯಾವದಾದರೂ ದೋಷಗಳನ್ನು ಹೇಳಬಹುದಾಗಿದೆ. ಆದರೆ ಅಕ್ಷರವೆಂಬ ಹೆಸರಿನ ಪರಮಾತ್ಮನು ನಮ್ಮ ಆತ್ಮನೇ ಆಗಿರುವದರಿಂದ ಆತ್ಮನ ಅಸ್ತಿತ್ವಸಿದ್ಧಿಗೆ ಯಾವ ಅನುಮಾನವುತಾನೆ ಹೇಗೆ ಪ್ರಮಾಣವಾದೀತು ?

ಆತ್ಮಸ್ವರೂಪವನ್ನೇ ತಿಳಿಸಿಕೊಡುವದಕ್ಕೆಂದು **ಶ್ರುತಿಯು ಅನುಗ್ರಹಿಸಿರುವ ತರ್ಕ**ದ ಜಾತಿಯೇ ಬೇರೆ. ಇದಕ್ಕೆ ಆಚಾರ್ಯರು ಎರಡು ಉದಾಹರಣೆಗಳನ್ನು ಕೊಟ್ಟಿರುತ್ತಾರೆ : '**ಸ್ವಪ್ನಾನ್ತಬುದ್ಧಾನ್ತಯೋರುಭಯೋರಿತರೇತರವ್ಯಭಿಚಾರಾದಾತ್ಮನೋಽನನ್ವಾಗತತ್ವಮ್, ಸಂಪ್ರಸಾದೇ ಚ ಪ್ರಪಞ್ಚಪರಿತ್ಯಾಗೇನ ಸದಾತ್ಮನಾ ಸಂಪತ್ತೇರ್ನಿಷ್ಪ್ರಪಞ್ಚಸದಾತ್ಮತ್ವಮ್ । ಪ್ರಪಞ್ಚಸ್ಯ ಬ್ರಹ್ಮಪ್ರಭವತ್ವಾತ್ ಕಾರ್ಯಕಾರಣಾನನ್ಯತ್ವನ್ಯಾಯೇನ ಬ್ರಹ್ಮಾವ್ಯತಿರೇಕಃ- ಇತ್ಯೇವಂಜಾತೀಯಕಃ ॥**' (ಸೂ. ಭಾ. ೨-೧-೬) ಒಂದು ಶ್ರುತಿವಚನವು ಹೀಗಿದೆ: **ಸ್ವಪ್ನಾನ್ತಂ ಜಾಗರಿತಾನ್ತಂ ಚೋಭೌ ಯೇನಾನುಪಶ್ಯತಿ । ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥**' (ಕ. ೨-೧-೪) ಎಚ್ಚರವನ್ನೂ ಕನಸನ್ನೂ ಯಾವನಿಂದ ಅರಿತುಕೊಳ್ಳುತ್ತೇವೋ ಅವನೇ ಮಹಾ

ವಿಭುವಾದ ಆತ್ಮನು ; ಇದನ್ನರಿತುಕೊಂಡ ವಿವೇಕಿಯು ಶೋಕಿಸುವದಿಲ್ಲ- ಎಂದರ್ಥ. ಇಲ್ಲಿ ಸ್ವಪ್ನಜಾಗರಿತಗಳನ್ನು- ತಾರ್ಕಿಕರು ಹೊಗೆಯನ್ನು ಬೆಂಕಿಗೆ ಲಿಂಗವಾಗಿ ಮಾಡಿಕೊಳ್ಳುವಂತೆ- ಗುರುತಾಗಿಟ್ಟುಕೊಂಡು, ಇವೆರಡನ್ನೂ ಯಾವನು ಅರಿಯುತ್ತಾನೋ ಅವನೇ ನನ್ನ ಆತ್ಮನು- ಎಂದು ತಿಳಿಸಿಲ್ಲ. ಇವೆರಡನ್ನೂ ವ್ಯಾಪಿಸಿರುವ ಸಾಕ್ಷಿಚೈತನ್ಯಸ್ವರೂಪನು ನನ್ನ ಆತ್ಮನೇ ಎಂದು ನೇರಾಗಿ ಅರಿತುಕೊಳ್ಳಬೇಕೆಂದು ತಿಳಿಸಿಕೊಟ್ಟಿದೆ. ಇಲ್ಲಿ ಜ್ಞೇಯವು ನಮ್ಮ ಆತ್ಮನೇ ಆಗಿದೆ., ಅನುಮಾನದಲ್ಲಿರುವಂತೆ ಪರೋಕ್ಷವಾಗಿಲ್ಲ ; ಲಿಂಗದಿಂದ ಜ್ಞೇಯವನ್ನು ತರ್ಕಿಸುವದಿಲ್ಲ, ಲಿಂಗವನ್ನು ನೆಪಮಾಡಿಕೊಂಡು ಜ್ಞಾತೃವಿನ ಪರಮಾರ್ಥಸ್ವರೂಪವನ್ನೇ ನೇರಾಗಿ ಅರಿತುಕೊಂಡುಬಿಡುತ್ತೇವೆ. ಇದಕ್ಕೆ ಅನುಮಾನದ ಆಕಾರವಿದ್ದರೂ ಇದು ಅನುಮಾನವಲ್ಲ ; ಏಕೆಂದರೆ ಇಲ್ಲಿ ಲಿಂಗಜ್ಞಾನವೂ ವ್ಯಾಪ್ತಿಜ್ಞಾನವೂ ತಿಳಿವಳಿಕೆಗೆ ಸಾಧಕಗಳಲ್ಲ. ಸುಷುಪ್ತಿಯಲ್ಲಿ ಆತ್ಮನಿದಾನೆ, ಪ್ರಪಂಚವಿಲ್ಲ; ಆದ್ದರಿಂದ ನಿಷ್ಪ್ರಪಂಚತ್ವವೇ ಅವನ ಸ್ವಭಾವವು. ಪ್ರಪಂಚವು ಆತ್ಮನಿಂದಲೇ ಎದ್ದು ಎಚ್ಚರಕನಸುಗಳಲ್ಲಿ ತೋರಿಕೊಳ್ಳುತ್ತದೆ ; ಅತನನ್ನು ಬಿಟ್ಟು ಇರುವದೇ ಇಲ್ಲ. ಆದ್ದರಿಂದ ಅದು ನಿಜವಾಗಿ ಬ್ರಹ್ಮವೇ ಎಂಬ-ದೊಂದು ತರ್ಕ ಅದರಲ್ಲಿಯೂ ನೇರಾಗಿ ಅನುಭವವನ್ನನುಸರಿಸಿದ ತರ್ಕವನ್ನೇ ಹೇಳಿದೆ ; ಅನುಮಾನವನ್ನಲ್ಲ.

ಅಂತೂ ಆತ್ಮನು ಸ್ವತಃಸಿದ್ಧನಾಗಿರುತ್ತಾನೆ ; ಶಾಸ್ತ್ರವು ಅವನಲ್ಲಿ ಆರೋಪಿತವಾಗಿರುವದನ್ನು ಅಲ್ಲಗಳೆದು ಅವನನ್ನು ತಿಳಿಸಿಕೊಡುತ್ತದೆ- ಎಂಬುದು ಉಪಚಾರಮಾತ್ರ. ಏಕೆಂದರೆ ಆ ಶಾಸ್ತ್ರಪ್ರಮಾಣವನ್ನೂ ಆತ್ಮನೇ ಬೆಳಗಿ ತೋರಿಸುತ್ತಾನೆ. ಸ್ವಪ್ನ, ಜಾಗ್ರತ್ತು, ಪ್ರಪಂಚ- ಇವುಗಳ ನೆಪದಿಂದ ಆತ್ಮನನ್ನು ತರ್ಕವು ನೆನಪಿಗೆ ತರುತ್ತದೆ ಎಂಬುದೂ ಉಪಚಾರಮಾತ್ರವಾಗಿದೆ. ಏಕೆಂದರೆ ಅವಸ್ಥೆಗಳೂ ಆತ್ಮನಿಂದಲೇ ಸಿದ್ಧವಾಗುತ್ತವೆ ; ತರ್ಕವನ್ನೂ ಆತ್ಮನೇ ಬೆಳಗಿ ತೋರಿಸುತ್ತಾನೆ. ಹೆಚ್ಚೇನು? ಎಲ್ಲಾ ಅನಾತ್ಮವೂ ಆತ್ಮಾಶ್ರಯವಾಗಿಯೇ ಆತ್ಮನ ಚೈತನ್ಯಪ್ರಕಾಶದಿಂದಲೇ ಸಿದ್ಧಿಸುತ್ತದೆ. ಆದ್ದರಿಂದ ಅದನ್ನು ಶಾಸ್ತ್ರ, ತರ್ಕ- ಇವುಗಳಿಂದ ಸಾಧಿಸುತ್ತೇವೆಂಬುದು ಔಪಚಾರಿಕವೇ ಆಗಿರುತ್ತದೆ.

ಇನ್ನು **ವಾದವಿಚಾರ.** ವೇದಾಂತಿಗಳು ವಾದಮಾಡುವದು ಅನುಭವಾನುಸಾರವಾದ ತರ್ಕದಿಂದ ತತ್ತ್ವವನ್ನು ನೆನಪುಕೊಡುವದಕ್ಕೇ ಹೊರತು ಮತ್ತೊಬ್ಬರ ಮತವನ್ನು ಖಂಡಿಸುವದಕ್ಕಲ್ಲ. ತಮ್ಮ ಮತವನ್ನು ಸ್ಥಾಪಿಸುವದಕ್ಕೂ ಅಲ್ಲ. ಏಕೆಂದರೆ ಪರಮತವು ಮಿಥ್ಯಾಭೂತವಾದ ಅನಾತ್ಮದಲ್ಲಿಯೇ ಸೇರಿಕೊಂಡಿದೆಯಾದ್ದರಿಂದ ಅದನ್ನು ಖಂಡಿಸಬೇಕಾದದ್ದಿಲ್ಲ. ಸ್ವಪಕ್ಷವೆಂಬುದು ಆತ್ಮನೇ ಆಗಿರುವದರಿಂದ ಅದನ್ನು ಸ್ಥಾಪಿಸಬೇಕಾದದ್ದೂ ಇರುವದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಮತ್ತೊಬ್ಬರ ಪಕ್ಷವನ್ನು ಖಂಡಿಸುತ್ತೇನೆಂದು ಹೊರಡುವವನಿಗೆ ನಿಜವಾಗಿ ಆತ್ಮಜ್ಞಾನವೇ ಇಲ್ಲವೆನ್ನಬೇಕಾಗುತ್ತದೆ. ಜಲ್ಪನ್ಯಾಯದಿಂದ ಯಾಜ್ಞವಲ್ಕ್ಯರು ಮಿಕ್ಕ ಬ್ರಾಹ್ಮಣರನ್ನು ವಾದದಲ್ಲಿ ಸೋಲಿಸಿದರೆಂದು ಶ್ರುತಿಯಲ್ಲಿ ಹೇಳಿರುವದನ್ನೂ ಹೀಗೆಯೇ ತಿಳಿಯಬೇಕು. ಶ್ರುತಿಯು ಜಲ್ಪಕಥಾರೂಪದಿಂದ ಯಾಜ್ಞವಲ್ಕ್ಯರಿಗೂ ಮಿಕ್ಕ ಬ್ರಾಹ್ಮಣರಿಗೂ ಚರ್ಚೆಯಾದಂತೆಯೂ ಯಾಜ್ಞವಲ್ಕ್ಯರು ಅದರಲ್ಲಿ ಜಯಶೀಲರಾದಂತೆಯೂ ತಿಳಿಸುವದು ವ್ಯವಹಾರದಲ್ಲಿ ವಾಗ್ಯುದ್ಧದಲ್ಲಿ ಪ್ರವರ್ತಿಸುವ ನಮ್ಮಂಥವರನ್ನು ಕುರಿತು ತತ್ತ್ವಬೋಧಕ್ಕೆ ಸಹಾಯಕವಾಗಿ ವಾದವನ್ನುಪಯೋಗಿಸಿರಿ ಎಂದು ತಿಳಿಸುವದಕ್ಕೆ. ಜನಕನ ಯಜ್ಞದಲ್ಲಿ ಆದ ಈ ಚರ್ಚೆಯಲ್ಲಿ ಯಾಜ್ಞವಲ್ಕ್ಯನು ಅನುಮಾನಪ್ರಮಾಣದಿಂದಲೂ ಶುಷ್ಕತರ್ಕದಿಂದಲೂ ಯಾವದೊಂದು ವಿಷಯವನ್ನೂ ಸಾಧಿಸುವದಕ್ಕೆ ಹೋಗಿಲ್ಲವೆಂಬುದನ್ನು ನಾವು ಮನದಂದುಕೊಳ್ಳಬೇಕು. ಕ್ರಮಕ್ರಮವಾಗಿ ಅಕ್ಷರಶಬ್ದವೇದ್ಯವಾದ ಪರಬ್ರಹ್ಮವಸ್ತುವನ್ನು ತಿಳಿಸುವವರೆಗೂ ಅನುಭವಾನುಸಾರವಾಗಿಯೇ ವಿಷಯಪ್ರತಿಪಾದನೆಯು ನಡೆದಿದೆ.

ಅಂತೂ ಪ್ರಮಾಣಗಳನ್ನೂ ತರ್ಕವನ್ನೂ ಉಪಯೋಗಿಸುವವರು **ಪರಾಗ್ದೃಷ್ಟಿಯವರು ;** ಪ್ರಮಾಣಕ್ಕೆ ಮೀರಿದ ಪರಮಾರ್ಥವನ್ನು ಅನುಭವಾನುಸಾರಿಯಾದ ಯುಕ್ತಿಯಿಂದ ಮನಗಾಣಿಸುವ ವೇದಾಂತಿಗಳು **ಪ್ರತ್ಯಗ್ದೃಷ್ಟಿಯವರು ;** ಮಿಕ್ಕವರ ದೃಷ್ಟಿಯು **ಅಪೂರ್ಣ,** ಪರಮಜ್ಞೇಯದ ಭಾಗವನ್ನೇ ತೆಗೆದುಕೊಂಡು ವಿಚಾರಮಾಡುವ ದೃಷ್ಟಿ. ವೇದಾಂತಿಗಳದು ಜ್ಞೇಯವನ್ನೆಲ್ಲ ಇಡಿಯಾಗಿ ನೋಡುವ **ಪೂರ್ಣದೃಷ್ಟಿ.** ಈ ಪಕ್ಷದಲ್ಲಿ ಮಾತ್ರವೇ ಶಾಸ್ತ್ರಪ್ರಮಾಣ, ಮತ್ತು ತರ್ಕಗಳಿಗೆ ಹೊಂದಿಕೆಯಿರುತ್ತದೆ.

# ೬. ಬ್ರಹ್ಮಾತ್ಮಾನುಭವ

ವೇದಾಂತದೃಷ್ಟಿಯಿಂದ ಶ್ರುತಿಯು ಅಂತ್ಯಪ್ರಮಾಣವಾಗಿದೆ. ಅದು ಪ್ರಮಾಣವ್ಯವಹಾರವನ್ನೇ ಕಳೆದುಹಾಕಿ **ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್'** (ಬೃ. ೪-೫-೧೫) ಎಲ್ಲಿ ಅವಿದ್ಯೆಯಿಂದ ಎರಡನೆಯದಿರುವಂತೆ ತೋರುವದೋ, ಅಲ್ಲಿ ಒಬ್ಬನು ಮತ್ತೊಂದನ್ನು ಕಾಣುವನು; ಆದ್ದರಿಂದ ಪ್ರತ್ಯಕ್ಷಾದಿಪ್ರಮಾಣಾದಿಗಳಿಗೆ ಅದು ಸ್ಥಲವು; ಆದರೆ ಎಲ್ಲಿ ಎಲ್ಲವೂ ಆತ್ಮನೇ ಎಂಬ ಅರಿವಾಯಿತೋ, ಅಲ್ಲಿ ಏತರಿಂದ ಏನನ್ನು ಕಾಣುವದಕ್ಕಾದೀತು ?– ಎಂದು ಪರಮಾರ್ಥದೃಷ್ಟಿಯಿಂದ ನೋಡಿದರೆ ಪ್ರಮಾಣವ್ಯವಹಾರವು ಸಾಧ್ಯವೇ ಇಲ್ಲವೆಂದು ಹೇಳುತ್ತದೆ. ಹೀಗೆಯೇ ವೇದಾಂತದಲ್ಲಿ ತರ್ಕದ ಭಾಷೆಯನ್ನೂ ಉಪಯೋಗಿಸಬಹುದು; ಆದರೆ ಇಲ್ಲಿ ಅನುಸರಿಸುವದು ತಾರ್ಕಿಕರ ಕ್ರಮವಲ್ಲ. ಪೂರ್ಣಾನುಭವದಲ್ಲಿ ಕೊನೆಗಾಣುವಂತೆ ಅನುಭವಾನುಸಾರವಾಗಿ ತಂದೊಡ್ಡಿರುವ ಯುಕ್ತಿಪ್ರದರ್ಶನಮಾತ್ರವದು. ಈ ಗುಟ್ಟನ್ನರಿಯದೆ ತಾರ್ಕಿಕರ ಪರಿಭಾಷೆಗಳನ್ನು– ಅಥವಾ ಅದಕ್ಕೆ ಪ್ರತಿಯಾಗಿ ತಮ್ಮವೇ ಒಂದು ಹೊಸಬಗೆಯ ತರ್ಕದ ಪರಿಭಾಷೆಯನ್ನು– ಕಲ್ಪಿಸಿಕೊಂಡು ವೇದಾಂತಿಗಳೂ ಹೊಡೆದಾಡುತ್ತಿದ್ದಾರೆ. ಈ ದರ್ಶನದಲ್ಲಿ ತರ್ಕದ ಸರಣಿಯಿಂದ ಸಿದ್ಧಮಾಡಬೇಕಾದದ್ದು ಏನೂ ಇರುವದಿಲ್ಲ; ಅನುಭವಾನುಸಾರವಾಗಿ ಸ್ವತಃಸಿದ್ಧವಾಗಿರುವ ಆತ್ಮವಸ್ತುವನ್ನು ಯಾವದಾದರೊಂದು ಪ್ರಕಾರದಿಂದ ಜ್ಞಾಪಿಸಿಕೊಡುವ ಶ್ರುತಿಯೊಂದೇ ಸಾಕಾಗಿರುತ್ತದೆ. ಉದಾಹರಣೆಗೆ ಶರೀರೇಂದ್ರಿಯಗಳು ನಮ್ಮ ಸ್ವಭಾವಕ್ಕೇ ಸೇರಿಕೊಂಡಿವೆಯೊ, ಇಲ್ಲವೆ ?– ಎಂಬುದಕ್ಕೆ ಶ್ರುತಿಯು ಇವು ನಮ್ಮ ಸ್ವಭಾವವಲ್ಲವೆಂದು ತಿಳಿಸಿಕೊಡುವದಕ್ಕೆ ನಮ್ಮ ಮುಂದಿಟ್ಟಿರುವ ಒಂದು ವಾಕ್ಯವನ್ನು ನೋಡಿ : **'ಸ ಸಮಾನಃ ಸನ್ನುಭೌ ಲೋಕಾವನುಸಂಚರತಿ ಧ್ಯಾಯತೀವ ಲೇಲಾಯತೀವ ಸ ಹಿ ಸ್ವಪ್ನೋ ಭೂತ್ವೇಮಂ ಲೋಕಮತಿಕ್ರಾಮತಿ ಮೃತ್ಯೋ ರೂಪಾಣಿ'**॥ (ಬೃ. ೪-೩-೭) ಅಂತಃಕರಣವೆಂಬ ಉಪಾಧಿಯಿಂದ ಎರಡು ಅವಸ್ಥೆಗಳನ್ನೂ ಅನುಭವಿಸುತ್ತಿರುವ ಆತ್ಮನು ಸ್ವಪ್ನವನ್ನು ಕಾಣುತ್ತಿರುವಾಗ ಎಚ್ಚರದ ಶರೀರವಾಗಲಿ ಕರಣಗಳಾಗಲಿ ಅವ

ಶಿಗೆ ಇರುವದಿಲ್ಲ; ಆದರೂ ಅಲ್ಲಿ ಜ್ಞಾನೇಂದ್ರಿಯಗಳ ವ್ಯಾಪಾರವನ್ನೂ ಕರ್ಮೇಂದ್ರಿಯಗಳ ವ್ಯಾಪಾರವನ್ನೂ ಮಾಡುತ್ತಿರುವಂತೆ ಕಾಣಿಸುತ್ತಿರುತ್ತಾನೆ. ಎಚ್ಚರದ ಶರೀರವೂ ಇಂದ್ರಿಯಗಳೂ ಅವನಿಗೆ ಸ್ವಭಾವವಾಗಿದ್ದರೆ, ಆಗಲೂ ಅವು ಇರಬೇಕಾಗಿತ್ತಲ್ಲವೆ? ನಿಜವು ಹಾಗಿಲ್ಲವಲ್ಲ! ಹೀಗೆ ಅನುಭವಾನುಸಾರವಾಗಿ ಯುಕ್ತಿಯನ್ನೊಡ್ಡಿ ನಮಗೆ ಈಗ ಕಾಣುವ ಶರೀರೇಂದ್ರಿಯಗಳು ನಮ್ಮ ಸ್ವರೂಪಕ್ಕೆ ಸೇರಿಲ್ಲವೆಂಬ ನಿಜವನ್ನು ತಿಳಿಸುವದು ಶ್ರುತಿಯು

ಇಲ್ಲಿ ವೇದಾಂತಸಂಮತವಾದ **ಅನುಭವ**ವೆಂದರೇನೆಂಬುದನ್ನು ಸ್ವಲ್ಪ ವಿಚಾರಿಸುವದು ಅವಶ್ಯವಿದೆ. ಏಕೆಂದರೆ ಶ್ರುತಿವಾಕ್ಯವನ್ನು ಉದಾಹರಿಸಿ ತಮ್ಮತಮ್ಮ ಮನಸ್ಸಿಗೆ ತೋರಿದ ಅರ್ಥವನ್ನಿಟ್ಟಮಾತ್ರಕ್ಕೇ ಅದು ಮತ್ತೊಬ್ಬರಿಗೆ ಒಪ್ಪಾಗಲಾರದು; ಶ್ರುತಿಯು ಇದ್ದ ಅರ್ಥವನ್ನೇ ಜ್ಞಾಪಿಸಬೇಕಾಗಿರುವದರಿಂದ ವಾಕ್ಯದಿಂದಲೇ ನಮಗೆ **ಅನುಭವ**ವಾಗಬೇಕು ಶ್ರುತಿಯು ಹೇಳಿದ ಅರ್ಥವು ನಮ್ಮ ಮತಿಮಾಂದ್ಯದಿಂದ ನಮಗೆ ತಿಳಿಯದೆ ಹೋದರೆ ಆದರರ್ಥವನ್ನು ಕ್ರಮಕ್ರಮದಿಂದ ತಿಳಿಸಿಕೊಡುವದಕ್ಕಾಗಿ ಶ್ರುತಿಯಲ್ಲಿಯೇ ತರ್ಕವನ್ನೂ ಆದರಿಸಿರುತ್ತದೆ. ಆ ತರ್ಕವು ಯಾವ '**ಅನುಭವದ**' ಆಧಾರವೂ ಇಲ್ಲದ್ದಾದರೆ ಯಾರಿಗೂ ಒಪ್ಪಾಗಲಾರದು. ಆದ್ದರಿಂದ ತರ್ಕವೂ ಸರ್ವಸಮ್ಮತವಾದ **ಅನುಭವದ** ಆಧಾರದಮೇಲೆಯೇ ತನ್ನ ರಥವನ್ನು ಮುಂದಕ್ಕೆ ಸಾಗಿಸಬೇಕಾಗುತ್ತದೆ. ಇಂಥ ಒಂದು ತರ್ಕವು ಯಾವದಾದರೊಂದು ಸಿದ್ಧಾಂತವನ್ನು ಮಾಡಿದರೆ, ಅದೂ ನಮ್ಮ ಅನುಭವಕ್ಕೆ ಒಪ್ಪಾಗಬೇಕು. ಹೀಗೆ ವಿಚಾರವು ಅನುಭವದ ಆಧಾರದಿಂದ ಹೊರಟು ಅನುಭವದಿಂದ ಅನುಭವಕ್ಕೆ ಸಾಗುತ್ತಾ ಕೊನೆಗೆ ಆತ್ಮಜ್ಞಾನವೆಂಬ **ಅನುಭವ**ದಲ್ಲಿ ನಿಲುಗಡೆಯನ್ನು ಹೊಂದಬೇಕಾಗಿರುತ್ತದೆ. ಈ ಕೊನೆಯ ಅನುಭವವು ಅನುಮಿತವಾಗಿರಬಾರದು; ಮತ್ತೊಬ್ಬರ ಅನುಭವವಾಗಿರಬಾರದು; ನಮಗೇ ಆಗುವ ಅನುಭವವಾಗಬೇಕು. ಹಾಗಾದರೆ ಮಾತ್ರ ಶ್ರುತಿವಾಕ್ಯದಿಂದ ನಮಗೆ ಆತ್ಮಜ್ಞಾನವಾಗುವದೆಂದು ನಾವು ಹೇಳಬಹುದಾಗುತ್ತದೆ. ಆ ಜ್ಞಾನದಿಂದಾಗುವ ಶೋಕಮೋಹಾದಿಗಳ ಪರಿಹಾರವೆಂಬುದೂ ನಮಗೆ ಅನುಭವದಲ್ಲಿಯೇ ಕಾಣಬೇಕು. ಹೀಗೆ ಅನುಭವವನ್ನು ಬಿಟ್ಟು ವಿಚಾರದ ಯಾವ ಹಂತದಲ್ಲಿ

ಯೂ ಜಿಜ್ಞಾಸುಗಳು ಕದಲದಂತೆ ನೋಡಿಕೊಳ್ಳುವದೇ ವೇದಾಂತದ ಕ್ರಮವಾಗಿರುತ್ತದೆ.

ವೇದಾಂತವು ಅನುಭವಪರ್ಯಂತವೆಂಬುದನ್ನು ತಿಳಿಸಿಕೊಡುವದಕ್ಕೆ ಕೆಲವರು, ಸಾಧುಗಳು ಮಾಡಿತೋರಿಸುವ ಅದ್ಭುತಗಳನ್ನು ಉದಾಹರಿಸುವದುಂಟು; ಅಂಥ ಲೀಲೆಗಳನ್ನು ಪ್ರದರ್ಶಿಸುವವರು ಅನುಭವಿಗಳು ಎಂದು ಹೇಳುವದೂ ಉಂಟು. ಆದರೆ ಇದು ಸರಿಯಲ್ಲ. ಅದ್ವೈತಸಿದ್ಧಾಂತಕ್ಕಾಗಿ ಅನುಸರಿಸುವ ಪ್ರಕ್ರಿಯೆಯಲ್ಲಿ ವಿಚಾರವಾಗಲಿ, ಅದರಿಂದ ಹೊರಡುವ ಉಪಸಿದ್ಧಾಂತವಾಗಲಿ, ಸಾರ್ವತ್ರಿಕಾನುಭವಕ್ಕೆ ಹೊರಚಾಗಿದ್ದರೆ ಅದನ್ನು ಅನುಭವಾನುಸಾರಿಯೆಂದು, ಅಥವಾ ಅನುಭವದಲ್ಲಿ ಪರ್ಯವಸಾನವಾಗುವದೆಂದು ಹೇಳುವದಕ್ಕೆ ಬರುವದಿಲ್ಲ. ತಪಸ್ಸಿನಿಂದ ಅಥವಾ ಯೋಗಾಭ್ಯಾಸದಿಂದ ಸಿದ್ಧಿಗಳು ಆಗಲಾರವೆಂದೇನೂ ನನ್ನ ಅಭಿಪ್ರಾಯವಿಲ್ಲ; ಆದರೆ ಆ ಸಿದ್ಧಿಗಳಿಗೂ ಅದ್ವೈತಸಿದ್ಧಾಂತವು ನಿರ್ಣಯವಾಯಿತೆಂಬುದಕ್ಕೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಮಾತ್ರ ಹೇಳಿಬಿಡಬೇಕಾಗಿದೆ.

ಅದ್ವೈತವು ಸುನಿಶ್ಚಿತನಾಗಿ ಸಿದ್ಧವಾಗುವದಕ್ಕೆ ಕಟ್ಟಕಡೆಯ ಅನುಭವದಲ್ಲಿ ದ್ವಿತೀಯವಸ್ತುವಿನ ಅರಿವು ಇರಬಾರದು. ದ್ವೈತವು ಮಾರ್ಪಡುತ್ತಿರುವ ವೃತ್ತಿಗಳಿಂದೊಡಗೂಡಿದೆ ಎಂದಮಾತ್ರಕ್ಕೆ ಅದು ಮಿಥ್ಯೆಯೆಂದೇನೂ ಸಿದ್ಧವಾಗುವದಿಲ್ಲ. ದ್ವೈತವು ಇಲ್ಲವೇಇಲ್ಲವೆಂಬ ಸ್ಥಿತಿಯೂ ನಮ್ಮ ಅನುಭವಕ್ಕೆ ಬರಬೇಕು. ಅಂಥದ್ದೊಂದು ಸ್ಥಿತಿಯು ಇದೆಯೆ? ಶ್ರುತಿಯು ಆತ್ಮನು ಯಾವಾಗಲೂ ಚೈತನ್ಯಸ್ವರೂಪನಾಗಿರುತ್ತಾನೆಂದು ತಿಳಿಸುವ ಸಂದರ್ಭದಲ್ಲಿ ಈ ವಿಷಯಕ್ಕೆ ಹೀಗೆಂದಿದೆ: **'ಯದ್ವೈ ತನ್ನ ವಿಜಾನಾತಿ ವಿಜಾನನ್ವೈ ತನ್ನ ವಿಜಾನಾತಿ ನ ಹಿ ವಿಜ್ಞಾತುರ್ವಿಜ್ಞಾತೇರ್ವಿಪರಿಲೋಪೋ ವಿದ್ಯತೇಽವಿನಾಶಿತ್ವಾನ್ನ ತು ತದ್ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯದ್ ವಿಜಾನೀಯಾತ್'** (ಬೃ. ೪-೩-೩೦) ಆತ್ಮನು ಸುಷುಪ್ತಿಯಲ್ಲಿ ಏನನ್ನೂ ಅರಿಯುವದಿಲ್ಲ, ಆದರೂ ಅಲ್ಲಿಯೂ ಅವನು ಚೈತನ್ಯಸ್ವರೂಪನಾಗಿಯೇ ಇರುತ್ತಾನೆ. ಹಾಗಾದರೆ ಅವನು ಏನನ್ನೂ ಅರಿಯದಿರುವದೇಕೆ? ಎಂದರೆ ಅವನಿಗಿಂತ ವಿಭಕ್ತವಾಗಿರುವ ದ್ವಿತೀಯವಸ್ತು ಅಲ್ಲಿರುವದಿಲ್ಲವಾದ್ದ

ರಿಂದ. ಅವನ ಅರಿವು ನಾಶವಿಲ್ಲದ ಅವನ ಸ್ವಭಾವವೇ ಆಗಿರುವದರಿಂದ ಆ ಅವಸ್ಥೆಯಲ್ಲಿ ಅವನು ಅರಿಯುವ ಶಕ್ತಿಯಿಲ್ಲದವನಾಗಿರುತ್ತಾನೆಂಬುದಕ್ಕೆ ಇರುವದಿಲ್ಲ. ಇದು ಎಲ್ಲರಿಗೂ ಅನುಭವದಲ್ಲಿರುವ ಗಾಢನಿದ್ರೆಯ ಅನುಭವದ ಆಧಾರದಮೇಲೆ ಮಾಡಿರುವ ತರ್ಕ. ಅಲ್ಲಿ ದ್ವಿತೀಯವಸ್ತುವಿಲ್ಲವೇಇಲ್ಲ ಎಂಬುದು ನಮ್ಮೆಲ್ಲರ ಅನುಭವ. ಆದರೆ ದ್ವೈತಿಗಳು ಹೀಗೆಂದು ಒಪ್ಪುವದಿಲ್ಲ, ಒಪ್ಪಿದರೆ ಅವರೂ ಅದ್ವೈತಿಗಳೇ ಆಗಿಬಿಡುತ್ತಾರೆ. ಆದ್ದರಿಂದಲೇ ಅವರು 'ಒಬ್ಬನು ನಿದ್ರಿಸುತ್ತಿದ್ದರೆ ಮಿಕ್ಕವರು ಎಚ್ಚರವಾಗಿರುವದಿಲ್ಲವೆ ? ಈ ಕಾರಣದಿಂದ ದ್ವೈತವು ಆಗಲೂ ಇರಬಹುದೆಂದಾಗುವದಿಲ್ಲವೆ ?'–ಎಂದು ಪ್ರತಿಯುಕ್ತಿಯನ್ನು ಹೂಡುತ್ತಿರುವರು. ಈ ಆಕ್ಷೇಪಕ್ಕೆ ಶ್ರುತಿಯುಕ್ತ್ಯನುಭವಗಳಿಗೆ ಹೊಂದುಗೆಯಾಗುವ ಪರಿಹಾರವನ್ನು ನಾವು ಕಂಡುಕೊಳ್ಳುವದಕ್ಕೆ ಪ್ರಯತ್ನಿಸಬೇಕು, ಆಗ ಮಾತ್ರ ಅದ್ವೈತವು ಅನುಭವಪರ್ಯವಸಾಯಿ– ಎಂಬುದು ಬರಿಯ ಮಾತಾಗದೆ ನಿಜವಾಗುತ್ತದೆ.

ಇಲ್ಲಿ ಕೆಲವರು ಅದ್ವೈತವೇದಾಂತಿಗಳು 'ದ್ವೈತವು ಸುಷುಪ್ತಿಯಲ್ಲಿ ಅವಿದ್ಯಾಬೀಜರೂಪವಾಗಿ ಉಳಿದುಕೊಂಡಿರುತ್ತದೆ. ಆದ್ದರಿಂದಲೇ ನಿದ್ರಿಸಿದವರು ಮತ್ತೆ ಎಚ್ಚರುವದಕ್ಕೆ ಅವಕಾಶವಿರುತ್ತದೆ. ಆದರೆ ಸಮಾಧಿಯಲ್ಲಿ ಅವಿದ್ಯೆಯು ಸಂಪೂರ್ಣವಾಗಿ ಹೋಗಿಬಿಡುತ್ತದೆ, ಆದ್ದರಿಂದ ಅದೇ ಅದ್ವೈತಾನುಭವ' ಎಂದು ಅಭಿಪ್ರಾಯಪಟ್ಟಿರುತ್ತಾರೆ. ಸಮಾಧಿಯಿಂದ ಎಚ್ಚತ್ತಮೇಲೆ ಮತ್ತೆ ದ್ವೈತವು ಕಾಣುವದಿಲ್ಲವೆ?–ಎಂದು ಕೇಳಿದರೆ ಅದು ಬಾಧಿತವಾದ ಅವಿದ್ಯಾವಾಸನೆಯ ಅನುವೃತ್ತಿಯಿಂದ ಹಾಗೆ ತೋರುತ್ತದೆಯಾದ್ದರಿಂದ ಅದ್ವೈತಾನುಭವಕ್ಕೆ ಬಾಧಕವಲ್ಲ; ಅಥವಾ ಪ್ರಾರಬ್ಧಕರ್ಮವನ್ನು ಅನುಭವಿಸುವಷ್ಟುಮಟ್ಟಿಗೆ **ಜೀವನ್ಮುಕ್ತರಲ್ಲಿಯೂ ಅವಿದ್ಯಾಲೇಶವು** ಇದ್ದುಕೊಂಡೇಇರುತ್ತದೆ, ಶರೀರವು ಬಿದ್ದುಹೋದ ಬಳಿಕ ಸಂಪೂರ್ಣವಾಗಿ ಅವಿದ್ಯಾನಿವೃತ್ತಿಯಾಗಿ **ವಿದೇಹಮುಕ್ತಿ**ಯೆಂಬ ಮುಖ್ಯಮೋಕ್ಷವು ಪ್ರಾಪ್ತವಾಗುತ್ತದೆ– ಎಂದು ಹೇಳುತ್ತಾರೆ. ಈ ಮತದಲ್ಲಿ ಅನುಭವಪರ್ಯಂತವಾದ ಅದ್ವೈತಜ್ಞಾನವು ಉಂಟಾಯಿತೆಂದು ಹೇಳುವದಕ್ಕೆ ಅವಕಾಶವಿರುವದಿಲ್ಲ. ಏಕೆಂದರೆ ದ್ವೈತವು ಸಮಾಧಿಯಿಂದ ಎಚ್ಚತ್ತಮೇಲೂ ಸುಷುಪ್ತಿಯಿಂದ ಎಚ್ಚತ್ತಮೇಲೆ ಹೇಗೋ ಹಾಗೆಯೇ ಕಾಣಿಸುತ್ತಿರುವಲ್ಲಿ ಸಮಾಧಿ

ಯಿಂದಾದ ಅನುಭವವು ಅದ್ವೈತಾನುಭವ, ಸುಷುಪ್ತಿಯಿಂದಾದದ್ದು ಅಲ್ಲ–ಎಂಬ ತಾರತಮ್ಯವನ್ನು ಕಲ್ಪಿಸುವದಕ್ಕೆ ಆಧಾರವೇನೂ ಇರುವದಿಲ್ಲ. ಸತ್ತ ಬಳಿಕ ಅದ್ವೈತಪ್ರಾಪ್ತಿ ಎಂದರೆ ಕರ್ಮದಿಂದಾಗುವಂತೆ ಜ್ಞಾನದಿಂದಲೂ ಅದೃಷ್ಟಫಲವೇ ಆಗುತ್ತದೆ ಎಂದು ಹೇಳಿದಂತೆ ಆಗುತ್ತದೆ. ಹಾಗೂ ಆಗಲಿ ಎಂದರೆ, ಜ್ಞಾನವು ವಸ್ತುತಂತ್ರವಾಗಿರುವದರಿಂದ ತನ್ನ ವಿಷಯವನ್ನು ಉತ್ಪತ್ತಿಸಮಕಾಲದಲ್ಲಿಯೇ ತಿಳಿಸಿಕೊಡುತ್ತದೆ, ಜ್ಞಾನದಿಂದ ಅಜ್ಞಾನವು ಪೂರ್ಣವಾಗಿ ನಾಶವಾಗುತ್ತದೆ– ಎಂಬ ಸರ್ವಸಂಮತವಾದ ಆಚಾರ್ಯರ ಸಿದ್ಧಾಂತಕ್ಕೆ ವಿರೋಧವಾಗುತ್ತದೆ. ಇದೂ ಅಲ್ಲದೆ **'ತತ್ತ್ವಮಸಿ'** (ನೀನು ಬ್ರಹ್ಮವಾಗಿರುವೆ), **'ಬ್ರಹ್ಮೈವೇದಂ ವಿಶ್ವಮ್'** (ಈ ವಿಶ್ವವೆಲ್ಲವೂ ಬ್ರಹ್ಮವೇ) ಎಂಬ ವೇದಾಂತವಾಕ್ಯಗಳು ಜೀವಜಗತ್ತುಗಳು ಸ್ವಭಾವದಿಂದ ಬ್ರಹ್ಮಸ್ವರೂಪವಾಗಿರುತ್ತವೆ ಎಂದು ಹೇಳುತ್ತವೆಯೇ ಹೊರತು ಸಮಾಧಿಯಲ್ಲಿ ಇವು ಬ್ರಹ್ಮವಾಗಿರುವವು ಎಂದಾಗಲಿ, ಜೀವರು ಸತ್ತಬಳಿಕ ಬ್ರಹ್ಮವಾಗುವರು ಎಂದಾಗಲಿ ಹೇಳುತ್ತಿಲ್ಲ. ಆದ್ದರಿಂದ ಈ ವಾದದಲ್ಲಿ ಶ್ರುತಿಯು ಅನುಭವಸಿದ್ಧವಾದದ್ದನ್ನು ಜ್ಞಾಪಿಸುವ ಪ್ರಮಾಣವಲ್ಲವೆಂದು ಹೇಳಿದಂತೆಯೂ ಆಗಿದೆ. ಇದೂ ಆಚಾರ್ಯರ ಸಿದ್ಧಾಂತಕ್ಕೆ ವಿರುದ್ಧವೇ ಆಗುತ್ತದೆ. ಹೀಗೆಯೇ 'ವ್ಯವಹಾರಾವಸ್ಥೆಯಲ್ಲಿ ದ್ವೈತ, ಪರಮಾರ್ಥಾವಸ್ಥೆಯಲ್ಲಿ ಅದ್ವೈತ– ಎರಡೂ ಸರಿ' ಎಂದು ಹೇಳುತ್ತಾ ವಿಷಯನಿರ್ಣಯವನ್ನು ಮಾಡದೆ ತಪ್ಪಿಸಿಕೊಳ್ಳುವದಕ್ಕೆ ಪ್ರಯತ್ನಿಸುವದೂ ಆಚಾರ್ಯರ ಸಿದ್ಧಾಂತವಾಗಲಾರದು. ಏಕೆಂದರೆ ಅದ್ವೈತವು ಪರಮಾರ್ಥವಾದರೆ ಒಂದು ಅವಸ್ಥೆಯಲ್ಲಿ ಮಾತ್ರ ಇರತಕ್ಕದ್ದಾಗಿರಬಾರದು ; ಅದು ಯಾವಾಗಲೂ ಇರುವದಾಗಿದ್ದು ಅದನ್ನೇ ಶ್ರುತಿವಾಕ್ಯವು ತಿಳಿಸಬೇಕು.

ಆಚಾರ್ಯರು **'ಅನುಭವಾರೂಢಂ ತು ಜ್ಞಾನಫಲಮ್ । ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ ಇತಿ ಶ್ರುತೇಃ । ತತ್ತ್ವಮಸಿ ಇತಿ ಚ ಸಿದ್ಧವದುಪದೇಶಾತ್ ॥'** (ಸೂ. ಭಾ. ೩–೩–೩೨) ಬ್ರಹ್ಮವು ಸಾಕ್ಷಾತ್ತಾಗಿ ಅಪರೋಕ್ಷವಾಗಿರುತ್ತದೆ ಎಂತ ಹೇಳಿರುವದರಿಂದಲೂ ಅದೇ ನೀನಾಗಿರುವೆ– ಎಂದು ಈಗಲೇ ಬ್ರಹ್ಮವಾಗಿರುವೆ ಎಂದು ಉಪದೇಶಿಸಿರುವದರಿಂದಲೂ ಜ್ಞಾನಫಲವು ಅನುಭವದಲ್ಲಿ ತೋರತಕ್ಕದ್ದು ಎಂದು ಸ್ಪಷ್ಟವಾಗಿ ಬರೆದಿರುತ್ತಾರೆ.

ಆದ್ದರಿಂದ ಸತ್ತಬಳಿಕವೇ ಮುಖ್ಯಮುಕ್ತಿ ಎಂಬುದು ಆಚಾರ್ಯರ ವೇದಾಂತ ವಲ್ಲ. ಶಾಸ್ತ್ರವು ಇರುವದನ್ನು ಜ್ಞಾಪಿಸುವ ಪ್ರಮಾಣವಾಗಬೇಕಷ್ಟೆ? **'ಏಕೋ ದೇವಃ ಸರ್ವಭೂತೇಷು ಗೂಢಃ'** ಒಬ್ಬ ಪರಮಾತ್ಮನೇ ಎಲ್ಲ ಪ್ರಾಣಿಗಳಲ್ಲಿಯೂ ಇದ್ದುಕೊಂಡಿರುತ್ತಾನೆ ಎಂಬ ಶ್ರುತಿಯ ಪ್ರಮಾಣದಿಂದ ನಮ್ಮಲ್ಲಿ ಸಾಕ್ಷಿಯು ಪ್ರಮಾತೃವನ್ನು ನೋಡುತ್ತಿರುವದು ಅನುಭವದಲ್ಲಿರುತ್ತದೆ. ನಮ್ಮ ಆತ್ಮನಿಗೆ ಸುಖದುಃಖಾದಿಗಳಿವೆಯಲ್ಲ! ಅವನು ಅಸಂಸಾರಿಯಾದ ಸರ್ವಸಾಕ್ಷಿಯಾದ ಪರಮಾತ್ಮನು ಹೇಗಾದಾನು? - ಎಂದು ಶಂಕಿಸಬಾರದು. ಈ ಶಂಕೆಗೆ ಆಚಾರ್ಯರು ಹೇಳಿರುವ ಪರಿಹಾರವಿದು : **ದೇಹಾದಿವದೇವ ಚೈತನ್ಯಾತ್ ಬಹಿರುಪಲಭ್ಯಮಾನತ್ವಾದ್ದುಃಖಿತ್ವಾದಿ ನಾಮ್। ಸುಷುಪ್ತ್ಯಾದಿಷು ಚಾನನುವೃತ್ತೇಃ ॥** (ಸೂ. ಭಾ. ೪-೧ ೩) ದೇಹೇಂದ್ರಿಯಗಳು ಹೇಗೆ ಚೈತನ್ಯಕ್ಕಿಂತ ಹೊರಚಾಗಿ ಅನುಭವಕ್ಕೆ ಬರುವವೋ ಹಾಗೆಯೇ ದುಖಾದಿಗಳೂ ವಿಷಯವಾಗಿ ಅದಕ್ಕಿಂತ ಹೊರಗೇ ಇರುವಂತೆ ಅನುಭವವಿದೆ; ಸುಷುಪ್ತಿ, ಸಮಾಧಿ– ಮುಂತಾದ ಅವಸ್ಥೆಗಳಲ್ಲಿ ಅವು ವಿಚ್ಛಿತ್ತಿಯಾಗುವದೂ ಅನುಭವದಲ್ಲಿದೆ. ಆತ್ಮನ ಚೈತನ್ಯವೋ, ಎಂದರೆ ಸುಷುಪ್ತಿಯಲ್ಲಿಯೂ ಮುಂಬರಿದುಕೊಂಡೇ ಇರುತ್ತವೆ. ಅದರ ಬಲದಿಂದಲೇ ಅಲ್ಲವೆ, ಸುಷುಪ್ತಿಯನ್ನು ನಾವು ಅನುಭವಿಸುವದು? **ತಸ್ಮಾತ್ ಸರ್ವದುಃಖವಿನಿರ್ಮುಕ್ತೈಕಚೈತನ್ಯಾತ್ಮಕೋಽಹಮ್ ಇತ್ಯೇಷ ಆತ್ಮಾನುಭವಃ'** (ಸೂ. ಭಾ. ೪–೧ ೨) ಆದ್ದರಿಂದ ಎಲ್ಲಾ ಬಗೆಯ ದುಃಖದಿಂದಲೂ ಬಿಡುಗಡೆ ಹೊಂದಿದ ಚೈತನ್ಯವೇ ನಾನು ಎಂಬುದೇ **ಆತ್ಮಾನುಭವವು.** ಜನ್ಮಾದಿ ವಿಕಾರಗಳು ಯಾವವೂ ಇಲ್ಲದೆ ದ್ರವ್ಯಾದಿಧರ್ಮಗಳೂ ಇಲ್ಲದೆ **'ವ್ಯಾವೃತ್ತ ಸರ್ವಸಂಸಾರಧರ್ಮಕೋಽನುಭವಾತ್ಮಕೋ ಬ್ರಹ್ಮಸಂಜ್ಞಕಸ್ತತ್ಪದಾರ್ಥಃ'** (ಸೂ. ಭಾ. ೪–೧-೩) ಯಾವ ಸಂಸಾರಧರ್ಮವೂ ಇಲ್ಲದ ಅನುಭವದ ಸ್ವರೂಪವೇ ಬ್ರಹ್ಮವೆಂಬ ಹೆಸರುಳ್ಳದ್ದು, ಅದೇ 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ತತ್ ಎಂಬ ಪದದ ಅರ್ಥವೆಂದು ಶ್ರುತಿಯಿಂದ ತಿಳಿಯಬರುತ್ತದೆ. ಆದ್ದರಿಂದ ತತ್ಪದಕ್ಕೆ ಅರ್ಥವಾದ ಬ್ರಹ್ಮವೇ ನಾನು ಎಂದು ವಿವೇಕಿಯಾದ ಅಧಿಕಾರಿಯು ಅನುಭವದಲ್ಲಿ ಕಂಡುಕೊಳ್ಳುವದಕ್ಕೆ ಬರುತ್ತದೆ.

ಇಲ್ಲೊಂದು ಶಂಕೆ. ಸಾಕ್ಷಿಯಾಗಿರುವ ನಮ್ಮ ಆತ್ಮನಿಗೆ ದೃಶ್ಯಗಳು ಕಾಣಿಸುತ್ತಿವೆಯಲ್ಲವೆ ? ಕಂಡರೆ ಅವನು ಅದ್ವೈತವಾದ ಬ್ರಹ್ಮವು ಹೇಗಾದಾನು ? ಕಾಣಿಸವೆ ಇದ್ದರೆ, ದೇಹಾದಿಗಳಂತೆ ದುಃಖಾದಿಗಳೂ ಸಾಕ್ಷಿ ಚೈತನ್ಯಕ್ಕೆ ಹೊರಚಾಗಿ ಕಾಣುತ್ತವೆ ಎಂದು ಒಡ್ಡಿದ ಯುಕ್ತಿ ಹೇಗೆ ಸರಿ ? ಇದಕ್ಕೆ ಪರಿಹಾರವೇನೆಂದರೆ ದೇಹಾದಿಗಳಂತೆ ದುಃಖಾದಿಗಳೂ ನಮಗೆ ದೃಶ್ಯವಾಗಿ ಕಾಣಿಸುತ್ತವೆ ಎಂಬುದರಲ್ಲಿ ಯಾರೊಬ್ಬರಿಗೂ ಸಂಶಯವಿಲ್ಲ; ಏಕೆಂದರೆ ಅದು ಎಲ್ಲರ ಅನುಭವದಲ್ಲಿಯೂ ಇದೆ. ಈ ಅನುಭವದಿಂದ ದುಃಖಾದಿಗಳು ನಮ್ಮ ಸ್ವರೂಪಕ್ಕೆ ಸೇರಿಲ್ಲವೆಂಬುದು ಸಿದ್ಧವಾಯಿತು. ಆದರೆ ನಮ್ಮ ಆತ್ಮನು ಎಲ್ಲಕ್ಕೂ ಸಾಕ್ಷಿಯು ಎಂಬುದಾದರೂ ನಿಜವೆ? ಸಾಕ್ಷಿತ್ವವು ಅವನ ಸ್ವಭಾವಕ್ಕೆ ಗಂಟುಬಿದ್ದೇ ಇದೆಯೆ? ಸುಷುಪ್ತ್ಯಾದಿಗಳಲ್ಲಿ ಯಾವದೊಂದು ದೃಶ್ಯವೂ ಇಲ್ಲದಿದ್ದರೂ ಆತ್ಮಚೈತನ್ಯವು ಇದ್ದುಕೊಂಡೇ ಇರುತ್ತದೆ ಎಂಬ ಅನುಭವವನ್ನು ಮನದಂದರೆ ಆತ್ಮನ ಸಾಕ್ಷಿತ್ವವು ಸಾಕ್ಷ್ಯದ ಅಪೇಕ್ಷೆಯಿಂದ ಬಂದದ್ದು ಎಂಬುದು ಸ್ಫುಟವಾಗುತ್ತದೆ. ಸೂರ್ಯನು ಎಲ್ಲವನ್ನೂ ಬೆಳಗುತ್ತಿರುತ್ತಾನೆ ಎಂಬಲ್ಲಿ ಆ ವಸ್ತುವನ್ನು ಬೆಳಗುವವೆಂಬ ಧರ್ಮವು ಅವನ ಸ್ವಭಾವಕ್ಕೆ ಸೇರಿದ್ದೆಂದು ಹೇಳುವದು ಯುಕ್ತವಾದೀತೆ? ಸೂರ್ಯನಿಂದ ನಮಗೆ ಹಗಲುರಾತ್ರಿಗಳಾಗುವವಾದ್ದರಿಂದ- ಸೂರ್ಯನು ಕಾಣಿಸುವಾಗ ಹಗಲು, ಮುಳುಗಿ ಕಾಣಿಸದೆ ಇರುವಾಗ ರಾತ್ರಿ, ಹೀಗೆ ಇದ್ದರೂ--ಸೂರ್ಯನಿಗೆ ಹಗಲಾಗಲಿ ರಾತ್ರಿಯಾಗಲಿ ಉಂಟೆ ? ಅವನು ನಿಃಪ್ರಕಾಶಮಾತ್ರನಲ್ಲವೆ? ಆದ್ದರಿಂದ ಸಾಕ್ಷ್ಯದ ಅಪೇಕ್ಷೆಯಿಂದ ನಾವು ಕಲ್ಪಿಸಿರುವ ಸಾಕ್ಷಿತ್ವವೂ ಆತ್ಮನ ಸ್ವಭಾವಕ್ಕೆ ಸೇರಿರುವದೇ ಇಲ್ಲ. ಆತ್ಮನು ಸತ್ಯಚೈತನ್ಯಪ್ರಕಾಶಮಾತ್ರನು ಎಂಬುದೇ ಯುಕ್ತವೆಂದಾಯಿತು.

ಯಾರು ಶಾಂತಿದಾಂತ್ಯಾದಿಗುಣಗಳಿಂದ ತಮ್ಮ ಆತ್ಮಸ್ವರೂಪವನ್ನೇ ಪ್ರತ್ಯಗ್ದೃಷ್ಟಿಯನ್ನವಲಂಬಿಸಿ ವಿವೇಚನೆಮಾಡಿರುವರೋ, ಅಂಥವರಿಗೆ 'ನಾನು' ಎಂಬ ಸ್ವರೂಪವನ್ನು ದಾಟಿದ ಅನುಭವಾತ್ಮಕವಾದ ತಮ್ಮ ಸ್ವರೂಪದ ಅರಿವಾಗುತ್ತದೆ. ನಮ್ಮೆಲ್ಲರ ಆತ್ಮನೂ ಒಬ್ಬನೇ, ಅವನೇ ಅನುಭವಾತ್ಮಕವಾದ ಪರಮಾತ್ಮನು ; ಅವನು ಅದ್ವೈತಸ್ವರೂಪನಾದರೂ ಅವನಲ್ಲಿಯೇ ಎಲ್ಲವೂ ಕಲ್ಪಿತವಾಗಿ, ಅವನ ಪ್ರಕಾಶದಿಂದಲೇ ಬೆಳಗುತ್ತಿರು

ವದು–ಎಂಬ ಅಮೋಘತತ್ತ್ವವು ಅವರ ಮನಸ್ಸಿನಲ್ಲಿ ಮಿಂಚುತ್ತದೆ. ಸಮಾಧಿಯೇ ಮುಂತಾದ ಅನುಭವಗಳಿಂದಲೂ ಈ ಸ್ವರೂಪವೇ ಅಭಿವ್ಯಕ್ತವಾಗುವದರಿಂದ ಇದೇ ಸರಿಯಾದ ಅನುಭವವೆಂಬುದು ದೃಢವಾಗುತ್ತದೆ.

# ೬. ವೇದಾಂತಜ್ಞಾನದ ಪ್ರಯೋಜನ

ಈವರೆಗೆ ಹೇಳಿರುವ ವಿಚಾರಕ್ರಮದಿಂದ ನಾವು ಎಲ್ಲಿಗೆ ಬಂದು ಮುಟ್ಟಿರುವೆವೆಂದರೆ, ಲೌಕಿಕವಿಜ್ಞಾನಶಾಸ್ತ್ರವು ಪರಾಗ್ದೃಷ್ಟಿಯನ್ನನುಸರಿಸಿ ಹೊರಗಿನ ದೃಶ್ಯಭಾಗಗಳನ್ನು ಬಿಡಿಸಿಬಿಡಿಸಿ ನಿರೀಕ್ಷಣಪರೀಕ್ಷಣಸಂವಾದೀ ಕರಣಗಳೆಂಬ ಪ್ರಕ್ರಿಯಾಸಾಧನಗಳನ್ನು ಉಪಯೋಗಿಸುತ್ತಾ ಬಂದದ್ದರ ಫಲವಾಗಿ ಅದರಿಂದ ವ್ಯಾವಹಾರಿಕವಾದ ಅನೇಕ ಪ್ರಯೋಜನಗಳು ಉಂಟಾಗಿರುವದು ನಿಜವಾದರೂ ಅದಕ್ಕೆ ದೃಶ್ಯದ ತತ್ತ್ವವೇನೆಂಬುದೇ ಗೊತ್ತಾಗಿಲ್ಲ. ಅದು ಮುಂದುವರಿದಂತೆಲ್ಲ ದೃಶ್ಯವು ಬಗೆಬಗೆಯ ರೂಪಗಳನ್ನು ತಳೆಯುತ್ತಾ ಅದರ ಕೈಯಿಂದ ನುಸುಳಿಕೊಂಡೇ ಹೋಗುತ್ತಲಿವೆ. ಹೀಗೆಯೇ ಪರಾಗ್ದೃಷ್ಟಿ ಪ್ರಧಾನರಾಗಿಯೇ ಆಧ್ಯಾತ್ಮಿಕತತ್ತ್ವಗಳನ್ನು ವಿಚಾರಮಾಡುವ ಪಾಶ್ಚಾತ್ತ್ಯ ತತ್ತ್ವಶಾಸ್ತ್ರಜ್ಞರೂ ದರ್ಶನಕಾರರೂ ತರ್ಕಶರಣರಾಗಿರುವದರಿಂದಲೂ ಪೂರ್ಣದೃಶ್ಯವನ್ನು ವಿಚಾರಕ್ಕೆ ಒಳಪಡಿಸಿಕೊಳ್ಳದೆ ಇದ್ದದ್ದರಿಂದಲೂ ಒಬ್ಬೊಬ್ಬರು ಒಂದೊಂದು ಸಿದ್ಧಾಂತಕ್ಕೆ ಬಂದುನಿಂತಿದ್ದಾರೆ. ನಮ್ಮ ದೇಶದ ದರ್ಶನಕಾರರೂ ಹೀಗೆಯೇ; ಅವರೂ ಪೂರ್ಣದೃಷ್ಟಿಯನ್ನವಲಂಬಿಸದೆ ಇದ್ದದ್ದರಿಂದ ಒಬ್ಬೊಬ್ಬರ ದೃಷ್ಟಿಕೋಣದಿಂದ ಒಂದೊಂದು ಸಿದ್ಧಾಂತವು ಏರ್ಪಟ್ಟಿರುತ್ತದೆ. ಮತಗ್ರಂಥಗಳನ್ನು ಪ್ರಮಾಣವಾಗಿಟ್ಟುಕೊಂಡವರಿಗಂತೂ ಪರಸ್ಪರವಾಗಿ ಅಭಿಪ್ರಾಯಭೇದಗಳೇ ಹೊರಹೊಮ್ಮಿಕೊಂಡಿವೆ. ಪರಮಾರ್ಥತತ್ತ್ವವು ಯಾರೊಬ್ಬರಿಗೂ ದಕ್ಕಿರುವದಿಲ್ಲ.

ವೇದಾಂತದಲ್ಲಿ ಅವಲಂಬಿಸಿರುವ ಪ್ರತ್ಯಗ್ದೃಷ್ಟಿಯು ಅದಕ್ಕೆ ಅಸಾಧಾರಣವಾಗಿರುತ್ತದೆ. ಮಿಕ್ಕ ಆಸ್ತಿಕದರ್ಶನಗಳಂತೆಯೂ ಮತಾಂತರಗಳಂತೆಯೂ ಅದೂ ಶಾಸ್ತ್ರಪ್ರಾಮಾಣ್ಯವನ್ನು ಇಟ್ಟುಕೊಂಡಿದೆಯಾದರೂ ಅದು,

ಉಪನಿಷದ್ವಾಕ್ಯಗಳು ವಸ್ತು ಇದ್ದದ್ದು ಇದ್ದಂತೆ ತಿಳಿಸುವ ಜ್ಞಾಪಕಸಾಮಗ್ರಿಯೇ ಹೊರತು, ಇಲ್ಲದ್ದನ್ನುಂಟುಮಾಡುವ ಕಾರಕವಲ್ಲ-ಎಂಬ ನಿಯಮವನ್ನು ಅಂಗೀಕರಿಸಿರುವದರಿಂದ ಶಾಸ್ತ್ರಾರ್ಥದ ವಿಷಯಕ್ಕೆ ಅವರಲ್ಲಿ ಮತಭೇದಗಳು ಉಂಟಾಗುವದಕ್ಕೆ ಕಾರಣವಿರುವದಿಲ್ಲ. ಲೌಕಿಕವಿಜ್ಞಾನಶಾಸ್ತ್ರದವರಂತೆಯೂ ತತ್ತ್ವವಿಚಾರಕರಂತೆಯೂ ವೇದಾಂತವೂ ತರ್ಕವನ್ನು ಅವಲಂಬಿಸಿದೆಯಾದರೂ **ತರ್ಕವು** 'ಅನುಭವಾನುಸಾರಿಯಾಗಿಯೇ ಇರಬೇಕು, ಜಿಜ್ಞಾಸೆಯು ಅನುಭವದಲ್ಲಿಯೇ ಕೊನೆಗಾಣಬೇಕು' ಎಂಬ ನಿಯಮವನ್ನನುಸರಿಸಿರುವದರಿಂದ ಶ್ರುತಿಯಲ್ಲಿ ಹೇಳಿರುವ-ಅಥವಾ ಅದಕ್ಕನುಗುಣವಾಗಿ ಬೇರೆಯಾಗಿ ಉಪಯೋಗಿಸುವ-ಯಾವ ತರ್ಕಗಳೂ ಈ ದರ್ಶನದಲ್ಲಿ ಮತಭೇದಕ್ಕೆ ಅವಕಾಶವನ್ನು ಕೊಡುವಂತಿಲ್ಲ. **ಅನುಭವ**ವೆಂಬ ಶಬ್ದವನ್ನು ಸಾರ್ವತ್ರಿಕವಾದ ಅನುಭವ ಎಂಬರ್ಥದಲ್ಲಿಯೇ ಉಪಯೋಗಿಸಿರುತ್ತವೆಯಾದ್ದರಿಂದ 'ನನ್ನ ಅನುಭವ ಹೀಗೆ' ಎಂದು ಯಾರೂ ವೈಯಕ್ತಿಕವಾದ ಅನುಭವವನ್ನು ತಂದು ವಿಚಾರಕ್ಕೆ ಅಡ್ಡಿಯಾಗುವದಕ್ಕೆ ಬರುವಂತಿರುವದಿಲ್ಲ. ಇದಿಷ್ಟು ವೇದಾಂತವು ಅನುಸರಿಸಿರುವ ಪ್ರಕ್ರಿಯೆಯ ಮೂಲನಿಯಮಗಳ ವಿಚಾರ.

ಇನ್ನು ವೇದಾಂತವಿಚಾರದ ಪ್ರಕಾರವನ್ನು ಕುರಿತು ಒಂದೆರಡು ಮಾತು ಹೇಳಬೇಕಾಗಿದೆ. ಪೂರ್ವಮೀಮಾಂಸಾಶಾಸ್ತ್ರದಲ್ಲಿಯೂ ತರ್ಕಶಾಸ್ತ್ರಗಳಲ್ಲಿಯೂ ಅಹಂಪ್ರತ್ಯಯಗಮ್ಯನಾದ ಆತ್ಮನನ್ನು ಮಾತ್ರ ಒಪ್ಪಿದೆ; ಅವನು ಒಬ್ಬೊಬ್ಬರಿಗೆ ಒಬ್ಬೊಬ್ಬನೆಂದೂ ಒಪ್ಪಿದೆ. ಹೀಗಿದ್ದರೂ ಆ ಆತ್ಮನು ಅನೇಕರೆಂಬುದು ಯಾರ ಅನುಭವದಲ್ಲಿಯೂ ಇಲ್ಲ. ಮೊದಲನೆಯದಾಗಿ ನಾನು ಎಂಬ ಶಬ್ದಕ್ಕೆ ಬಹುವಚನವೇ ಇರುವಂತಿಲ್ಲ; ಮರವೂ ಮರವೂ ಮರವೂ-ಮರಗಳು ಎಂಬಂತೆ ನಾನೂ ನಾನೂ ನಾನೂ-ನಾವು ಎಂದು ಬಹುವಚನವಾಗಿಲ್ಲ. ನಾನು ಎಂಬ ಸಜಾತೀಯವಸ್ತುಗಳನ್ನು ಕಲ್ಪಿಸುವದಕ್ಕೇ ನಮಗೆ ಶಕ್ಯವಿಲ್ಲ. ಪ್ರತಿಯೊಬ್ಬನೂ ತನ್ನನ್ನು 'ನಾನು' ಎಂದುಕೊಳ್ಳುತ್ತಾನೆ, ಮಿಕ್ಕವರನ್ನೆಲ್ಲ ನೀನು, ಅವನು- ಎನ್ನುತ್ತಿದಾನೆ. ಹೀಗಿದ್ದರೂ ಅಹಂಪ್ರತ್ಯಯಗಮ್ಯರಾದ ಆತ್ಮರು ಅನೇಕರಿದಾರೆಂಬ ನಂಬಿಕೆಯು ಎಲ್ಲರಲ್ಲಿಯೂ ದೃಢವಾಗಿಬಿಟ್ಟಿದೆ. ಇದೇಕೆಂಬುದನ್ನು ಯಾವ ಶಾಸ್ತ್ರಕಾರ

ರೂ ವಿಚಾರಿಸುವದಕ್ಕೆ ಹೋಗಿಲ್ಲ. ವೇದಾಂತದಲ್ಲಿ ಅಹಂಪ್ರತ್ಯಯುಗಮ್ಯ ನಾದ ಆತ್ಮನಿಗಿಂತಲೂ ವ್ಯತಿರಿಕ್ತನಾದ ತದ್ವಿಲಕ್ಷಣನಾದ **ಸಾಕ್ಷಿ** ಎಂಬ ಆತ್ಮನೊಬ್ಬನು ಇರುತ್ತಾನೆಂದೂ ಅವನೇ ನಮ್ಮೆಲ್ಲರ ನಿಜವಾದ ಆತ್ಮನೆಂದೂ ಹೇಳಿರುತ್ತದೆ. ಇದನ್ನು ಅನುಭವಕ್ಕೆ ತಂದುಕೊಳ್ಳುವ ಪ್ರಕಾರವನ್ನು ಈ ಉಪನ್ಯಾಸಮಾಲಿಕೆಯಲ್ಲಿ ಸ್ವಲ್ಪಮಟ್ಟಿಗೆ ವಿವರಿಸಲಾಗಿದೆ. ಅಹಂಪ್ರತ್ಯಯು ಗಮ್ಯನಾದ ಆತ್ಮನು ಈ ನಿಜವಾದ ಆತ್ಮನಿಗೆ ತೀರ ಹತ್ತಿರವಿರುವದರಿಂದಲೂ ಮಿಕ್ಕ ಬಾಹ್ಯವಾದ ಅಧ್ಯಸ್ತಾತ್ಮರುಗಳಿಗಿಂತ ಒಳಗೆ ಇರುವದರಿಂದಲೂ ಸೂಕ್ಷ್ಮನಾಗಿರುವದರಿಂದಲೂ ಇವನಲ್ಲಿಯೇ ಆತ್ಮನೆಂಬ ಬುದ್ಧಿಯು ಜನರಿಗೆ ಉಂಟಾಗಿಬಿಟ್ಟಿರುತ್ತದೆ. ಕೇವಲಚಿದ್ರೂಪನಾಗಿರುವ ಆತ್ಮನೇ ವ್ಯವಹಾರ ದಲ್ಲಿ ಅಸ್ಮತ್ಪ್ರತ್ಯಯುಗೋಚರ ( ನಾನು ಎಂಬ ಅರಿವಿಗೆ ವಿಷಯ )ನಾಗಿ ತೋರುತ್ತಾನೆಂದು ತಿಳಿಸುವದಕ್ಕಾಗಿಯೇ ಆಚಾರ್ಯರು ಸೂತ್ರಭಾಷ್ಯದ ಉಪೋದ್ಘಾತದಲ್ಲಿ **'ಅಸ್ಮತ್ಪ್ರತ್ಯಯುಗೋಚರೇ ವಿಷಯಿಣಿ ಚಿದಾತ್ಮಕೇ'** ಎಂಬ ವಿಶೇಷಣಗಳನ್ನು ಪ್ರಯೋಗಿಸುತ್ತಾರೆ.

ವೇದಾಂತದಲ್ಲಿ ಮಿಕ್ಕ ದರ್ಶನಗಳಲ್ಲಿ ಹೇಳಿರುವ ರೀತಿಯಲ್ಲಿ ಶಾಸ್ತ್ರವು ಪ್ರಮಾಣವಲ್ಲದಿದ್ದರೂ ಶಾಸ್ತ್ರದಿಂದಲೇ ಆತ್ಮನು-ಅವನದಲ್ಲದ ಧರ್ಮಗಳನ್ನು ಅದು ಅಲ್ಲಗಳೆಯುವದರಿಂದ- ತಿಳಿಯಬರುವನೆಂಬ ಕಾರಣದಿಂದ ಅದನ್ನು **ಪ್ರಮಾಣ**ವೆಂದು ಉಪಚಾರಕ್ಕೆ ಕರೆದಿದೆ ಎಂಬುದನ್ನು ನೆನಪಿನಲ್ಲಿಡಬೇಕು. ಹೀಗೆಯೇ ವೇದಾಂತದಲ್ಲಿ ಉಪಯೋಗಿಸುವ ತರ್ಕವು, ಇತರ ಶಾಸ್ತ್ರಗಳಲ್ಲಿ ಉಪಯೋಗಿಸಿರುವ ತರ್ಕದಂತೆ ಅನುಮಾನವೂ ಅಲ್ಲದೆ, ಕೇವಲತರ್ಕವೂ ಅಲ್ಲದೆ ಇದ್ದರೂ- ಅನುಭವದಲ್ಲಿರುವ ವಿಷಯಗಳನ್ನು ಹೊಂದಿಸಿಕೊಂಡು ಶಾಸ್ತ್ರಪ್ರಮಾಣವನ್ನನುಸರಿಸಿ ಆತ್ಮತತ್ತ್ವವನ್ನು ತಿಳಿದುಕೊಳ್ಳುವದಕ್ಕೆ ಅನುಕೂಲವಾಗಿರುವ ಯುಕ್ತಿಯಾದ್ದರಿಂದ- ಅದನ್ನು **ತರ್ಕ**ವೆಂದು ಉಪ ಚಾರಕ್ಕೆ ಕರೆದಿವೆ ಎಂದು ಈವರೆಗಿನ ವಿಚಾರಗಳಿಂದ ಮನವರಿಕೆಮಾಡಿಕೊಡ ಲಾಗಿದೆ. ಉಳಿದ ಶಾಸ್ತ್ರಗಳಲ್ಲಿ ಉದಾಹರಿಸಿರುವ ಇಂದ್ರಿಯಾದ್ಯನುಭವ ಗಳಂತೆ ಜ್ಞೇಯುವಸ್ತುವನ್ನು ವಿಷಯೀಕರಿಸಿ ತಿಳಿಯಿಸದೆ ಇದ್ದರೂ- ನೇರಾದ ಅನುಭವದ ಆಧಾರದಿಂದ ಮಾಡಿದ ತರ್ಕದ ಅಂತ್ಯದಲ್ಲಿ ಹೊಳೆಯುವದಾದ್ದ ರಿಂದಲೂ ಅನುಭವಸ್ವರೂಪವಾದ ಆತ್ಮರೂಪದಿಂದಲೇ ಕೊನೆಯಲ್ಲಿ ತೋರಿ

ಕೊಳ್ಳುವದರಿಂದಲೂ ಆತ್ಮಜ್ಞಾನವನ್ನು '**ಅನುಭವ**' ಎಂದು ಉಪಚಾರಕ್ಕೆ ಕರೆದಿದೆ ಎಂಬುದನ್ನೂ ಹೀಗೆಯೇ ಮನದಟ್ಟು ಮಾಡಿಕೊಳ್ಳಬೇಕು. ಮತ್ತೊಂದು ಅನುಭವದಿಂದ ನಾವು ಆತ್ಮನನ್ನು ಅರಿತುಕೊಳ್ಳುವದಿಲ್ಲ, ಆತ್ಮನು ತನ್ನನ್ನು ತಾನೇ ಅರಿತುಕೊಳ್ಳುತ್ತಾನೆ ಎಂಬುದೇ ಪರಮಾರ್ಥವು. ಈ ಅನುಭವಾತ್ಮನಾದ ಆತ್ಮನಿಂದ ದೀಪ್ತವಾಗಿಯೇ ವ್ಯವಹಾರದಲ್ಲಿ ಮಿಕ್ಕ ಅನುಭವಗಳು ತೋರಿಕೊಳ್ಳುತ್ತಿರುವವು.

ವೇದಾಂತದಲ್ಲಿ ಹೀಗೆ ಅಲೌಕಿಕವಾದ ಅರ್ಥದಲ್ಲಿ ಪ್ರಮಾಣ, ತರ್ಕ, ಅನುಭವ– ಎಂಬ ಶಬ್ದಗಳನ್ನು ಪ್ರಯೋಗಿಸುತ್ತಿರುವದರಿಂದ ಅವುಗಳಿಂದ ಸಿದ್ಧವಾಗುವ ಅದ್ವಿತೀಯತತ್ತ್ವವೂ ಅಲೌಕಿಕವೆಂದೇ ಆಯಿತಲ್ಲ! ಪಾಕ ಶಾಸ್ತ್ರದಲ್ಲಿ ಹೇಳಿರುವ ಷಡ್ರಸಗಳೂ ಅಲ್ಲದ ಬೇರೊಂದು ರಸದ ಅಡುಗೆ– ಎಂದರೆ ಅದು ನೀರಸವೆಂದೇ ಆಗಿಬಿಡುವದಿಲ್ಲವೆ? ಆತ್ಮನು ನಿರ್ಗುಣನು, ನಿರ್ವಿಶೇಷನು–ಯಾವ ಧರ್ಮಗಳೂ ಇಲ್ಲದವನು; ನಾಮ, ಜಾತಿ, ಗುಣ, ಕ್ರಿಯೆ, ಮುಂತಾದ ಯಾವ ವಿಶೇಷಗಳೂ ಇಲ್ಲದವನು–ಎಂದರೆ ಅಂಥ ಆತ್ಮನ ಜ್ಞಾನವಾಗುವದಾದರೂ ನಮ್ಮಂಥವರಿಗೆ ಹೇಗೆ? ಅಥವಾ ಹೇಗೋ ಜ್ಞಾನ ವಾದರೂ ಆ ಜ್ಞಾನದಿಂದ ನಮಗೆ ಆಗುವ ಪ್ರಯೋಜನವಾದರೂ ಏನು?– ಎಂಬ ಪ್ರಶ್ನೆಗಳಿಗೆ ಈಗ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ಆತ್ಮವಸ್ತು ನಿರ್ಗುಣವೇ ಆದರೂ ಲೋಕದಲ್ಲಿರುವ ಎಲ್ಲಾ ಸಗುಣವಸ್ತುಗಳ ಸ್ವರೂಪ ಸ್ಥಿತಿವ್ಯಾಪಾರಗಳೂ ಅದರದ್ದೇ ಎಂದು ವೇದಾಂತವು ಹೇಳುವದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಸ್ತಿಮಿತವಾಗಿರುವ ವಾಯುವೇ ಬಿರುಗಾಳಿಯಾಗಿ ತೋರಿಕೊಳ್ಳುವಂತೆ ನಿರ್ಗುಣವಾಗಿರುವ ಈ **ಆತ್ಮತತ್ತ್ವವೇ ಸಕಲಗುಣ ಗಳಿಗೂ ಆಧಾರ**ವಾಗಿರುವದರಿಂದ ವ್ಯವಹಾರಕ್ಕೆಲ್ಲ ಈ ಆತ್ಮಜ್ಞಾನವು ಪುಷ್ಟಿಯನ್ನು ಕೊಡುತ್ತದೆ. '**ಬೀಜಸ್ಯಾನ್ತರಿವಾಙ್ಕುರಃ**' ಎಂದಿರುವಂತೆ ಜಗತ್ತೆಲ್ಲವೂ ಈ ಆತ್ಮನಲ್ಲಿಯೇ ಅವ್ಯಕ್ತವಾಗಿದ್ದುಕೊಂಡಿದ್ದೇ ಈ ರೂಪದಿಂದ ಹೊರಹೊಮ್ಮಿರುತ್ತದೆ. ಆದ್ದರಿಂದ ಲೋಕದಲ್ಲಿ ಎಲ್ಲೆಲ್ಲಿ ಉತ್ತಮಗುಣ ಕ್ರಿಯೆಗಳು ತೋರುತ್ತಿರುವವೋ ಅಲ್ಲೆಲ್ಲ ಅವು ಆತ್ಮನಿಂದಲೇ ಬಂದವುಗಳಾ ಗಿರುತ್ತವೆ ಎಂದಾಯಿತು. ಆದ್ದರಿಂದಲೇ ಆದರ್ಶಮಾನವನಾಗಿ ಬಾಳಬೇಕೆ ನ್ನುವವನಿಗೆ ಈ ಆತ್ಮತತ್ತ್ವದ ಅನುಸಂಧಾನವು ಅವಶ್ಯವೆಂದಾಯಿತು. ಈ

ದೃಷ್ಟಿಯಿಂದ ನೋಡಿದಾಗ ಮತಸ್ಥಾಪಕರೆಲ್ಲರೂ ಪರಮಾರ್ಥತತ್ತ್ವದ ಒಂದೊಂದು ಪಕ್ಷವನ್ನೇ ಜನರಿಗೆ ಧ್ಯೇಯವಾಗಿಟ್ಟು ಬೋಧಿಸಿರುತ್ತಾರೆಂದಾಗುವದರಿಂದ ಎಲ್ಲಾ ಮತಗಳಲ್ಲಿಯೂ ಇರುವ ಗುಣಾಂಶವನ್ನು ಮೆಚ್ಚುವ **ಮತಸಹಿಷ್ಣುತೆ** ಈ ಜ್ಞಾನದಿಂದ ಬರುತ್ತದೆಯೆಂದೂ ಆಯಿತು.

ಈ ವೇದಾಂತತತ್ತ್ವದ ಆಧಾರದಿಂದ ನೋಡಿದಾಗ ಮತಸ್ಥಾಪಕರು ಮಾಡಿರುವ ಉಪದೇಶಗಳಿಗೆಲ್ಲ ಉಪಪತ್ತಿ ದೊರಕುತ್ತದೆ. ಈಶ್ವರನಿದಾನೆ, ಆತ್ಮನಿದಾನೆ–ಎಂಬುದನ್ನು ಅನೇಕಮತಗಳಲ್ಲಿ ಹೇಳಿವೆ; ಆದರೆ ಅದಕ್ಕೆ ಉಪಪತ್ತಿಯು ಇಲ್ಲಿ ಮಾತ್ರ ದೊರಕುತ್ತದೆ. ನಮ್ಮ ಆತ್ಮನೇ ಈಶ್ವರನು; ಈಶ್ವರನಿಲ್ಲವೆನ್ನುವವನು ತಾನೇ ಇಲ್ಲವೆಂದಾಗುತ್ತಾನೆ– ಎಂದು ಶ್ರುತಿ ಹೇಳುತ್ತಿದೆ. ನಾನೇ ಪರಮಾತ್ಮನೆಂಬುದು ತಟ್ಟನೆ ವಿರುದ್ಧವಾಗಿ ತೋರಿದರೂ ಕಾಲಾಕಾಶಗಳನ್ನು ಮೀರಿ ಸುಷುಪ್ತಿಯಲ್ಲಿ ಬ್ರಹ್ಮದಲ್ಲಿಯೇ ಜೀವರೆಲ್ಲರೂ ಒಂದಾಗುವರೆಂಬ ಅನುಭವಾನುಸಾರಿಶ್ರುತಿಯಿಂದ ಇದು ಸರಿಯೆಂದು ಸಿದ್ಧವಾಗುತ್ತದೆ. ಈಗಲೂ ನಾವು ಪರಮಾತ್ಮಸ್ವರೂಪರೇ ಆಗಿದ್ದರೂ, ಪರಮಾತ್ಮನಿಂದಲೇ ಬಂದಿರುವೆವೆಂಬ ಜ್ಞಾನವಿಲ್ಲದ್ದರಿಂದ ಬೇರೆಬೇರೆಯಾಗಿ ಜೀವರುಗಳಾಗಿ ತೋರುತ್ತಿರುವೆವು– ಎಂಬುದನ್ನು ಅವಸ್ಥಾತ್ರಯಪರೀಕ್ಷೆಯಿಂದ ಶ್ರುತಿಯು ತೋರಿಸಿಕೊಡುತ್ತಿರುವದು. ಮತಾಂತರದಲ್ಲಿ ಹೇಳುವ ಈಶ್ವರನು ಕಾಲಾಕಾಶಗಳನ್ನು ಮೀರದೆ ಇರುವದರಿಂದ ಬಹಳ ದೊಡ್ಡ ಜೀವಮಾತ್ರನೆಂವೇ ಆಗುತ್ತದೆ; ಈಶ್ವರನಿಗೆ ಸಂಸಾರಿತ್ವ, ಅನಿತ್ಯತ್ವ – ಮುಂತಾದ ದೋಷಗಳೂ ಗಂಟುಬೀಳುತ್ತವೆ. ಆದರೆ ವೇದಾಂತದ ಬೆಂಬಲವನ್ನು ತೆಗೆದುಕೊಂಡರೆ ಆ ಮತಗಳು ಹೇಳುವ ಈಶ್ವರತತ್ತ್ವವೂ ಉಪಪತ್ತಿಹೀನವಲ್ಲವೆಂದು ಗೊತ್ತಾಗುತ್ತದೆ. ಹೀಗೆ ಈಶ್ವರತತ್ತ್ವವನ್ನೂ **ಈಶ್ವರನಿಗೂ ಜೀವನಿಗೂ ಇರುವ ನಿಕಟಸಂಬಂಧವನ್ನೂ** ಅನುಭವಕ್ಕೆ ಹೊಂದಿಸಿ ಹೇಳುವ ಶಾಸ್ತ್ರವು ಪ್ರಮಾಣವೆಂಬುದೂ ಯುಕ್ತಿಯುಕ್ತವಾಗುತ್ತದೆ. ಯಾವಯಾವ ಮತಗ್ರಂಥದಲ್ಲಿ ಪರಮೇಶ್ವರನ ಕಲ್ಯಾಣಗುಣಗಳನ್ನೂ ಬಲವೀರ್ಯತೇಜಆದಿಗುಣಗಳನ್ನೂ ಕೊಂಡಾಡಿವೆಯೋ ಅವೆಲ್ಲವೂ ಸಾಧಾರವಾಗಿವೆ ಎಂಬುದನ್ನು ವೇದಾಂತದಿಂದ ಮಾತ್ರ ತೋರಿಸಿಕೊಡುವದು ಸಾಧ್ಯ. ಅದ್ವೈತವೇ ಪರಮಾರ್ಥವಾದರೂ ಅದರಲ್ಲಿ ದ್ವೈತವು ಅವಿದ್ಯೆಯಿಂದ ಕಲ್ಪಿತ

ವಾಗಿದೆ ಎಂದು ಇಲ್ಲಿ ಅಂಗೀಕರಿಸಿರುವದರಿಂದ, ಪರಮಾರ್ಥವನ್ನು ತಿಳಿಯುವವರೆಗೆ ಜೀವನೂ ಪರಮೇಶ್ವರನೂ ಭಿನ್ನನಾಗಿ ತೋರುತ್ತಿದ್ದರೂ ದೇಹೇಂದ್ರಿಯಾಭಿಮಾನದಿಂದ ಅವನು ಮಾಡುವ ಕರ್ಮಫಲವನ್ನು ಅನುಭವಿಸುವದಕ್ಕೆ ಅವನು ಮತ್ತೆಮತ್ತೆ ಶರೀರವನ್ನು ಧರಿಸಲೇಬೇಕೆಂದೂ ಸುಖದುಃಖಗಳನ್ನು ಅನುಭವಿಸುವದಕ್ಕೆ ಸ್ವರ್ಗನರಕಾದಿಗಳೂ ಇರಬೇಕೆಂದೂ **ಜನ್ಮಾಂತರಲೋಕಾಂತರಕರ್ಮಸಿದ್ಧಾಂತ**ಗಳನ್ನು ಯುಕ್ತಿಯಿಂದ ಸಿದ್ಧಪಡಿಸಿದಂತೆ ಆಗುತ್ತದೆ. ಪರಮೇಶ್ವರನು ನಿತ್ಯವೂ ದಯಾಳುವೇ ಆದರೂ ಪರಮೇಶ್ವರತತ್ತ್ವವನ್ನು ತಿಳಿಯದೆ, ತತ್ತ್ವದಿಂದ ಹಿಮ್ಮೆಟ್ಟಿ ಕಾಮಪ್ರೇರಿತರಾಗಿ ಸ್ವೇಚ್ಛೆಯಿಂದ ನಡೆಯುವವರಿಗೆ ಅವರವರ ಕರ್ಮಾನುಗುಣವಾಗಿ ಆಯಾ ದುಷ್ಟಫಲಗಳೇ ಆಗುವವೆಂಬುದು ಯುಕ್ತವಾಗಿರುವದರಿಂದ ಈಶ್ವರನು ಬಗೆಬಗೆಯ ಜೀವರನ್ನು ಸೃಷ್ಟಿಮಾಡುವನೆಂಬ **ವೈಷಮ್ಯ**ವಾಗಲಿ, ಜ್ಞಾನಶಕ್ತಿತಾರತಮ್ಯಗಳುಳ್ಳ ಬೇರೆಬೇರೆಯ ರೀತಿಯ ದುಃಖಪ್ರದಫಲಗಳನ್ನು ಕೊಡುವನೆಂಬ **ನೈರ್ಘೃಣ್ಯ**ವಾಗಲಿ ತಟ್ಟುವಂತಿಲ್ಲ. ಜನರಲ್ಲಿ ಕೆಲವರು ಕಲ್ಲು, ಮರ, ಗೋವು, ಮೂರ್ತಿಗಳು, ಚಿತ್ರ– ಮುಂತಾದವುಗಳನ್ನು ದೇವರೆಂದು ಪೂಜೆಮಾಡಿದರೂ ಹೇಗೆ ಪೂಜೆಮಾಡಿದರೂ ಸರ್ವವ್ಯಾಪಕನೂ ನಿತ್ಯತೃಪ್ತನೂ ಆದ ಪರಮೇಶ್ವರನಿಗೆ **ವಿಗ್ರಹಾರಾಧನೆಯೇ** ಮುಂತಾದ ಅರ್ಚನೆಗಳಿಂದಲೂ ಸಂತೋಷವೇ ಆಗುವದೆಂಬ ತತ್ತ್ವವೂ ಈ ಸಿದ್ಧಾಂತಕ್ಕೇ ಹೊಂದುತ್ತದೆ.

ವೇದಾಂತಜ್ಞಾನದಿಂದ ಮಿಕ್ಕ **ಲೌಕಿಕವಿದ್ಯೆಗಳಿಗೂ ಸಂಗೀತವೇ ಮುಂತಾದ ಕಲೆಗಳಿಗೂ** ಈಶ್ವರನೇ ಗುರಿ, ಈಶ್ವರನೇ ಆಧಾರ– ಎಂಬ ಉಪಸಿದ್ಧಾಂತವೊಂದು ಹೊರಡುತ್ತದೆ. ಆ ವಿದ್ಯೆಗಳನ್ನೂ ಕಲೆಗಳನ್ನೂ ಸದುಪಯೋಗಮಾಡಿಕೊಂಡು ಭಗವತ್ಪ್ರಾಪ್ತಿಗೆ ಸಾಧನವಾಗಿ ಮಾಡಿಕೊಳ್ಳಬೇಕೆಂದೂ ದುರುಪಯೋಗಮಾಡಿಕೊಂಡವರು ಪರಮೇಶ್ವರನಿಂದ ದೂರರಾಗಿ ದುಃಖಕ್ಕೆ ಪಾತ್ರರಾಗುವರೆಂದೂ ಸಿದ್ಧವಾಗುತ್ತದೆ. ಇದರಿಂದ '**ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವಭೂತಾನಾಮ್**' ಎಂಬ ಶ್ರುತಿಯೂ ಪ್ರಮಾಣವೆಂದಾಗುತ್ತದೆ.

ಎಲ್ಲಾ ಜಗತ್ತೂ ಚೇತನಾಚೇತನವಸ್ತುಗಳೂ ಭಗವಂತನ ವಿಭೂತಿಯೇ-ಬ್ರಹ್ಮವೇ ಈ ರೂಪದಿಂದ ಕಾಣುತ್ತಿರುವದು-ಎಂಬ ವೇದಾಂತೋಪದೇಶವನ್ನು ಭಾವಪೂರ್ವಕವಾಗಿ ಮನದಟ್ಟುಕೊಂಡವರಿಗೆ ಜಗತ್ತಿನಲ್ಲಿ ಎಲ್ಲಾ ವಸ್ತುಗಳಲ್ಲಿಯೂ ಗೌರವವೂ ಎಲ್ಲಾ ಭೂತಗಳಲ್ಲಿಯೂ ಹಿತಬುದ್ಧಿಯೂ ಉಂಟಾಗುತ್ತದೆ. **'ಸಂತೋಷಂ ಜನಯೇತ್ ಪ್ರಾಜ್ಞಸ್ತದೇವೇಶ್ವರಪೂಜನಮ್'**- ಎಲ್ಲರಿಗೂ ಸಂತೋಷವನ್ನುಂಟುಮಾಡುವದೇ ಈಶ್ವರಪೂಜೆಯು ಎಂಬ ಸ್ಮೃತ್ಯುಕ್ತಿಯೂ ಸಾಧಾರವಾಗುತ್ತದೆ. **'ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ । ನ ಹಿನಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂ ಗತಿಮ್'॥** (ಎಲ್ಲೆಲ್ಲಿಯೂ ಒಂದೇ ರೂಪದಿಂದ ಇದ್ದುಕೊಂಡಿರುವ ಈಶ್ವರನನ್ನು ಕಂಡುಕೊಂಡವನು ತನ್ನನ್ನು ತಾನು ಹಿಂಸಿಸುವದಿಲ್ಲವಾದ್ದರಿಂದ ಪರಗತಿಯನ್ನು ಹೊಂದುವನು) ಎಂಬ ಗೀತೋಕ್ತಿಯು **ನೀತಿಗೆ ಆಧಾರವಾಗಿರುತ್ತದೆ. 'ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥ ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ । ತತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ '॥** (ಈಶ್ವರನು ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ಇರುತ್ತಾನೆ; ಅವನನ್ನು ಅರಿಯದ್ದರಿಂದಲೇ ಪ್ರಾಣಿಗಳು ಮಾಯೆಯಿಂದ ಮೋಹಿತರಾಗಿ ಸಂಸಾರದಲ್ಲಿ ತೊಳಲುತ್ತಿರುವರು. ಆತನನ್ನೇ ಸರ್ವಭಾವದಿಂದಲೂ ಶರಣುಹೊಂದು; ಅವನ ಪ್ರಸಾದದಿಂದ ಪರಮಶಾಂತಿಯನ್ನು ಹೊಂದುವೆ, ಶಾಶ್ವತವಾದ ಪರಮಪದವನ್ನು ಪಡೆಯುವೆ) ಎಂಬ ಗೀತೋಕ್ತಿಯಂತೆ **ವೈಯಕ್ತಿಕಶಾಂತಿಯೂ ವಿಶ್ವದ ಶಾಂತಿಯೂ** ಸರ್ವರಿಗೂ **ಪರಮಪುರುಷಾರ್ಥವೂ** ಈ ಜ್ಞಾನದಿಂದಲೇ ಲಭಿಸುತ್ತದೆ ಎಂಬುದು ಯುಕ್ತ.

ಹೀಗೆ ಅನೇಕಕಾರಣಗಳಿಂದ **'ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಮ್'**-ಎಲ್ಲಾ ವಿದ್ಯೆಗಳಿಗೂ ಈ ಬ್ರಹ್ಮವಿದ್ಯೆಯು ಪ್ರತಿಷ್ಠೆಯಾಗಿರುತ್ತದೆ- ಎಂದು ಇದನ್ನು ಹೊಗಳಿರುವದು ಯುಕ್ತವೆಂದು ಒಪ್ಪಬೇಕು. ಮಿಕ್ಕ ಮತಗಳಲ್ಲಿರುವ ಎಲ್ಲಾ ವಿಶೇಷಗಳೂ **ಸನಾತನಧರ್ಮ**ದಲ್ಲಿರುವದಕ್ಕೆ

ವೇದಾಂತದ ಆಧಾರವನ್ನು ಅದು ಹಿಡಿದಿರುವದೇ ಕಾರಣವಾಗಿರುತ್ತದೆ. ಪರಮಾತ್ಮತತ್ತ್ವವನ್ನು ತಿಳಿಯುವದಕ್ಕೆಂದೇ ಜೀವವನ್ನು ತೆರುವ **ಬ್ರಾಹ್ಮಣ**, ಪ್ರವೃತ್ತಿನಿವೃತ್ತಿಧರ್ಮಗಳಲ್ಲಿರುವವರನ್ನು ಕಾಪಾಡುವದಕ್ಕೆಂದು ತನ್ನ ಬಲವನ್ನು ವಿನಿಯೋಗಿಸುವ **ಕ್ಷತ್ರಿಯ**, ಜನಸಾಮಾನ್ಯದ ಐಹಿಕಸೌಕರ್ಯಗಳನ್ನು ಸಂಪಾದಿಸಿ ವಾಣಿಜ್ಯದಮೂಲಕ ಹಂಚುವ **ವೈಶ್ಯ**, ತ್ರಿವರ್ಗರನ್ನೂ ತನ್ನ ಸೇವೆಯಿಂದ ತೃಪ್ತಿಗೊಳಿಸಿ ಇಹಪರಸುಖಗಳನ್ನು ಪಡೆಯಬೇಕೆನ್ನುವ **ಶೂದ್ರ**-ಎಂಬ **ವರ್ಣಭೇದಗಳನ್ನೂ** ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥಾಶ್ರಮ, ಸಂನ್ಯಾಸ- ಎಂಬ ಜ್ಞಾನದ ಸೋಪಾನಗಳಾದ **ಆಶ್ರಮಗಳನ್ನೂ** ಸನಾತನಮತದಲ್ಲಿ ಮಾತ್ರವೇ ಅವಲಂಬಿಸಿದ್ದಕ್ಕೆ ಈ ವೇದಾಂತಜ್ಞಾನವೇ ಪ್ರಚೋದಕವಾಗಿದೆ.

ಹೀಗೆ ಸರ್ವವಿಧದಿಂದ ಇಹಪರಸುಖಗಳಿಗೂ ಪರಮಪುರುಷಾರ್ಥಕ್ಕೂ ಕಾರಣವಾಗಿರುವ ಈ ವೇದಾಂತವಿಜ್ಞಾನವು, ಅಥವಾ ಅದನ್ನು ಪಡೆಯುವ ಯೋಗ್ಯತೆಯು, ನಮ್ಮೆಲ್ಲರಿಗೂ ಅಧಿಕಾರಾನುಗುಣವಾಗಿ ಸಿದ್ಧಿಸುವಂತೆ ಅನುಗ್ರಹಿಸಬೇಕೆಂದು ಅನ್ವರ್ಥಜಗದ್ಗುರುಗಳಾದ ಶ್ರೀ ಶಂಕರಭಗವತ್ಪಾದರನ್ನು ನಾವೆಲ್ಲರೂ ಹೃತ್ಪೂರ್ವಕವಾಗಿ ಪ್ರಾರ್ಥಿಸೋಣ !

---

## ೮. ಉಪಸಂಹಾರ

ವೇದಾಂತವೆಂದರೆ ಉಪನಿಷತ್ತುಗಳಲ್ಲಿ ಅಡಕವಾಗಿರುವ ದರ್ಶನ. ಇವರ ಅಭಿಪ್ರಾಯವನ್ನು ಆಚಾರ್ಯರ ಹಿಂದೆಯೂ ಅನೇಕರು ವಿವರಿಸಿ ಭಾಷ್ಯಾದಿಗ್ರಂಥಗಳನ್ನು ಬರೆದಿದ್ದರು. ಅವರೆಲ್ಲರೂ ಅದ್ವೈತಸಿದ್ಧಾಂತವನ್ನೇ ಮುಖ್ಯವಾಗಿ ಅವಲಂಬಿಸಿದ್ದರು. ಆದರೂ ಆಚಾರ್ಯರು ಅವಲಂಬಿಸಿರುವ ಸಂಪ್ರದಾಯದಲ್ಲಿ ಒಂದು ವಿಶೇಷವಿದೆ. ಶ್ರುತಿಯ ಪ್ರಮಾಣವನ್ನು ಕೇವಲ ನಂಬಬೇಕಾಗಿರುವ ಗ್ರಂಥವಾಕ್ಯವೆಂಬ ಆಧಾರದಿಂದ ಮುಂದೊಡ್ಡದೆ ಅನುಭವಾವಸಾನವಾಗಿರುವದರಿಂದ-ಎಂಬ ವಿಚಾರವನ್ನು ಶ್ರೋತೃಗಳ ಮುಂದಿಟ್ಟಿರುವದು, ಶಾಸ್ತ್ರವನ್ನೂ ತರ್ಕವನ್ನೂ ಅನುಭವಕ್ಕೆ ಹೊಂದಿಸಿಯೇ

ಹೇಳಿರುವದು, ಯಾವ ದೇಶಕಾಲಗಳಿಗೂ ಕಟ್ಟುಬೀಳುವಂಥ ಸಾರ್ವತ್ರಿಕಾನುಭವದ ಆಧಾರದಿಂದಲೇ ವೇದಾಂತಸಿದ್ಧಾಂತವನ್ನು ನಿರ್ಣಯಮಾಡಿರುವದು-ಇವೇ ಆಚಾರ್ಯರು ಅನುಸರಿಸಿರುವ **ಅದ್ವೈತಸಂಪ್ರದಾಯದ ವಿಶೇಷಗಳು.**

ಊಟಕ್ಕೆ ಕುಳಿತವರಿಗೆ ಅಮೃತವನ್ನೇ ಆಪ್ರೋಶನಕ್ಕೆ ಹಾಕಿದಂತೆ ಆಚಾರ್ಯರು ತಮ್ಮ ವೇದಾಂತಪ್ರಕ್ರಿಯೆಯನ್ನು ನಮಗೆ ತಿಳಿಸಿಕೊಟ್ಟಿದ್ದಾರೆ. ಮೂರ್ಖರು ತಿಳಿಯದೆ ಅಮೃತವನ್ನು ಅತ್ತಚೆಲ್ಲುವಂತೆ ನಾವು ಅದರಲ್ಲಿ ಅನಾದರಮಾಡುತ್ತಿದ್ದೇ ಆತ್ಮಸ್ವರೂಪವು ಇಲ್ಲಿಯೇ ಈಗಲೇ ಅನುಭವಕ್ಕೆ ಬರುತ್ತಿರುವಲ್ಲಿ ಅದನ್ನು ಬಿಟ್ಟು ಅಜ್ಞಾನದಲ್ಲಿ ಮುಳುಗಬಹುದೆ ? ಅವಿದ್ಯೆಯನ್ನು ಮೆಚ್ಚುವವರು ಅಂಧಂತಮಸ್ಸಿನಲ್ಲಿ ಬೀಳುವರು – ಎಂದು ಶ್ರುತಿ ಸಾರುತ್ತಿದೆ. ವೇದಾಂತವು ಮನುಷ್ಯಾಧಿಕಾರಿಗಳಿಗೆ ಹೇಳಿದ್ದು: ಮಾನವರಿಗೆಲ್ಲ ಈ ಪರಮಾತ್ಮನು ಆತ್ಮನಾಗಿರುತ್ತಾನೆ. ಮನುಷ್ಯನು ಪಶುಗಳಿಗಿಂತ ಹೆಚ್ಚಿನ ವಿವೇಕವುಳ್ಳವನು; ಅವನಿಗೆ ಅಂತರ್ಮುಖತ್ವವಿರುವದಕ್ಕೆ ಅವಕಾಶವಿದೆ. ಆದ್ದರಿಂದ ಆ ವಿವೇಕದ ಸದವಕಾಶವನ್ನು ಸದುಪಯೋಗಪಡಿಸಿಕೊಳ್ಳುವದಕ್ಕಾಗಿ ಈ ಸಿದ್ಧಾಂತವನ್ನು ಚೆನ್ನಾಗಿ ಮನಗಂಡು ಅನುಭವಕ್ಕೆ ತಂದುಕೊಂಡು ಆನಂದಿಸಬೇಕಾದದ್ದು ನಮ್ಮ ಕರ್ತವ್ಯವಾಗಿರುತ್ತದೆ. ಇಂದ್ರಿಯಗಳು ಹೊರಗೆ ಮಾತ್ರ ನೋಡಬಲ್ಲವು, ಪರಿಚ್ಛಿನ್ನ ವಸ್ತುವನ್ನು ಮಾತ್ರ ಕಾಣಬಲ್ಲವು. ಮಹಾತ್ಮನಾದ ಯಾವನೋ ಒಬ್ಬ ಪುಣ್ಯಶಾಲಿಯು ಮಾತ್ರ ಅಂತರ್ಮುಖನಾಗಿ ತನ್ನ ಪ್ರತ್ಯಗಾತ್ಮನ ಸ್ವರೂಪವನ್ನು ಅರಿತು ಅಮೃತತ್ತ್ವವನ್ನು ಪಡೆದುಕೊಳ್ಳುತ್ತಾನೆ.

ಮನುಷ್ಯನಿಗೆ ಭೋಗಕ್ಕೂ ಅಧಿಕಾರವಿದೆ, ತ್ಯಾಗಕ್ಕೂ ಅಧಿಕಾರವಿದೆ. ಕಾಮಕ್ರೋಧಗಳಿಗೆ ಪರವಶನಾಗಿರುವವರೆಗೆ ಮಾತ್ರ ಅವನು ಭೋಗಕ್ಕೆ ಹಾತುವರಿಯುತ್ತಿರುತ್ತಾನೆ. ಆ ಭೋಗಗಳು ದುಃಖಕ್ಕೆ ಕಾರಣವೇ ಎಂದು ಯಾವಾಗ ಅವನಿಗೆ ಮನದಟ್ಟಾಗುವದೋ, ಆಗ ಅವನು ವೈರಾಗ್ಯದಿಂದ ಹಿಮ್ಮೆಟ್ಟಿ ಪ್ರತ್ಯಙ್ಮುಖನಾಗಿ ಆತ್ಮತತ್ತ್ವವನ್ನು ನೋಡುವದಕ್ಕೆ ಪ್ರಯತ್ನಿಸುತ್ತಾನೆ. ಹೀಗೆ ಹಿಮ್ಮೆಟ್ಟುವದೇ ವಿವೇಕಿಗಳಿಗೆ ಕರ್ತವ್ಯವೆಂಬುದನ್ನು **'ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವ**

**ಮಾನಶುಃ'** ಕರ್ಮದಿಂದಲ್ಲ, ಪ್ರಜಾಸಂತತಿಯಿಂದಲ್ಲ, ಧನದಿಂದಲೂ ಅಲ್ಲ, ತ್ಯಾಗದಿಂದ ಬಲ್ಲವರು ಅಮೃತತ್ತ್ವವನ್ನು ಪಡೆದಿರುತ್ತಾರೆ—ಎಂಬ ಶ್ರುತಿಯು ನಮಗೆ ಎಚ್ಚರಿಕೆಕೊಡುತ್ತಿದೆ. ಯಾರು ಈ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳುವರೋ ಅವರು **ಜೀವನ್ಮುಕ್ತರು ;** ಅವರು ಯಾವ ಕರ್ಮವನ್ನು ಮಾಡಿದರೂ ಲೋಕಸಂಗ್ರಹಕ್ಕಾಗಿಯೇ ಮಾಡುತ್ತಿರುವದರಿಂದ ಅವರಿಗೆ ಕರ್ಮಬಂಧವಿರುವದಿಲ್ಲ ; ಏಕೆಂದರೆ ಪರಮಾರ್ಥದೃಷ್ಟಿಯಿಂದ ಅವರು ಏನನ್ನೂ ಮಾಡುವದೂ ಇಲ್ಲ. ಮತ್ತೊಬ್ಬರಿಂದ ಮಾಡಿಸುವದೂ ಇಲ್ಲ.

ಲಲಿತವಾದ ಭಾಷೆಯಿಂದ ತತ್ತ್ವವನ್ನು ಶ್ರುತಿಯುಕ್ತ್ಯನುಭವಸಂಮತವಾಗಿ ಹೃದಯಂಗಮವಾಗುವಂತೆ ತಿಳಿಸಿರುವದನ್ನು ಶಂಕರಭಗವತ್ಪಾದರ ಭಾಷ್ಯದಲ್ಲಿಯೇ ಕಾಣಬೇಕು. ಈ ಜ್ಞಾನದಿಂದ ಸುಖವನ್ನು ಪಡೆಯುವದಕ್ಕೆಂದೇ ಸಂಸ್ಕೃತವನ್ನು ಓದಬೇಕು, ಸದ್ಗುರುಗಳಲ್ಲಿ ಭಾಷ್ಯವನ್ನು ಶ್ರವಣಮಾಡಬೇಕು; ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು.

ಈಗಿನ ಕಾಲದಲ್ಲಿ ಮಾನವರಿಗೆ ಸಂಸಾರದುಃಖವು ಅತ್ಯಂತ ಉಲ್ಬಣವಾಗಿರುತ್ತದೆ; ಅಶಾಂತಿಯೂ ದುಃಖವೂ ತಾಂಡವವಾಡುತ್ತಿವೆ. ಈ ಅನರ್ಥಗಳಿಗೆ ಆತ್ಮಜ್ಞಾನವೊಂದೇ ಪರಿಹಾರ; ಆ ಜ್ಞಾನವು ಆಚಾರ್ಯರ ಉಪದೇಶಗಳಿಂದಲೇ ಲಭ್ಯವಾಗಬೇಕು. ಆದ್ದರಿಂದ ಈ ಆಚಾರ್ಯವರ್ಯರ ಸ್ಮರಣೆಮಾಡುವ ಸುದಿನವು ಲಭಿಸಿದರೆ ಅದೇ ಶುಭದಿನ. ನಾವೆಲ್ಲರೂ ಆ ಮಹನೀಯರನ್ನು 'ಭಗವತ್ಪಾದರವರೆ, ತಮ್ಮ ಸದುಪದೇಶಗಳ ಶ್ರವಣಮನನನಿದಿಧ್ಯಾಸನಗಳಿಂದ ನಾವು ಧನ್ಯರಾಗುವಂತೆ ಅನುಗ್ರಹಿಸಿರಿ !' ಎಂದು ಮನಃಪೂರ್ವಕವಾಗಿ ವಿನಯದಿಂದ ಪ್ರಾರ್ಥಿಸೋಣ !

ಜಯ ಶ್ರೀ ಶಂಕರಭಗವನ್ !

ಶ್ರೀ

## ಕೆಲವು ಗ್ರಂಥಗಳು

( ಹೊಸದಾಗಿ ವೇದಾಂತವಿಚಾರವನ್ನು ಪ್ರಾರಂಭಿಸುವವರಿಗೆ )

೧. **ಅಧ್ಯಾತ್ಮವೆಂದರೇನು ?** (ಅಧ್ಯಾತ್ಮ ಎಂಬ ಮಾತಿನ ವಿವರಣೆ)
೨. **ರಸನಿಮಿಷಗಳು** (ಆನಂದಜೀವನಕ್ಕೆ ಮೆಟ್ಟಿಲಾಗಿರುವ ಸೂಕ್ತಿಗಳು)
೩. **ಶಂಕರಮಹಾಮನನ** (ಆತ್ಮವಿಚಾರದಲ್ಲಿ ಬರುವ ಸಂದೇಹಗಳಿಗೆ ಪರಿಹಾರ)
೪. **ಆತ್ಮಬೋಧ** (ಶ್ರೀ ಶಂಕರಾಚಾರ್ಯರ ಜನಪ್ರಿಯ ಪ್ರಕರಣಗ್ರಂಥ —ಭಾವಾರ್ಥದೊಡನೆ)
೫. **ಉಪನಿಷತ್ತುಗಳ ಮೊದಲನೆಯ ಪರಿಚಯ** (ಕಥಾಸಂದರ್ಭಸಮೇತ)
೬. **ವೇದಾಂತಬಾಲಬೋಧೆ** (ಪ್ರಾತಃಸ್ಮರಣಸ್ತೋತ್ರದ ವ್ಯಾಖ್ಯಾನ)
೭. **ವೇದಾಂತಕಥಾವಳಿ** (ತತ್ತ್ವವಿಚಾರಸಹಿತವಾದ ೨೧ ಕಥೆಗಳು)
೮. **ಸಮುದ್ರಮಥನ** (ಪೌರಾಣಿಕಕಥೆ, ರಹಸ್ಯಾರ್ಥದೊಡನೆ)
೯. **ಗೀತಾಮನನ** (೧೦೧ ಶ್ಲೋಕಗಳಲ್ಲಿ ಗೀತೆಯ ಸಂಗ್ರಹ)
೧೦. **ಗೀತಾ-ಸಾರ್ಥ** (ಟಿಪ್ಪಣಿಗಳೊಡನೆ, ಪಾರಾಯಣ-ಅನುಸಂಧಾನಕ್ಕೆ)

ಪುಸ್ತಕಗಳ ಪೂರ ಬೆಲೆಪಟ್ಟಿಗೆ ಬರೆದುಕೊಳ್ಳಿರಿ

**ಅಧ್ಯಾತ್ಮಪ್ರಕಾಶಕಾರ್ಯಾಲಯ,**

**ಹೊಳೆನರಸೀಪುರ-573211.**

# ಅಧ್ಯಾತ್ಮಪ್ರಕಾಶಕಾರ್ಯಾಲಯ
## ಹೊಳೆನರಸೀಪುರ.

---

## ಈ ಕಾರ್ಯಾಲಯದಿಂದ ಯಾವಯಾವ ಲಾಭವನ್ನು ಪಡೆಯಬಹುದು?

ಕಾರ್ಯಾಲಯದಲ್ಲಿ ಆಗಾಗ್ಗೆ ನಡೆಯುತ್ತಿರುವ ಪೂಜೆ, ಪುರಾಣಶ್ರವಣ, ಉಪನ್ಯಾಸ, ಅನುಷ್ಠಾನಗಳು-ಇವುಗಳನ್ನು ನೋಡಿ ನಲಿಯಬಹುದು.

ಕಾರ್ಯಾಲಯದಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯವಾದ ಗ್ರಂಥಗಳನ್ನು ಕೊಂಡು ಓದಿ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು; ಗ್ರಂಥಗಳನ್ನು ಪ್ರಚಾರಮಾಡಿ ಪುಣ್ಯಭಾಗಿಗಳಾಗಬಹುದು.

ಕಾರ್ಯಾಲಯದಲ್ಲಿ ಪ್ರಕಟವಾಗುವ 'ಅಧ್ಯಾತ್ಮಪ್ರಕಾಶ'ಮಾಸಪತ್ರಿಕೆಗೆ ಚಂದಾದಾರರಾಗಿ ತಿಂಗಳುತಿಂಗಳೂ ಬಗೆಬಗೆಯ ಅಧ್ಯಾತ್ಮಬೋಧೆಯನ್ನು ಪಡೆಯಬಹುದು.

ಕಾರ್ಯಾಲಯದಲ್ಲಿ ಸಿದ್ಧವಾಗುತ್ತಿರುವ ಪುಸ್ತಕಗಳ ಪ್ರಕಟನೆಗೆ ಯಥಾಶಕ್ತಿಯಾಗಿ ಧನಸಹಾಯವನ್ನು ಮಾಡಿ ಮಹಾಪೋಷಕರು ಎನಿಸಿ ಈ ಪ್ರಕಟನೆಗಳ ಪುಸ್ತಕಭಂಡಾರವೊಂದನ್ನು ಏರ್ಪಡಿಸಿಕೊಳ್ಳಬಹುದು.

ಕಾರ್ಯಾಲಯದ ಕಟ್ಟಡಕ್ಕೂ, ಗುರುಮಂದಿರ, ಪೂಜಾಮಂದಿರಕ್ಕೂ ಯಥೋಚಿತವಾಗಿ ಸಹಾಯವನ್ನು ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳಬಹುದು.